

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 18 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 181 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ರಾಜ್ಯದಲ್ಲಿ 13,352 ಶಿಕ್ಷಕರ ನೇಮಕಕ್ಕೆ
ಸುಪ್ರೀಂ ಅಸ್ತು

ನವದೆಹಲಿ, ಅ.17– ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮುಂದುವರಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ.





ದ್ವಿಸದಸ್ಯ ಪೀಠದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಕೆ.ಮಹೇಶ್ವರಿ ಮತ್ತು ವಿಜಯ್ ಬಿಷ್ಣೋಯ್ ಒಳಗೊಂಡ ಪೀಠವು, ನೇಮಕಾತಿ ಪ್ರಕ್ರಿಯೆಯಿಂದ ಉಂಟಾಗುವ ಸೇವಾ ಸಂಬಂಧಿತ ದೂರುಗಳನ್ನು ಪರಿಹರಿಸಲು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ (ಕೆಎಸ್‌ಎಟಿ) ಸೂಕ್ತ ವೇದಿಕೆ ಎಂದು ಹೇಳಿದೆ.

2023ರ ಅ.13ರಂದು ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿದ್ದ ಆಗಿನ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ದ್ವಿಸದಸ್ಯ ಪೀಠ, ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳು ತಮ್ಮ ತಕರಾರನ್ನು ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು ಎಂದು ಸೂಚಿಸಿತ್ತು.

ಈ ಆದೇಶ ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿಜಯ್ ಬಿಷ್ಣೋಯ್ ಅವರು ಏಕ ಸದಸ್ಯ ಪೀಠ ನೀಡಿದ್ದ ತೀರ್ಪನ್ನು ಹೈಕೋರ್ಟ್‌ನ ವಿಭಾಗೀಯ ಪೀಠವು ರದ್ದುಗೊಳಿಸಿದೆ. ಮೇಲ್ಮನವಿಗಳನ್ನು ಭಾಗಶಃ ಅನುಮತಿಸುವಲ್ಲಿ ಮತ್ತು ವಿಷಯವನ್ನು ನ್ಯಾಯಮಂಡಳಿಗೆ ವರ್ಗಾಯಿಸುವ ಸಂದರ್ಭದಲ್ಲಿ ಯಾವುದೇ ಲೋಪ ಎಸಗಿಲ್ಲ ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

ಸೇವಾ ನ್ಯಾಯಮಂಡಳಿಗಳ ವ್ಯಾಪ್ತಿಗೆ ಬರುವ ವಿಷಯಗಳಲ್ಲಿ ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ಹೈಕೋರ್ಟ್‌ಗಳು ರಿಟ್ ಅರ್ಜಿಗಳನ್ನು ಸ್ವೀಕರಿಸಬಾರದು ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಮಂಡಳಿಯ ಅಂತಿಮ ತೀರ್ಪಿಗೆ ಅನುಗುಣವಾಗಿ 500 ಮೀಸಲು ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಪೀಠ ನಿರ್ದೇಶನ ನೀಡಿದೆ.

ಪ್ರಕರಣವೇನು: 35 ಶೈಕ್ಷಣಿಕ ಜಿಲ್ಲೆಗಳಲ್ಲಿ 6ರಿಂದ 8ನೇ ತರಗತಿವರೆಗೆ 13,352 ಶಿಕ್ಷಕರ ನೇಮಕಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆ 2022ರ ಮಾರ್ಚ್ 21ರಂದು ಅಧಿಸೂಚನೆ ಹೊರಡಿಸಿತ್ತು. 2022ರ ಮೇ ತಿಂಗಳಲ್ಲಿ ನಡೆದ ಲಿಖಿತ ಪರೀಕ್ಷೆಯ ಬಳಿಕ ನ.18ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ▶ 6ನೇ ಪುಟಕ್ಕೆ

ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ
1346 ಮಂದಿಗೆ ಉದ್ಯೋಗ ಭಾಗ್ಯ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ 'ಮೈಸೂರು ವಿಭಾಗದ ಮಟ್ಟದ ಉದ್ಯೋಗ ಮೇಳ' ನಡೆಯಿತು.

ಮೈಸೂರು,ಅ.17(ಎಂಕೆ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ 'ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳ'ದಲ್ಲಿ 1,346 ಅಭ್ಯರ್ಥಿಗಳು ವಿವಿಧ ಕಂಪನಿಗಳಲ್ಲಿ ಉದ್ಯೋಗ ಗಿಟ್ಟಿಸಿಕೊಂಡರು. ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ಮಹಾ ನಗರಪಾಲಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ▶ 6ನೇ ಪುಟಕ್ಕೆ

ಕಾವೇರಿ ತೀರ್ಥೋದ್ಭವ...



ಕೊಡಗಿನ ತಲಕಾವೇರಿಯಲ್ಲಿ ಶುಕ್ರವಾರ ಮಧ್ಯಾಹ್ನ 1.45ಕ್ಕೆ ಸರಿಯಾಗಿ ಕಾವೇರಿ ಮಾತೆ ತೀರ್ಥರೂಪಿಣಿಯಾಗಿ ಆವಿರ್ಭವಿಸಿದಳು. ಈ ವೇಳೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂಥರ್ ಗೌಡ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಕೊಡಗು ಜಿಲ್ಲೆ ಅಧ್ಯಕ್ಷ ಧರ್ಮಜ ಉತ್ತಪ್ಪ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಮಾಚಯ್ಯ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಚಿತ್ರನಟ ಭುವನ್ ಪೊನ್ನಣ್ಣ, ಹರ್ಷಿಕಾ ಪೂಣಚ್ಚ ಸೇರಿದಂತೆ ಸಾವಿರಾರು ಭಕ್ತರು ಉಪಸ್ಥಿತರಿದ್ದರು. [ವರದಿ ಪುಟ–8]

ಆರ್‌ಎಸ್‌ಎಸ್ ನಿಷೇಧ ಸಂವಿಧಾನಕ್ಕೆ ವಿರುದ್ಧ
ನಿವೃತ್ತ ನ್ಯಾ.ಸಂತೋಷ ಹೆಗ್ಡೆ ಅಭಿಮತ





ಧಾರವಾಡ, ಅ.17– ಸಂಘಟನೆ ಕಟ್ಟುವ ಅವಕಾಶ ಸಂವಿಧಾನದಲ್ಲಿದೆ. ಆರ್‌ಎಸ್‌ಎಸ್ ನಿಷೇಧಿಸುವುದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಪ್ರತಿಕ್ರಿಯಿಸಿದರು.

ರಾಜ್ಯ ಸರ್ಕಾರ ಆರ್‌ಎಸ್‌ಎಸ್ ನಿಷೇಧಕ್ಕೆ ಮುಂದಾಗಿದೆ ಎಂದು ಸುದ್ದಿಗಾರರು ಕೇಳಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಕಾಂಗ್ರೆಸ್ ನಿಷೇಧಿಸುತ್ತಾರೆ. ಅದು ಅವರ ಆಟ ಎಂದರು.

ಪಿಡಿಒ ಅಮಾನತು: ರಾಜ್ಯದಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳಿಗೆ ಬ್ರೇಕ್ ಹಾಗೂ ಸಂಘದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸರ್ಕಾರಿ ನೌಕರರ ವಿರುದ್ಧದ ಸರ್ಕಾರದ ಕ್ರಮದ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿರುವಂತೆಯೇ ಗಣವೇಷಧಾರಿಯಾಗಿ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಭಾಗಿಯಾದ ಲಿಂಗಸುಗೂರು ತಾಲೂಕಿನ ರೋಡಲಬಂಡಾ ಗ್ರಾಮದ ಪಿಡಿಒ ಪ್ರವೀಣ್‌ಕುಮಾರ್ ಅವರನ್ನು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ.ಅರುಂಧತಿ ಇಲಾಖಾ ತನಿಖೆ ಕಾಯ್ದಿರಿಸಿ ಅಮಾನತು ಮಾಡಿದ್ದಾರೆ.

ಅ.12ರಂದು ಲಿಂಗಸುಗೂರು ಪಟ್ಟಣದಲ್ಲಿ ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನೆಲೆಯಲ್ಲಿ ಪಂಥಸಂಚಲನ ಕಾರ್ಯಕ್ರಮ ನಡೆದಿತ್ತು. ಈ ಪಥಸಂಚಲನದಲ್ಲಿ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಗಣವೇಷ ಧರಿಸಿ ಪ್ರವೀಣ್ ಭಾಗವಹಿಸಿದ್ದರು. ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಉಲ್ಲಂಘನೆ ಹಾಗೂ ಸರ್ಕಾರಿ ನೌಕರನ ತರವಲ್ಲದ ರೀತಿ ನಡೆದುಕೊಂಡಿದ್ದರಿಂದ ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.









ವರ್ಷದಲ್ಲಿ 4 ಬಾರಿ ರಕ್ತದಾನ ಮಾಡಿದರೆ ಆರೋಗ್ಯದ ಮೇಲೆ ಪರಿಣಾಮ ಬೀರದು

ಲಯನ್ಸ್ ಬ್ಲಡ್ ಸೆಂಟರ್ ಜೀವಾಧಾರ ಸಂಸ್ಥೆಯ ಗಿರೀಶ್ ಸಲಹೆ



ಮೈಸೂರಿನ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆದಲ್ಲಿ ವೇಳೆ ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ನೀಡಲಾಯಿತು.

ಮೈಸೂರು, ಅ.17(ಬಿಎಲ್‌ಯು)– ವರ್ಷದಲ್ಲಿ ನಾಲ್ಕು ಬಾರಿ ರಕ್ತದಾನ ಮಾಡಿದರೆ ಆರೋಗ್ಯಕ್ಕೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ, ಈ ಹಿನ್ನಲೆ ಆಗಾಗ್ಗೆ ರಕ್ತದಾನ ಮಾಡುವುದು ಒಳ್ಳೆಯದು ಎಂದು ಲಯನ್ಸ್ ಬ್ಲಡ್ ಸೆಂಟರ್ ಜೀವಾಧಾರ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಲಯನ್ ಗಿರೀಶ್ ಎಸ್.ಇ. ಸಲಹೆ ನೀಡಿದರು.

ಮೈಸೂರಿನ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, ಆಗಾಗ್ಗೆ ರಕ್ತದಾನ ಮಾಡುವುದರಿಂದ ಹೃದಯಾಘಾತ ಸೇರಿದಂತೆ ಹಲವು ಆರೋಗ್ಯ ಸಮಸ್ಯೆ ದೂರವಾಗುತ್ತದೆ ಎಂದು ಹೇಳಿದರು.

ಭಾರತದಲ್ಲಿ ಶೇಕಡ 18ರಿಂದ 20ರಷ್ಟು ರಕ್ತದ ಕೊರತೆ ಇದೆ. ಆದರೆ ಮೈಸೂರಿನಲ್ಲಿ ರಕ್ತಕ್ಕೆ ಕೊರತೆ ಇಲ್ಲ ಎಂದು ಗಿರೀಶ್ ತಿಳಿಸಿದರು.

ಇಡೀ ವಿಶ್ವದಲ್ಲಿ ಯಾವುದೇ ವಸ್ತುವಿಗೆ ಪರ್ಯಾಯವಾಗಿ ಮತ್ತೊಂದು ವಸ್ತು ತಯಾರು ಮಾಡಬಹುದು. ಆದರೆ ರಕ್ತಕ್ಕೆ ಯಾವುದೇ ರೀತಿಯ ಪರ್ಯಾಯವಿಲ್ಲ. ಮನುಷ್ಯನಿಗೆ ರಕ್ತದ ಕೊರತೆ ಇದ್ದಾಗ ಬೇರೊಬ್ಬ ವ್ಯಕ್ತಿಯಿಂದ ರಕ್ತ ಪಡೆದು ನೀಡಬೇಕು. ಈ ಹಿನ್ನೆಲೆ ರಕ್ತ ಬಹಳ ಅವಶ್ಯಕ. ಈ ನಿಟ್ಟಿನಲ್ಲಿ ಅವಶ್ಯಕತೆ ಇದ್ದವರಿಗೆ ಯಾವುದೇ ಭಯವಿಲ್ಲದೆ ರಕ್ತದಾನ ಮಾಡಿ ಎಂದು ಗಿರೀಶ್ ಸಲಹೆ ನೀಡಿದರು.

ಕಾವೇರಿ ಪ್ರಥಮ ದರ್ಜೆ ಕಾಲೇಜಿನ ಆಡಳಿತಾಧಿಕಾರಿ ಡಾ.ಸಿ.ಇ.ಸುಬ್ರಹ್ಮಣ್ಯ, ಪ್ರಾಂಶುಪಾಲರಾದ ಕೆ.ಎಂ.ಪದ್ಮಾವತಿ, ಕಾವೇರಿ ಎಜುಕೇಷನ್ ಕೌನ್ಸಿಲ್ ಅಧ್ಯಕ್ಷ ಎಂ.ಎ.ನವೀನ್ ಚಂದ್ರ, ಲಯನ್ ಬ್ಲಡ್ ಸೆಂಟರ್ ಜೀವಾಧಾರದ ಎಕ್ಸಿಕ್ಯೂಟಿವ್ ಟ್ರಸ್ಟಿ ಲಯನ್ ಮುತ್ತಣ್ಣ ಸಿ.ಜೆ. ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸರ್ಕಾರಿ ಹುದ್ದೆಗಳ ನೇಮಕಾತಿ ಆದೇಶ ಹೊರಡಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು ವಿವಿಯ ಮಾನಸಗಂಗೋತ್ರಿ ಆವರಣದಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಅ.17(ಎಂಕೆ)– ಕೇಂದ್ರ ಮತ್ತು ರಾಜ್ಯ ಸರ್ಕಾರಿ ಹುದ್ದೆಗಳ ನೇಮಕಾತಿ ಆದೇಶ ಹೊರಡಿಸುವಂತೆ ಆಗ್ರಹಿಸಿ ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದಲ್ಲಿ ವಿದ್ಯಾರ್ಥಿಗಳು ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ಮಾನಸಗಂಗೋತ್ರಿಯ ಕ್ಲಾಕ್ ಟವರ್ ಸುತ್ತಲೂ ಜಮಾಯಿಸಿದ ನೂರಾರು ವಿದ್ಯಾರ್ಥಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಪ್ರಧಾನಿ ನರೇಂದ್ರ ಮೋದಿಯವರು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿ 11 ವರ್ಷ ಕಳೆದರೂ 20 ಲಕ್ಷಕ್ಕಿಂತ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಉದ್ಯೋಗ ನೀಡುತ್ತೇವೆ ಎಂದು ಹೇಳಿ ವಿದ್ಯಾರ್ಥಿಗಳನ್ನು, ನಿರುದ್ಯೋಗಿ ಯುವ ಸಮೂಹವನ್ನು ವಂಚಿಸಿದ್ದಾರೆ ಎಂದು ಕಿಡಿಕಾರಿದರು.

ಹಾಗೆಯೇ ರಾಜ್ಯ ಸರ್ಕಾರ ಖಾಸಗಿ ಸಂಸ್ಥೆಗಳನ್ನು ಜೋಡಿಸಿಕೊಂಡು ಉದ್ಯೋಗ ಮೇಳ ಮಾಡುತ್ತಿದ್ದೆಯೇ ಹೊರತು ಸರ್ಕಾರಿ ನೇಮಕಾತಿ ಆದೇಶಗಳನ್ನು ಹೊರಡಿಸುತ್ತಿಲ್ಲ. ಖಾಸಗಿ ಕಂಪನಿಗಳ ಬ್ರೋಕರ್ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಆಕ್ರೋಶ ಹೊರಹಾಕಿದರು. ಮೈಸೂರು ವಿವಿ ಸಂಶೋಧಕರ ಸಂಘದ ಮಾಜಿ ಅಧ್ಯಕ್ಷ ಶಿವಶಂಕರ್, ವಿದ್ಯಾರ್ಥಿಗಳಾದ ಪ್ರದೀಪ್ ಮುಮ್ಮಡಿ, ವಿಶ್ವಪ್ರಸಾದ್, ಪುನೀತ್ ಆಲನಹಳ್ಳಿ, ಕೃಷ್ಣ, ಗೌತಮ್, ರಮ್ಯಾ, ಸ್ನೇಹ ಜಯ, ಮಮತಾ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದೇವೇಗೌಡರ ಆಶೀರ್ವಾದ ಪಡೆದ ರಿಷಬ್



'ಕಾಂತಾರ' ನಿರ್ದೇಶಕ ರಿಷಬ್ ಶೆಟ್ಟಿ ಗುರುವಾರ ರಾತ್ರಿ ಮಾಜಿ ಪ್ರಧಾನಿ ದೇವೇಗೌಡರನ್ನು ಬೆಂಗಳೂರಿನ ಪದ್ಮನಾಭನಗರದ ಅವರ ನಿವಾಸದಲ್ಲಿ ಭೇಟಿಯಾಗಿ, ಆರೋಗ್ಯ ವಿಚಾರಿಸಿದರು. 'ಇದು ಬರೀ ಭೇಟಿಯಲ್ಲ, ನಮ್ಮ ನಾಡಿನ ಹಿರಿಯ ಚೇತನದೊಂದಿಗಿನ ಒಂದು ಸುಂದರ ಸಂವಾದ. ದೇಶದ ಅತ್ಯುನ್ನತ ಸ್ಥಾನಕ್ಕೆ ಏರಿ, ಕನ್ನಡಿಗರ ಕೀರ್ತಿಯನ್ನು ಹೆಚ್ಚಿಸಿದ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೇಗೌಡರ ಆಶೀರ್ವಾದ ಪಡೆದ ಕ್ಷಣಗಳು. ಅವರ ಅನುಭವದ ಮಾತುಗಳು ಮತ್ತು ಪ್ರೀತಿಯ ತಲೆದಡವು, ನನಗೆ ಮತ್ತಷ್ಟು ಶಕ್ತಿ ತುಂಬಿದೆ. ಈ ಪ್ರೀತಿ, ಆಶೀರ್ವಾದ ಸದಾ ಇರಲಿ' ಎಂದು ರಿಷಬ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ನೇಮಕ



ಮೈಸೂರು, ಅ.17– ಚಿತ್ರದುರ್ಗದ ತನುಶ್ರೀ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲಾ ವೇದಿಕೆ ಮೈಸೂರು ವಿಭಾಗೀಯ ಸಂಚಾಲಕರಾಗಿ ಮೈಸೂರಿನ ಪರಮೇಶ ಕೆ.ಉತ್ತನಹಳ್ಳಿ ಅವರನ್ನು ನೇಮಕ ಮಾಡಲಾಗಿದೆ.

ಮೌನ ಮೆರವಣಿಗೆ



ಮೈಸೂರಲ್ಲಿ ಬಲೂನ್ ಮಾರಾಟಕ್ಕಾಗಿ ಬಂದು ಅತ್ಯಾಚಾರ, ಹತ್ಯೆಗೀಡಾದ ಬಾಲಕಿಗೆ ನ್ಯಾಯ ದೊರಕಿಸುವಂತೆ ಆಗ್ರಹಿಸಿ ಭಾರತೀಯ ವಿದ್ಯಾಭವನ ಶಾಲೆ ವಿದ್ಯಾರ್ಥಿಗಳು ಶಾಲೆಯಿಂದ ಮಾತೃಮಂಡಳಿ ವೃತ್ತದವರೆಗೆ ಮೌನ ಮೆರವಣಿಗೆ ನಡೆಸಿದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಅ.17–ಕುಪ್ಪೇಗಾಲ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಅ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯುವರೆಗೆ ಹೊಸಹಳ್ಳಿ, ಕುಪ್ಪೇಗಾಲ, ಯಡಕೊಳ, ಶ್ರೀನಿವಾಸಪುರ, ಸಿದ್ದರಾಮನಹುಂಡಿ, ಕಡುವೆಕಟ್ಟೆಹುಂಡಿ, ಇನ್ನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಟಿ.ನರಸೀಪುರ ಮುಖ್ಯರಸ್ತೆ, ಜಾಗ್ವರ್ ಸಿಮೆಂಟ್ ಫ್ಯಾಕ್ಟರಿ, ರಾಜಶ್ರೀ ಇಂಡಸ್ಟ್ರಿಸ್ ಹಗನಾಥಪುರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬ ರಾಜಿನಲ್ಲಿ ವ್ಯತ್ಯಯಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಎಡಿಜಿಪಿ ಚಂದ್ರಶೇಖರ್‌ಗೆ ಬೆದರಿಕೆ: ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿಗೆ ಬಿಗ್ ರಿಲೀಫ್



ನವದೆಹಲಿ, ಅ.17– ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿರುವ ಆರೋಪ ಹೊತ್ತಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧದ ತನಿಖೆಗೆ ತಡೆ ನೀಡಿರುವ ಹೈಕೋರ್ಟ್‌ನ ಮಧ್ಯಂತರ ಆದೇಶ ರದ್ದುಗೊಳಿಸಬೇಕು ಎಂದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಪೀಠವು, ರಾಜಕೀಯ ಹೋರಾಟಗಳಿಗೆ ನ್ಯಾಯಪೀಠವನ್ನೇಕೆ ವೇದಿಕೆ ಮಾಡಿಕೊಳ್ಳುತ್ತೀರಿ ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ಆಗ ರಾಜ್ಯ ಸರ್ಕಾರದ ಪರ ವಕೀಲರು, ಅಕ್ರಮ ಗಣಿಗಾರಿಕೆಗೆ ಒಪ್ಪಿಗೆ ಕೊಟ್ಟ ಪ್ರಕರಣದಲ್ಲಿ ಕುಮಾರಸ್ವಾಮಿ ವಿರುದ್ಧ 2011ರಲ್ಲಿ ದೂರು ದಾಖಲಾಗಿತ್ತು. ನ್ಯಾಯಾಲಯದ ಸೂಚನೆ ಮೇರೆಗೆ 2014ರಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಇದು ಆ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಹೇಳಲು ಮುಂದಾದರು. ಆಗ ಸಿಜೆಐ ಅವರು 'ಅರ್ಜಿ ವಜಾಗೊಳಿಸಲಾಗಿದೆ' ಎಂದು ಪ್ರಕಟಿಸಿದರು.

ಎನ್‌ಡಿಆರ್‌ಎಫ್ ಮಾನದಂಡದಂತೆ ಬೆಳೆ ನಷ್ಟ ಪರಿಹಾರಕ್ಕೆ ಆಗ್ರಹ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ರೈತರ ಸಭೆ ನಡೆಯಿತು.

ಮೈಸೂರು, ಅ.17(ಬಿಎಲ್‌ಯು)– ಎನ್‌ಡಿಆರ್‌ಎಫ್ ಮಾನದಂಡದಂತೆ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಅ.24ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅಥಿತಿ ಗೃಹದಲ್ಲಿ ಇಂದು ರೈತರ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಡಿಆರ್‌ಎಫ್ ಮಾನದಂಡದಂತೆ ಪರಿಹಾರ ನೀಡಲು ವೈಜ್ಞಾನಿಕ ಬೆಲೆ ನಿಗದಿ ಆಗಿಲ್ಲ. ಈ ಹಿನ್ನೆಲೆ ಕೇಂದ್ರ ಸರ್ಕಾರ ತಿದ್ದುಪಡಿ ತಂದು ಪರಿಹಾರ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಗುಲ್ಬರ್ಗಾದಲ್ಲಿ ಡಿಸೆಂಬರ್ 23ರಂದು ರಾಜ್ಯ ಮಟ್ಟದ ರೈತ ಸಮಾವೇಶ ಆಯೋಜಿಸಲಾಗುವುದು. ಆ ವೇಳೆ 10 ಕೃಷಿ ಸಾಧಕರನ್ನು ಐಎಎಸ್ ಪದವಿ ನೀಡಿ ಗೌರವಿಸಲಾಗುವುದು ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು.

ಹಸಿರು ಸೇನೆ ರಾಜ್ಯಾಧ್ಯಕ್ಷ ಕರಬಸಪ್ಪಗೌಡ, ಮಹೇಶ್ ಬೆಳಗಾಂವ್ಕರ್, ಬಸವರಾಜ್ ಪಾಟೀಲ್, ಅತ್ತಹಳ್ಳಿ ದೇವರಾಜ್, ರಮೇಶ್ ಉಗಾರ್, ಪರಶುರಾಮ್ ಎತ್ತಿನಗುಡ್ಡ, ಎಸ್.ಪಿ.ಸಿದ್ನಾಳ್, ತುಮಕೂರು ಶಿವಕುಮಾರ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪತ್ನಿ ಹತ್ಯೆಗೈದ ಪತಿ ಸೆರೆ



ಮೈಸೂರು, ಅ.17–ಮೈಸೂರು ತಾಲೂಕು ಜಟ್ಟಿಹುಂಡಿಯಲ್ಲಿ ಪತ್ನಿಯ ಕತ್ತು ಕೊಯ್ದು ಹತ್ಯೆ ಮಾಡಿ ಪರಾರಿಯಾಗಿದ್ದ ಆರೋಪಿ ದೇವರಾಜುವನ್ನು ಪೊಲೀಸರು ಬಂಧಿಸಿದ್ದಾರೆ.

ಮೈಸೂರು ತಾಲೂಕಿನ ಗೋಪಾಲಪುರ ಗ್ರಾಮದ ದೇವರಾಜು (49), ಗುರುವಾರ ಬೆಳಗ್ಗೆ ಜಟ್ಟಿಹುಂಡಿ ಸಮೀಪದ ಕ್ರಿಶ್ಚಿಯನ್ ವೃದ್ಧಾಶ್ರಮವೊಂದರ ಬಳಿ ತನ್ನ ಪತ್ನಿ ಸವಿತಾ(37) ಅವರನ್ನು ಬರ್ಬರವಾಗಿ ಹತ್ಯೆ ಮಾಡಿ, ಪರಾರಿಯಾಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಇಲವಾಲ ಠಾಣೆ ಪೊಲೀಸರು, ಶುಕ್ರವಾರ ಬೆಳಗ್ಗೆ ಬಿಳಿಕೆರೆ ಬಸ್ ನಿಲ್ದಾಣದ ಬಳಿ ಆರೋಪಿ ದೇವರಾಜುವನ್ನು ಬಂಧಿಸಿದ್ದಾರೆ.

ನಿತ್ಯ ಕುಡಿದು ಚಿತ್ರಹಿಂಸೆ ನೀಡುತ್ತಿದ್ದ ಕಾರಣ ಪತ್ನಿ ಸವಿತಾ ಆರು ತಿಂಗಳ ಹಿಂದೆ ಮನೆ ತೊರೆದು, ಜಟ್ಟಿಹುಂಡಿ ಬಳಿಯ ಕ್ರಿಶ್ಚಿಯನ್ ವೃದ್ಧಾಶ್ರಮವೊಂದರಲ್ಲಿ ಕೆಲಸ ಮಾಡಿಕೊಂಡು ಅಲ್ಲೇ ವಾಸವಿದ್ದರು. ಈ ನಡುವೆ ಸವಿತಾ, ಪತಿಗೆ ವಿವಾಹ ವಿಚ್ಛೇದನದ ನೋಟಿಸ್ ಸಹ ಕಳುಹಿಸಿದ್ದರು. ಇದರಿಂದ ಕುಪಿತಗೊಂಡಿದ್ದ ದೇವರಾಜು ವೃದ್ಧಾಶ್ರಮದ ಬಳಿ ಹೋಗಿ ಪತ್ನಿಯನ್ನು ಮನೆಗೆ ಬರುವಂತೆ ಒತ್ತಾಯಿಸಿದ್ದ. ಅದಕ್ಕೆ ಒಪ್ಪದಿದ್ದಾಗ ಹತ್ಯೆ ಮಾಡಿ, ಪರಾರಿಯಾಗಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.10.2025 ಶನಿವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್, ಲಕ್ವ/ಪ್ಯಾರಾಲಿಸಿಸ್, ಮೈಗ್ರೇನ್, ಎಲ್ಲಾ ಪ್ರಕಾರದ ತಲೆ ನೋವುಗಳು ಮತ್ತು ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಶ್ರೀ ಪ್ರಜ್ಞಾಗುರುಕುಲ ಸ್ಕೂಲ್ :** ಮಾರಾಥಾನ್ ಡ್ರಾಯಿಂಗ್ ಯೋಗ, ಉದ್ಘಾಟನೆ : ಸಂಸದ ಸುನೀಲ್ ಬೋಸ್, ಮುಖ್ಯ ಅತಿಥಿಗಳು : ಸೀನಿಯರ್ ಅಥ್ಲೀಟ್ ಎನ್.ಬಿ. ಪರಶಿವಮೂರ್ತಿ, ಬಸವ ಮಾರ್ಗ ಸಂಸ್ಥಾಪಕ ಬಸವರಾಜು, ಸೀನಿಯರ್ ಅಥ್ಲೀಟ್ ಆರ್. ಸೇತುರಾಮ್, ಹೆಚ್. ತೇಜ ಸಿದ್ದೇಗೌಡ, ಸರ್ಕಲ್ ಇನ್ಸ್‌ಪೆಕ್ಟರ್ ಮನೋಜ್ ಕುಮಾರ್, ಸ್ಥಳ: ಶ್ರೀ ಪ್ರಜ್ಞಾ ಗುರುಕುಲ ಕಂಚನಹಳ್ಳಿ, ಬನ್ನೂರು, ಬೆಳಗ್ಗೆ 6ಕ್ಕೆ.

■ **ಮೈಸೂರು ಧರ್ಮಪ್ರಾಂತ್ಯದ ಶೈಕ್ಷಣಿಕ ಸೊಸೈಟಿ :** ಬೆಳಗ್ಗೆ 9ಕ್ಕೆ ವಜ್ರ ಮಹೋತ್ಸವದ ಅಂಗವಾಗಿ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ, ಉದ್ಘಾಟನೆ: ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆರ್. ಮಂಜುನಾಥ್; ಮಧ್ಯಾಹ್ನ 1.30ಕ್ಕೆ ಸಮಾರೋಪ ಸಮಾರಂಭ, ಸ್ಥಳ: ಸಂತ ಜೋಸೆಫರ್ ಕೇಂದ್ರೀಯ ಶಾಲೆ, ವಿಜಯನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಎಎಸ್‌ಜಿ ಕಣ್ಣಿನ ಆಸ್ಪತ್ರೆ :** ದೀಪಾವಳಿ ಹಬ್ಬದ ಪ್ರಯುಕ್ತ ಕಣ್ಣಿನ ಉಚಿತ ತಪಾಸಣಾ ಶಿಬಿರ, ಸ್ಥಳ: ಎಎಸ್‌ಜಿ ಕಣ್ಣಿನ ಆಸ್ಪತ್ರೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು :** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಅಖಿಲ ಕರ್ನಾಟಕ ಅನುದಾನಿತ ಶಾಲಾ–ಕಾಲೇಜುಗಳ ನೌಕರರ ಸಂಘ :** ಜಿಲ್ಲಾ ಸಂಘದ ಬಲವರ್ಧನೆಗಾಗಿ ಜಾಗೃತಿ–ಬೃಹತ್ ಸಭೆ, ಉದ್ಘಾಟನೆ : ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ, ಅಧ್ಯಕ್ಷತೆ : ರಾಜ್ಯಾಧ್ಯಕ್ಷ ಜಿ. ಹನುಮಂತಪ್ಪ, ವಿಶೇಷ ಆಹ್ವಾನಿತರು : ಕಾಂಗ್ರೆಸ್ ಮುಖಂಡ ಎಂ. ಲಕ್ಷ್ಮಣ, ಡಾ.ಶರತ್‌ಕುಮಾರ್, ಸ್ಥಳ: ಬನುಮಯ್ಯ ವಿದ್ಯಾಸಂಸ್ಥೆ, ಬೆಳಗ್ಗೆ 10.15ಕ್ಕೆ.

■ **ರುದ್ರಾಕ್ಷಿ ಸಂಸ್ಥೆ :** ದೀಪಾವಳಿ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡ್, ಜೆಎಸ್‌ಎಸ್ ಆಸ್ಪತ್ರೆ ಎದುರು, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸ್ನಾತಕೋತ್ತರ ವಿಭಾಗ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಚಿಂತಕ ಟಿ.ಎನ್. ಸೀತಾರಾಂ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ.ಸಾಂಬಶಿವಯ್ಯ, ಮುಖ್ಯ ಅತಿಥಿಗಳು : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಪ್ರಾಚಾರ್ಯರಾದ ಡಾ. ಎಂ. ಪ್ರಭು, ಸ್ಥಳ: ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ದುರ್ಗಾ ಫೌಂಡೇಷನ್ :** ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅರಮನೆ ಸಮೂಹ ದೇವಾಲಯಗಳ ಅರ್ಚಕರು ಹಾಗೂ ಎಲ್ಲಾ ಸಿಬ್ಬಂದಿಗಳಿಗೂ ದೀಪಾವಳಿ ಹಬ್ಬದ ಪ್ರಯುಕ್ತ ಮಣ್ಣಿನ ದೀಪ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಮಾಜ ಸೇವಕ ಕೆ. ರಘುರಾಮ್ ವಾಜಪೇಯಿ, ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪ, ಉಪ ಕಾರ್ಯದರ್ಶಿ ಎಂ. ಬಸವರಾಜು, ವಿಕ್ರಂ ಅಯ್ಯಂಗಾರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ರಾಜ್ಯ ಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯ ಮುಖ್ಯಮಂತ್ರಿ ಕಪ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಚಿವ ಕೆ. ವೆಂಕಟೇಶ್, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಕೆ. ಹರೀಶ್ ಗೌಡ, ಟಿ.ಎಸ್. ಶ್ರೀವತ್ಸ, ಡಾ. ಡಿ. ತಿಮ್ಮಯ್ಯ, ಕೆ. ಶಿವಕುಮಾರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 11.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮೈಸೂರು ವಿವಿ ಸಮ ಕುಲಾಧಿಪತಿ ಡಾ. ಎಂ.ಸಿ. ಸುಧಾಕರ್, ಶ್ರೀಮತಿ ಡಿ. ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಡಾ. ಜೆ. ಸೋಮಶೇಖರ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮಧ್ಯಾಹ್ನ 12ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** ಕಲೆಮನೆ ಸಹೋದರಿಯರಾದ ಕೆ.ಎಂ. ಲೇಖಾ, ಕೆ.ಎಂ. ನಿಧಿ ಅವರಿಂದ ಗುರುವಂದನಾ ಭರತನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಎ.ವಿ. ನಾರಾಯಣಸ್ವಾಮಿ, ಕರ್ನಾಟಕ ಕಲಾಶ್ರೀ ವಿ ನಂಜುಂಡಸ್ವಾಮಿ ದಂಪತಿ, ಡಾ. ವಿ ರಂಗನಾಥ್ ದಂಪತಿ, ಮಹಾಕವಿ ಸುಬ್ರಹ್ಮಣ್ಯ ಭಾರತೀಯರ ಮೊಮ್ಮಗರಾದ ರಾಜಕುಮಾರ್ ಭಾರತಿ, ಮಧುರೈ ಆರ್ ಶಂಕರ್ ಪ್ರಸಾದ್ ದಂಪತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಡಾ ಪಿ ಪದ್ಮಪ್ರಿಯ ಮಣಿಕಂಠನ್ ದಂಪತಿ, ಪ್ರಾಧ್ಯಾಪಕರಾದ ಶ್ರೀಮತಿ ಸುಮಿತ್ರ ಬಾಯಿ, ಸೀತಾರಾಮ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರಾಧ್ಯಾಪಕರಾದ ಮಹಾಜಬೀನ್, ವಿದುಷಿ ಲಲಿತಾ ರಾವ್, ವಿದ್ವಾನ್ ಗ.ನಾ. ಭಟ್, ರಂಗನಾಥ ಮೈಸೂರು, ಬಾಲಕೃಷ್ಣಯ್ಯ, ಡಾ ಜಮುನಾ ರಾಣಿ ವಿ ಮಿರ್ಲೆ, ಸ್ಥಳ: ಕಲೆಮನೆ ಸಭಾಂಗಣ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 902, ಕಥೆ ಹೇಳುವವರು: ಬಿ. ಬಾಲಕೃಷ್ಣಯ್ಯ, ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಇಲಾಖೆ, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಸಾಧನ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಶರಣ ಸಾಹಿತ್ಯ ಪರಿಷತ್ತು, ನಗರ ಘಟಕ :** ದತ್ತಿ ಕಾರ್ಯಕ್ರಮ, ಉಪನ್ಯಾಸಕಿ ಡಾ. ಕೆ. ಮಾಲತಿ ಅವರಿಂದ ಶರಣೆಯರ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ಉಪಸ್ಥಿತರು : ಎಂ.ಸಿ. ಪ್ರಭಾಮಣಿ, ಸ್ಥಳ: ಶಿವಶ್ರೀ ವಿದ್ಯಾರ್ಥಿನಿಯರ ನಿಲಯ, ಕೆ.ಆರ್. ಮೊಹಲ್ಲಾ, ಸಂಜೆ 5ಕ್ಕೆ

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಯುವ ಸೌರಭ–ನೂತನ ಮಾಲಿಕೆ, ಮುಖ್ಯ ಅತಿಥಿಗಳು : ಮೃದಂಗ ಕಲಾವಿದ ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ, ವಿದ್ವಾನ್ ಆರ್. ರಘುರಾಮ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ವಯೋಲಿನ್, ವಿದ್ವಾನ್ ಆನೂರು ವಿನೋದ್ ಶ್ಯಾಮ್–ಮೃದಂಗ, ವಿದ್ವಾನ್ ಸುಮುಖ್ ಕಾರಂತ್ – ಖಂಜಿರ, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಬಲ್ಸ್ ಆಫ್ ಶ್ರೀರಾಮಕೃಷ್ಣ–10 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 154ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಲಯ ರಾಗ ಸಮರ್ಪಣಂ– 'ಸ್ತ್ರೀ ತಾಳ ತರಂಗ' ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಸುಕನ್ಯಾ ರಾಮಗೋಪಾಲ್ ಅವರಿಂದ ಘಟ ತರಂಗ ಮತ್ತು ಕೊನ್ನಕೋಲ್, ವಿದುಷಿ ಶ್ರೀವಿದ್ಯಾ ರಾಮನಾಥ್ ಅವರಿಂದ ಹಾಡುಗಾರಿಕೆ, ವಿದುಷಿ ವಾಣಿ ಮಂಜುನಾಥ್–ಕೊಳಲು, ವಿದುಷಿ ಲಕ್ಷ್ಮೀ ರಾಜಶೇಖರ್–ಮೃದಂಗ, ವಿದುಷಿ ಭಾಗ್ಯಲಕ್ಷ್ಮೀ ಎಂ. ಕೃಷ್ಣ – ಮೋರ್ಸಿಂಗ್, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದ್ವಾನ್ ನಿಶಾಂತ್ ಬೆಂಗಳೂರು ಅವರಿಂದ ಗಾಯನ, ವಿದುಷಿ ಕೃತಿಕ್ ಕೌಶಿಕ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಕೆ.ಎಂ. ಲಿಖಿತ್–ಮೋರ್ಚಿಂಗ್, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಎಂ.ಜಿ. ರಂಗನಾಥ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.

■ **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ದತ್ತಪ್ರಸಾದ್ ಅವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಪ್ರಣವ್ ಸುಬ್ರಮಣ್ಯ–ಮೃದಂಗ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಕೆ.ಟಿ.ಉದಯ ಕಿರಣ್, ವ್ಯಾಖ್ಯಾನ–ಡಾ.ಜ್ಯೋತಿಶಂಕರ್, 6.50 ರೈತರಿಗೆ ಸಲಹೆ, 7.15 ಮನೆ ಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ.ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ.ಮೈಸೂರು ಉಮೇಶ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಅದೇ ಮನುಷ್ಯ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ. ಪ್ರಭು ಅವರು ನಡೆಸಿದ್ದ ಸಂವಾದದ ನಾಲ್ಕನೇ ಭಾಗ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಹಾಗೂ ಪ್ರಾಣಿ ತ್ಯಾಜ್ಯಗಳಿಂದ ಕರಕುಶಲ ವಸ್ತುಗಳ ತಯಾರಿಕೆ ಕುರಿತು ಸಂವಾದ ಭಾಗವಹಿಸುತ್ತಾರೆ– ಗದಗ್ ಜಿಲ್ಲೆ ಲಕ್ಷ್ಮೇಶ್ವರದ ದವಳಪ್ಪ ಸಾತ್ ಪುತೆ ಮತ್ತು ಅವರ ಮಗಳು ಸಹನಾ ದವಳಪ್ಪ ಸಾತ್ ಪುತೆ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪ್ರಿಯಾಂಕ ಮಲ್ಲಿಕ್, ತುಮರಿ – ದಾದ್ರ

ಇಂದು ಡಾ. ಬಿ.ಆರ್.ಅಂಬೇಡ್ಕರ್ ಕೇಂದ್ರದ ರಜತ ಮಹೋತ್ಸವ



ಸಿದ್ದರಾಮಯ್ಯರಿಂದ ಉದ್ಘಾಟನೆಯಾಗಲಿರುವ ನೂತನ ಜ್ಞಾನದರ್ಶನ ಕಟ್ಟಡ ನೋಟ

ಮೈಸೂರು, ಅ.17(ಎವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ವಿಸ್ತರಣಾ ಕೇಂದ್ರದ ವತಿಯಿಂದ ನಿರ್ಮಿಸಲಾಗಿರುವ ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡದ ಉದ್ಘಾಟನೆಯನ್ನು ಶನಿವಾರ (ಅ.18) ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ.

ನಾಳೆ ಮಧ್ಯಾಹ್ನ 12 ಗಂಟೆಗೆ ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ಹೆಚ್ಚುವರಿ ಕಟ್ಟವನ್ನು ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ವಿಶ್ವಜ್ಞಾನಿ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ವಿವಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸಹಯೋಗದಿಂದ ಸುಮಾರು 2.50 ಕೋಟಿ ವೆಚ್ಚದಲ್ಲಿ ಈ ಕಟ್ಟಡ ನಿರ್ಮಿಸಲಾಗಿದ್ದು, ನೆಲಮಾಳಿಗೆಯಲ್ಲಿ ತರಗತಿ ಕೊಠಡಿಗಳು, ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಥಳ, ಗ್ರಂಥಾಲಯವನ್ನು ಒಳಗೊಂಡಿದೆ. ಮೇಲಂತಸ್ತಿನಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಗಳು, ವಿಶೇಷ ಘಟನೆಗಳನ್ನೊಳಗೊಂಡ ಭಿತ್ತಿಚಿತ್ರಗಳು, ಅವರ ವಿಶೇಷ ಬರವಣಿಗೆಗಳನ್ನು ಸಂಗ್ರಹಿಸಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ವಿವಿ ಕುಲಪತಿ ಪ್ರೊ. ಕೆ.ಎಸ್. ಲೋಕನಾಥ್, ರಿಜಿಸ್ಟ್ರಾರ್ ಕೆ.ಎಸ್.ಸವಿತಾ, ಅಂಬೇಡ್ಕರ್ ಕೇಂದ್ರದ ಮುಖ್ಯಸ್ಥ ನರೇಂದ್ರ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ ಎಂದು ಡಾ. ಅಂಬೇಡ್ಕರ್ ಕೇಂದ್ರದ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಮಾಹಿತಿ ನೀಡಿದ್ದಾರೆ.

ಇಂದಿನಿಂದ ಮೈಸೂರಲ್ಲಿ ಪಟಾಕಿ ಮಾರಾಟ





ಮೈಸೂರಿನ ಜೆ.ಕೆ.ಗ್ರೌಂಡ್‌ನಲ್ಲಿ ತೆರೆದಿರುವ ಪಟಾಕಿ ಮಳಿಗೆಗಳು. ಮತ್ತೊಂದು ಚಿತ್ರದಲ್ಲಿ ದೀಪಾವಳಿ ಹಿನ್ನೆಲೆಯಲ್ಲಿ ಮೈಸೂರಿನ ದೇವರಾಜ ಮಾರುಕಟ್ಟೆ ಬಳಿ ವಿನೋಬಾ ರಸ್ತೆಯಲ್ಲಿ ವೈವಿಧ್ಯಮಯ ಅಲಂಕಾರಿಕಾ ವಿದ್ಯುತ್ ದೀಪಗಳು, ಬಗೆ ಬಗೆಯ ಹೂ ತೋರಣಗಳ ಮಾರಾಟಕ್ಕಿಟ್ಟಿರುವುದನ್ನು ಕಾಣಬಹುದು

ಮೈಸೂರು, ಅ.17– ದೀಪಾವಳಿಯಲ್ಲಿ ಹಣತೆ ಬೆಳಗುವುದರ ಜೊತೆಗೆ ಪಟಾಕಿ ಸಿಡಿಸುವುದು ರೂಢಿಗತವಾಗಿದ್ದು, ಮೈಸೂರಿನಲ್ಲಿ ಬಗೆ ಬಗೆಯ ಪಟಾಕಿಗಳನ್ನು ಮಾರಾಟಕ್ಕಿಡಲಾಗಿದೆ.

ಈ ಬಾರಿಯೂ ಹಸಿರು ಪಟಾಕಿ ಮಾರಾಟಕ್ಕಷ್ಟೇ ಅವಕಾಶವಿದ್ದು, ಜೆ.ಕೆ.ಮೈದಾನದಲ್ಲಿ 19 ಸೇರಿದಂತೆ ನಗರದ ವಿವಿಧೆಡೆಯಲ್ಲಿ 150ಕ್ಕೂ ಹೆಚ್ಚು ಮಳಿಗೆಗಳಿಗೆ ಅನುಮತಿ ನೀಡಲಾಗಿದೆ. ನಾಳೆ(ಅ.18)ಯಿಂದ ಅ.22 ರವರೆಗೆ ಐದು ದಿನಗಳ ಕಾಲ ಪಟಾಕಿ ಮಾರಾಟಕ್ಕೆ ಅವಕಾಶ ನೀಡಲಾಗಿದೆ.

ಜಂಕ್‌ಶೀಟ್‌ಗಳಿಂದ ಮಳಿಗೆಗಳನ್ನು ನಿರ್ಮಿಸಿಕೊಂಡು, ಮಳೆಯಿಂದ ನಷ್ಟವಾಗದಂತೆ ನೆಲಮಟ್ಟದಿಂದ ಸ್ವಲ್ಪ ಎತ್ತರಕ್ಕೆ ಮಣೆ ಜೋಡಿಸಿ, ಪಟಾಕಿಗಳನ್ನು ಇಡಲಾಗಿದೆ. ಜೆ.ಕೆ.ಗ್ರೌಂಡ್‌ನ ಪಟಾಕಿ ಮೇಳದಲ್ಲಿರುವ ಎಲ್ಲಾ ಮಳಿಗೆಗಳ ಮುಂದೆಯೂ ರಿಯಾಯ್ತಿ ದರದಲ್ಲಿ ಹಸಿರು ಪಟಾಕಿ ಮಾರಾಟ ಫಲಕ ರಾರಾಜಿಸುತ್ತಿವೆ. ಗ್ರಾಹಕರನ್ನು ಆಕರ್ಷಿಸಲು ಬಗೆ ಬಗೆಯ ಪಟಾಕಿಗಳನ್ನು ಚೊಕ್ಕವಾಗಿ ಜೋಡಿಸಲಾಗಿದೆ. ಬೆಲೆಯೂ ತರಹೇವಾರಿಯಾಗಿದೆ. ಬಾಕ್ಸ್ ಒಳಗಿನ ಪಟಾಕಿಗಳ ಮಾದರಿ, ಸಂಖ್ಯೆ ಆಧಾರದಲ್ಲಿ ಬೆಲೆ ನಿಗದಿಗೊಳಿಸಲಾಗಿದೆ.

ಮಳಿಗೆದಾರರು ಮಹಾನಗರ ಪಾಲಿಕೆ, ಪೊಲೀಸ್, ಅಗ್ನಿಶಾಮಕ ಇಲಾಖೆ ಹಾಗೂ ಸೆಸ್ಕ್‌ನಿಂದ ನಿರಾಪೇಕ್ಷಣಾ ಪತ್ರ ಪಡೆದು, ಬಾಕ್ಸ್‌ಗಳ ಮೇಲೆ ಹಸಿರು ಚಿಹ್ನೆ ಮತ್ತು ಕ್ಯೂಆರ್ ಕೋಡ್ ಇರುವ ಪಟಾಕಿಗಳನ್ನು ಮಾರಾಟಕ್ಕಿಡಬೇಕೆಂಬ ನಿಯಮವಿದೆ. ಹಸಿರು ಪಟಾಕಿ ಹೊರತಾಗಿ ಬೇರೆ ದರ್ಜೆಯ ಪಟಾಕಿ ಮಾರಾಟಕ್ಕೆ ಮುಂದಾದರೆ ಅಂತಹ ಉತ್ಪನ್ನಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸುವ ಎಚ್ಚರಿಕೆ ನೀಡಲಾಗಿದೆ.

7ನೇ ವರ್ಷದ ಸವಿನೆನಪು




ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ: ಸಾಜಿದ ಬೇಗಂ ಹಾಗೂ ಮಕ್ಕಳು, ಮೊಮ್ಮಕ್ಕಳು ಕುಟುಂಬದವರು

ಮೀರ್ ಇಸ್ತ್ಯಾಕ್ ಹುಸೇನ್ (ಕಾಲು)

S/o ಲೇಟ್ ಮೀರ್ ಮಜರ್ ಹುಸೇನ್, Retd. ಹೆಡ್‌ಕಾನ್ಸ್‌ಟೇಬಲ್, ಪೋಲೀಸ್ ಇಲಾಖೆ, ಜ್ಯೋತಿನಗರ, ಮೈಸೂರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಕೆ. ಮೀನಾಕ್ಷಿ ರವರು

ನಿಧನ: 17–10–2025

11ನೇ ಕ್ರಾಸ್, ತಿಲಕ್‌ನಗರ, ಮೈಸೂರು

ಅಂತ್ಯಕ್ರಿಯೆ ನಾಳೆ ಬೆಳಗ್ಗೆ 11:00 ಗಂಟೆಗೆ

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು: ಪತಿ: ಜಗನ್ನಾಥ್ ಎಂ.ಎಲ್, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು

ಸುಶೀಲ.ಎಸ್

ಮಿರ್ಲೆಗ್ರಾಮ, ಕೆ.ಆರ್.ನಗರ

ನಿಧನ: 18.10.2016

ಭಾವಪೂರ್ಣ ಶ್ರದ್ಧಾಂಜಲಿ



ಶಶಾಂಕ್ .ಬಿ

ಉದ್ಯಮಿ

ಇವರು ದಿನಾಂಕ 17–10–2025 ರಂದು ದೈವಾಧೀನರಾಗಿದ್ದು ಇವರ ಆತ್ಮಕ್ಕೆ ಶಾಂತಿ ಕೋರುವ

ದುಃಖತಪ್ತರು: ತಂದೆ– ಬಾಲಸುಂದರ್ ಕುಮಾರ್ ತಾಯಿ–ಸುಮನಾ, ಸ್ನೇಹಿತರು–ಮೇಘನ್, ಮನೋಜ್, ಅಮಿತ್ ಕುಮಾರ್, ಮನೋಹರ್, ಟೋನಿ, ಆಲನ್, ಟೆರೆನ್ಸ್, ಧೀಕ್ಷಿತ್, ಮಧು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಿದ್ದೆ ಮಾತ್ರೆ ತಿಂದರೆ ನಿದ್ದೆ ಬರುತ್ತೆ.
ಗಂಡ : ಹೌದು!?
ಹೆಂಡತಿ : ಜ್ವರದ ಮಾತ್ರೆ ತಿಂದರೆ ಜ್ವರ ಬರುತ್ತಾ?

ಮೈಸೂರು ಮಿತ್ರ

ಶನಿವಾರ, 18 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಆಶಾವಾದಿ ಪ್ರತಿಯೊಂದು ಕಠಿಣತೆಯಲ್ಲೂ ಅವಕಾಶವನ್ನು ಹುಡುಕುತ್ತಾನೆ. ಆದರೆ ನಿರಾಶವಾದಿ ಪ್ರತಿಯೊಂದು ಅವಕಾಶದಲ್ಲಿ ಕಠಿಣತೆಯನ್ನು ಕಾಣುತ್ತಾನೆ. –ವಿನ್‌ಸ್ಟನ್ ಚರ್ಚಿಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೃತಿ ಇಲ್ಲದ ಮಾತು ಕಸ ಬೆಳೆದ ತೋಟವಿದ್ದಂತೆ.

ನಿಮ್ಮ ಪತ್ರಗಳು

ದೇವೇಗೌಡ ಸರ್ಕಲ್‌ನಲ್ಲಿ ಸಂಚಾರಿ ಅವ್ಯವಸ್ಥೆ



ಮಾನ್ಯರೆ,

ಮೈಸೂರು ನಗರ ಬನ್ನೂರು ರಸ್ತೆಯಲ್ಲಿರುವ ದೇವೇಗೌಡ ವೃತ್ತದಲ್ಲಿ (ಬನ್ನೂರು ರಸ್ತೆ ರಿಂಗ್ ರೋಡ್ ಜಂಕ್ಷನ್‌ನಲ್ಲಿ) ಸಂಚಾರ ದಟ್ಟಣೆ ತೀವ್ರಗೊಂಡಿದ್ದು ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರಿಗೆ ತೀವ್ರ ಒತ್ತಡ ಪರಿಸ್ಥಿತಿ ನಿರ್ಮಾಣಗೊಂಡಿದೆ. ಸಂಚಾರಿ ದೀಪದ ತಿರುವುಗಳಲ್ಲಿ ಅಡ್ಡಾದಿಡ್ಡಿ ವಾಹನ ನಿಲ್ಲಿಸುವುದು, ಬೀದಿ ಬದಿ ವ್ಯಾಪಾರಿಗಳು ತಳ್ಳು ಗಾಡಿಗಳನ್ನು ಪಾದಚಾರಿ ಜಾಗದಲ್ಲಿ ನಿಲ್ಲಿಸಿ ವ್ಯಾಪಾರ ಮಾಡುವುದು ಹಾಗೂ ಇನ್ನಿತರ ಸಂಚಾರಿ ನಿಯಮಗಳ ಉಲ್ಲಂಘನೆ ಆಗುತ್ತಿದೆ. ಪ್ರತಿ ನಿತ್ಯ ಒಂದಲ್ಲ ಒಂದು ಸಣ್ಣ ಪುಟ್ಟ ಸಂಚಾರಿ ಅಪಘಾತಗಳು ಈ ವೃತ್ತದಲ್ಲಿ ಸಂಭವಿಸುತ್ತಲೇ ಇರುತ್ತದೆ. ಈ ಹಿಂದೆ ಸಂಬಂಧಿಸಿದ ಇಲಾಖೆಯ ಗಮನಕ್ಕೆ ತಂದಿದ್ದರೂ ಯಾವುದೇ ರೀತಿಯ ವ್ಯವಸ್ಥೆಯಲ್ಲಿ ಸುಧಾರಣೆ ಕಂಡು ಬಂದಿರುವುದಿಲ್ಲ. ಆದ್ದರಿಂದ ದಯವಿಟ್ಟು ಸಂಬಂಧಿಸಿದ ಸಂಚಾರಿ ಪೊಲೀಸ್ ಹಿರಿಯ ಅಧಿಕಾರಿಗಳು ಕೂಡಲೇ ಈ ಮನವಿಯನ್ನು ಪರಿಗಣಿಸಿ ಸೂಕ್ತ ಸಂಚಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಜಿ.ಎಸ್. ಕುಮಾರ್, ಯಶಸ್ವೀ ಹಿಲ್ ವ್ಯೂ ಬಡಾವಣೆ, ಭುಗತಗಳ್ಳಿ, ಮೈಸೂರು

ಬಿಚ್ಚು ನುಡಿಯ – ಕೊಳೆತ ಊರು ಮೈಸೂರು

ಮಾನ್ಯರೆ,

ವಿಕ್ರಂ ಮುತ್ತಣ್ಣ ಅವರ ಬಿಚ್ಚು ನುಡಿ ಅಂಕಣದಲ್ಲಿ ಮೈಸೂರು ಈಗ ಪಿಂಚಣಿದಾರರ ಸ್ವರ್ಗವಾಗಿ ಉಳಿದಿಲ್ಲ. ಕಾನೂನು ಉಲ್ಲಂಘಿಸುವವರ ಆಟದ ಮೈದಾನವಾಗಿ ಪರಿವರ್ತನೆಯಾಗಿದ್ದು, ಕಾರಣಗಳನ್ನು ಹುಡುಕುತ್ತಾ ಹೋದರೆ ಎಫ್‌ಐಆರ್ ದಾಖಲಿಸುವುದನ್ನು ಕೈಬಿಟ್ಟಾಗ, ವಿಚಾರಣೆಯಲ್ಲಿ ವಿಳಂಬವಾದಾಗ, ಜಾತಿ ಆಧಾರದಲ್ಲಿ ಮಣೆ ಹಾಕಿದಾಗ ಹಾಗೂ ರಾಜಕಾರಣಿಗಳ ಒಂದು ಫೋನ್ ಕರೆಗೆ ಪೊಲೀಸ್ ಅಧಿಕಾರಿಗಳು ಸ್ಪಂದಿಸುವುದರಿಂದ ಮೈಸೂರು ಭಯದ ಊರಾಗಿ ನಾಗರಿಕರು ಭಯದಿಂದಲೇ ಬದುಕುತ್ತಿದ್ದಾರೆ ಎಂದು ಬರೆದಿರುವುದು ಮೈಸೂರಿನ ಪ್ರತಿಯೊಬ್ಬ ನಾಗರಿಕರು ಮೆಚ್ಚುವಂತದ್ದು.

'ದಕ್ಷತೆಗೆ ಮತ್ತೊಂದು ಹೆಸರೇ ಕರ್ನಾಟಕ ಪೊಲೀಸ್' ಎಂದು ಪೊಲೀಸ್ ಇಲಾಖೆ ಕರ್ನಾಟಕ ಸರ್ಕಾರದ ಜಾಹೀರಾತಿನಲ್ಲಿ ಬರುತ್ತಿದ್ದುದನ್ನು ನಾವು ನೋಡಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳು ಪದೇ ಪದೆ ಕಾನೂನು ಅನುಷ್ಠಾನದ ವಿಚಾರದಲ್ಲಿ ಮೂಗು ತೂರಿಸಿ ಅಪರಾಧಿಗಳನ್ನು ರಕ್ಷಿಸಲು ಜಾತಿ, ತಮ್ಮ ಪಕ್ಷದ ಕಾರ್ಯಕರ್ತರು ಮತ್ತು ಸಮುದಾಯವನ್ನು ಮಧ್ಯೆ ತಂದಾಗಲೆಲ್ಲ ನಮ್ಮ ಪ್ರಜಾಪ್ರಭುತ್ವದ ನೈತಿಕತೆಯ ಬೆನ್ನೆಲುಬು ಕುಂದುತ್ತಾ ಹೋಗುವುದರಲ್ಲಿ ಸಂದೇಹವೇ ಇಲ್ಲ ಹಾಗೂ ಪೊಲೀಸ್ ಇಲಾಖೆಯ ದಕ್ಷತೆಯನ್ನು ಕುಗ್ಗಿಸುವುದರಲ್ಲಿ ಪಾತ್ರಧಾರಿಗಳಾಗುತ್ತಾರೆ. ಮೈಸೂರಿನಲ್ಲಿ ಮತ್ತೆ ಮತ್ತೆ ಅಪರಾಧ ಕೃತ್ಯಗಳು ನಡೆಯದಂತೆ ಮೈಸೂರಿನಲ್ಲಿರುವ ಪ್ರಬುದ್ಧ ಜನಪ್ರತಿನಿಧಿಗಳು ಪೊಲೀಸ್ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡುವತ್ತಾ ಪ್ರವೃತ್ತರಾಗಿ ಮೈಸೂರನ್ನು ಮತ್ತೆ ನಮ್ಮ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೈಸೂರು ಮಾಡಬೇಕಾಗಿ ಮನವಿ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಪ್ರತಿ ಜಿಲ್ಲೆಯಲ್ಲೂ ಮೆಡಿಕಲ್ ಕಾಲೇಜು ನಿರ್ಮಾಣ ಸ್ವಾಗತಾರ್ಹ

ಮಾನ್ಯರೆ,

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್, ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್ ನಿರ್ಮಾಣ ಮಾಡಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣು ಪ್ರಕಾಶ್ ಆರ್. ಪಾಟೀಲ್ ತಿಳಿಸಿರುವುದು ಶ್ಲಾಘನೀಯ. ಸರ್ಕಾರದ ಈ ನಿರ್ಧಾರದಿಂದಾಗಿ ವೈದ್ಯಕೀಯ ಸೀಟುಗಳು ಹೆಚ್ಚಾಗಲಿವೆ. ಕಲ್ಬುರ್ಗಿ, ಬಳ್ಳಾರಿ, ಬೆಳಗಾಂ, ರಾಯಚೂರು, ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಆರಂಭವಾಗಿವೆ. ಮುಂದೆ ಕೊಪ್ಪಳ, ತುಮಕೂರು ಜಿಲ್ಲೆಗಳಲ್ಲೂ ಆರಂಭವಾಗಲಿವೆ. ಅದೇ ರೀತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್ ಆರಂಭಿಸುವ ಉದ್ದೇಶ ಹೊಂದಲಾಗಿದೆ. ಕರ್ನಾಟಕದಲ್ಲಿ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಂದ 3900 ಸೀಟುಗಳು ದೊರೆಯುತ್ತಿವೆ. ಇದರಿಂದ ಕರ್ನಾಟಕದ ವಿದ್ಯಾರ್ಥಿಗಳು ನೆಮ್ಮದಿಯಿಂದ ವಿದ್ಯಾಭ್ಯಾಸ ಮಾಡಲು ಅನುಕೂಲವಾಗಲಿ.

–ಸಿದ್ದಲಿಂಗೇಗೌಡ. ಹೈರಿಗೆ, ಹೆಚ್.ಡಿ.ಕೋಟೆ ತಾ.

ಪುರುಷರಿಗೂ ಉಚಿತ ಸಾರಿಗೆ ಟಿಕೆಟ್

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಹಿಳೆಯರಿಗೆ ವಿತರಿಸುವ ಉಚಿತ ಟಿಕೆಟ್ ಪುರುಷರಿಗೂ ವಿತರಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಉದಾಹರಣೆಗೆ ಸಿಟಿ ಬಸ್ ನಿಲ್ದಾಣದಿಂದ ಕುವೆಂಪುನಗರಕ್ಕೆ ತೆರಳಲು ಓರ್ವ ಪುರುಷ ಹಣ ಕೊಟ್ಟು ಟಿಕೆಟ್ ಕೇಳಿದರೆ ನಿರ್ವಾಹಕ ಮಹಿಳೆಯರಿಗೆ ಉಚಿತವಾಗಿ ವಿತರಿಸುವ ಟಿಕೆಟ್ ಹರಿದು ಕೊಟ್ಟು ಆ ಹಣವನ್ನು ತನ್ನ ಜೇಬಿಗೆ ಹಾಕುವ ಪ್ರಸಂಗ ಕಂಡು ಬಂದಿತು. ವಿದ್ಯಾವಂತರಾದರೆ ಆ ಟಿಕೆಟ್ ಪರಿಶೀಲಿಸಿ ನಿರ್ವಾಹಕರಿಗೆ ತಿಳಿಸಿ ಉಚಿತ ಟಿಕೆಟ್ ಬದಲಾಯಿಸಿ ಮಾಮೂಲಿ ಟಿಕೆಟ್ ಪಡೆಯಬಹುದು. ಅದೇ ಹಳ್ಳಿಯವರಾದರೆ ಅವರು ಸುಮ್ಮನೆ ಆ ಟಿಕೆಟ್ ಅನ್ನು ಜೇಬಿಗೆ ಇಳಿ ಬಿಡುತ್ತಾರೆ. ಇದನ್ನು ರಸ್ತೆ ಸಾರಿಗೆ ಇಲಾಖೆಯವರು ಪತ್ತೆ ಹಚ್ಚಿ ಇಂತಹ ಅವ್ಯವಹಾರ ನಡೆಯದಂತೆ ಮುನ್ನೆಚ್ಚರಿಗೆ ವಹಿಸಬೇಕು. ಮುಗ್ಧ ಪುರುಷರಿಗೆ ದಿನನಿತ್ಯ ಇಂತಹ ನಿರ್ವಾಹಕರು ಮರುಳು ಮಾಡಿ ಹಣ ಗುಳುಂ ಮಾಡುವುದನ್ನು ತಡೆಯಬೇಕು.

– ಪ್ರದೀಪ್‌ಕುಮಾರ್, ಕುವೆಂಪುನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಾಧನೆಗೆ ವಯಸ್ಸಲ್ಲ, ಮನಸ್ಸು ಮುಖ್ಯ...!


ಸಾರ್ವಜನಿಕ ಸೇವೆ ಮಾಡುವ ಹೆಸರಿನವರು ನಮಗೆ ಬಹಳಷ್ಟು ಮಂದಿ ಕಂಡುಬರುತ್ತಾರೆ. ಆದರೆ, ನಿಜವಾಗಿಯೂ ಯಾವುದೇ ಪ್ರಚಾರವಿಲ್ಲದೆ ಸಾರ್ವಜನಿಕ ಸೇವೆಯಲ್ಲಿ ತೊಗಿಸಿಕೊಂಡವರು ಒಂದಷ್ಟು ಜನರು ಇರುತ್ತಾರೆ. ಅವರಿಗೆ ಪ್ರಚಾರ ಬೇಡ. ಜನಸೇವೆಯೇ ಅವರ ಗುರಿ. ಅದನ್ನು ಸಾಧಿಸಲು ತಮ್ಮಲ್ಲಿ ಇದ್ದುದನ್ನೆಲ್ಲಾ ಕಳೆದುಕೊಳ್ಳುವ ಹಲವರ ಉದಾಹರಣೆ ನಮ್ಮ ಮುಂದಿದೆ. ಆದರೆ ಪತ್ರಿಕೆಗಳಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವವರು ಪುಟಗಟ್ಟಲೆ ಜಾಹಿರಾತು ನೀಡುವುದು, ಅದಕ್ಕೆ ಅವರ ಅಭಿಮಾನಿ ಬಳಗ ಎಂದು ಹೆಸರು ಹಾಕುವುದು, ಅದರಲ್ಲಿ ಹತ್ತಾರು ಜನರ ಫೋಟೋ ಹಾಕುವುದು, ತಾವೊಬ್ಬ ಜನಸೇವಕ ಎಂದು ಬಿಂಬಿಸಿಕೊಳ್ಳುವ ಅನೇಕ ನಾಯಕರ(?) ನಾವು ಕಾಣುತ್ತೇವೆ.

ವಿಶೇಷ ಎಂದರೆ ಮಾಜಿ ಶಾಸಕರ ಜಾಹಿರಾತಲ್ಲಿ ಅವರನ್ನು ಜನಾನುರಾಗಿ, ಜನಪ್ರಿಯ ನಾಯಕ ಎಂದು ನಮೂದಿಸಿರುತ್ತಾರೆ. ಅವರು ಜನಪ್ರಿಯ ನಾಯಕ ಆಗಿದ್ದರೆ ಅದೇಕೆ ಮತದಾರರು ಅವರನ್ನು ಸೋಲಿಸಿದರು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅವರ ಹುಟ್ಟುಹಬ್ಬದ ದಿನ ವೃದ್ಧಾಶ್ರಮ, ಆಸ್ಪತ್ರೆಗೆ ಹೋಗಿ ರೋಗಿಗಳಿಗೆ ಹಣ್ಣು–ಹಂಪಲು ಹಂಚುವುದು, ಅ ಫೋಟೊ ಪತ್ರಿಕೆಯಲ್ಲಿ ಪ್ರಕಟವಾಗುವಂತೆ ನೋಡಿಕೊಳ್ಳುತ್ತಾರೆ. ಅವರ ಫೋಟೋ ಪ್ರಕಟವಾದರೆ, ಮುಂದಿನ ಚುನಾವಣೆಯಲ್ಲಿ ಅವರಿಗೆ ಜನರು ಮತ ಹಾಕುತ್ತಾರೆ ಎಂದು ಭಾವಿಸುತ್ತಾರೆ. ಅವರಿಗೆ ನಿಜವಾಗಿಯೂ ಆ ರೀತಿಯ ಕಳಕಳಿ ಇದ್ದಲ್ಲಿ, ಅದನ್ನು ಒಂದು ವ್ರತದಂತೆ ಸ್ವೀಕರಿಸಿ ಏಕೆ ವರ್ಷಪೂರ್ತಿ ಆ ಕೆಲಸ ಮಾಡುವುದಿಲ್ಲ? ಎಂದು ಕೇಳಬೇಕೆನಿಸುತ್ತದೆ.

ಆದರೆ, ನಮ್ಮ ಸಮಾಜ ಇಂತಹ ಜಾಹಿರಾತಿಗೆ ಮನ್ನಣೆ ನೀಡಲ್ಲ ಎಂಬುದು ಬೇರೆ ಮಾತು. ಇಂತಹ ಜಾಹಿರಾತನ್ನು ನೀಡುವ ಉದ್ದೇಶ ಸದ್ಯದಲ್ಲೇ ಬರಲಿರುವ ಚುನಾವಣೆಯಲ್ಲಿ ತನಗೆ ಸೀಟು ಸಿಗಲಿ, ಈ ಜಾಹಿರಾತು ತನ್ನ ಜನಪ್ರಿಯತೆಯನ್ನು ಪಕ್ಷದ ವರಿಷ್ಠರು ಗಮನಿಸುವಂತೆ ಆಗಲಿ ಎಂಬ ಉದ್ದೇಶ ಇದ್ದಿರಬಹುದು ಅಥವಾ ತಾನಿನ್ನೂ ಸಾರ್ವಜನಿಕ ಜೀವನದಲ್ಲಿ ಇದ್ದೇನೆ ಎಂದು ಜನರಿಗೆ ತೋರಿಸುವ ಉಮೇದೂ ಇರಬಹುದು.

ಆದರೆ ಇಂತಹ ಜಾಹಿರಾತಾಗಲೀ, ಅವರ ಫೋಟೋಗಳಾಗಲೀ ಖಂಡಿತಾ ಪ್ರಯೋಜನಕ್ಕೆ ಬರುವುದಿಲ್ಲ. ಇತ್ತೀಚೆಗೆ ನಡೆದ ಒಂದು ಚುನಾವಣೆ ಸಂದರ್ಭದಲ್ಲಿ, ಚುನಾವಣೆ ಘೋಷಣೆಯಾಗುವ ಐದಾರು ತಿಂಗಳ ಮುಂಚೆಯೇ ಒಬ್ಬರು ಸಾಕಷ್ಟು ಹಣ ಖರ್ಚು ಮಾಡಿ ಬಡವರಿಗಾಗಿ ಹಲವಾರು ಕಾರ್ಯಕ್ರಮ ಮಾಡಿದರು. ಇವರು ಹಣ ಖರ್ಚುಮಾಡಲು ಸಿದ್ಧರಿದ್ದಾರೆ ಎಂದು ಗೊತ್ತಾದಾಗ ಹಲವಾರು ಜನರು ಅವರನ್ನು ಮುತ್ತಿದರು. ಅವರನ್ನು ಇಂದ್ರ–ಚಂದ್ರ ಎಂದೆಲ್ಲಾ ಹೊಗಳಿದರು. ಮತ್ತಷ್ಟು ಅಂತಹುದೇ ಸಾರ್ವಜನಿಕ ಕೆಲಸ ಹಮ್ಮಿಕೊಳ್ಳುವಂತೆ ಪ್ರಚೋದಿಸಿದರು. ಅದನ್ನು ನಂಬಿದ ಅವರು ತಮ್ಮಲ್ಲಿದ್ದ ಹಣ ಖಾಲಿಯಾದಾಗ ಸಾಲ ಮಾಡಿ ಮತ್ತಷ್ಟು ಕಾರ್ಯಕ್ರಮ ಮಾಡಿದರು. ಆ ಸಾಲದ ಹೊರೆ ಜಾಸ್ತಿಯೇ ಇತ್ತು.

ದುರದೃಷ್ಟ ಎಂದರೆ ಅವರಿಗೆ ಪಕ್ಷ ಟಿಕೆಟನ್ನೇ ನೀಡಲಿಲ್ಲ. ಇದು ಗೊತ್ತಾದಂತೆ ಅವರ ಸುತ್ತ ಸುತ್ತುವರಿಯುತ್ತಿದ್ದವರು ಕ್ರಮೇಣ ಮರೆಯಾದರು. ಇವರು ಒಬ್ಬಂಟಿಯಾದರು. ಆದರೆ ಮಾಡಿದ ಸಾಲ ತೀರಿಸಲೇಬೇಕಾಗಿತ್ತು. ಅವರು ಸೇವೆ ಎಂದು ಮಾಡಿದ್ದರಿಂದ ನಂತರವೂ ಜನರು ಅವರನ್ನು ಸಂಪರ್ಕಿಸುತ್ತಿದ್ದರು. ಇದು ಅವರಿಗೆ ಸಿಟ್ಟು ತರಿಸಿತ್ತು. ಒಂದು ರೀತಿಯ ಅಸಹಾಯಕತೆ,



ಸಿ.ರಾಧಾಕೃಷ್ಣರಾವ್

ಏನು ಮಾಡಲಾಗದಂತಹ ತೊಳಲಾಟ. ಇದು ಒಂದು ನಿದರ್ಶನ. ಇಲ್ಲಿ ಸಾರ್ವಜನಿಕ ಸೇವೆ ಎಂಬುದು ಒಂದು ನೆಪ ಮಾತ್ರ ಎನ್ನಿಸುತ್ತದೆ. ನಿಜವಾಗಿಯೂ ಸಾರ್ವಜನಿಕ ಸೇವೆ ಎಂದಾದರೆ ಜನರಿಗೆ ಅನುಕೂಲವಾಗುವಂತಹ ಒಂದಷ್ಟು ಕೆಲಸವನ್ನು ಮಾಡಿಕೊಡಬೇಕು.

ನಮ್ಮ ಸರ್ಕಾರಗಳು ತಮ್ಮ ಆಯವ್ಯಯ ಮಂಡಿಸುವಾಗ ಮಾಡುವ ವೆಚ್ಚದಲ್ಲಿ ಒಂದಷ್ಟನ್ನು ಮುಂದೆ ಅದರಿಂದ ಸರ್ಕಾರಕ್ಕೆ ಆದಾಯ ಬರುವಂತಹ ಯೋಜನೆಗಳನ್ನು ರೂಪಿಸಬೇಕು ಎಂಬುದು ಒಂದು ಆದರ್ಶ. ಆದರೆ ಜನಪ್ರಿಯತೆಗಾಗಿ ಇಂದು ಮಾಡುತ್ತಿರುವ ಅನರ್ಥ ವೆಚ್ಚಗಳು ಮುಂದೆ ಯಾವುದೇ ರೀತಿಯ ಆದಾಯವನ್ನು ಸರ್ಕಾರಕ್ಕೆ ತಂದುಕೊಡುವುದಿಲ್ಲ. ಅಭಿವೃದ್ಧಿಯೂ ಆಗಲ್ಲ. ಇದರಿಂದಾಗಿ ಸರ್ಕಾರಗಳು ಸಾಲ ಮಾಡುತ್ತಾ ಹೋಗಬೇಕಾಗುತ್ತದೆ. ಸಾಲವನ್ನು ಯಾರೂ ಹಾಗೇ ನೀಡುವುದಿಲ್ಲ. ಅದಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತದೆ. ಸಾಲ ಬೆಳೆದಂತೆ ಬಡ್ಡಿಯ ಪಾವತಿ ಅಧಿಕವಾಗುತ್ತಾ ಹೋಗುತ್ತದೆ. ಇದರಿಂದಾಗಿ ಸರ್ಕಾರಗಳು ಯಾವುದೇ ಜನೋಪಯೋಗಿ ಕೆಲಸ ಮಾಡಲಾಗುವುದಿಲ್ಲ.

ಇದು ಸರ್ಕಾರಕ್ಕೆ ಅನ್ವಯಿಸಿದಂತೆಯೇ ಸಾರ್ವಜನಿಕ ಜೀವನದ ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಅವರು ಅಧಿಕಾರದಲ್ಲಿದ್ದಾಗ ಮುಂದೆಯೂ ಅವರನ್ನು ನೆನಪಿಸಿಕೊಳ್ಳುವಂತಹ ಕೆಲಸ ಮಾಡಿದರೆ, ಜನರು ಅವರನ್ನು ಮಾಜಿಯಾಗಲು ಬಿಡುವುದಿಲ್ಲ. ಕೇವಲ ಪ್ರಚಾರಕ್ಕಾಗಿ ಹಣ ಖರ್ಚು ಮಾಡಿದರೆ, ಒಂದು ವೇಳೆ ಅವರು ಚುನಾವಣೆಯಲ್ಲಿ ಸೋತರೆ, ಅವರು ಮಾಡಿದ ಯಾವ ಕಾರ್ಯವನ್ನೂ ಜನರು ಜ್ಞಾಪಿಸಿಕೊಳ್ಳುವುದಿಲ್ಲ. ಇದನ್ನು ಮೊದಲು ಅರಿಯಬೇಕಾಗುತ್ತದೆ.

ಸಾರ್ವಜನಿಕ ಸೇವೆ ಎಂದರೆ ಹೇಗಿರಬೇಕು ಎಂಬುದಕ್ಕೆ ನಮಗೆ ಹಲವು ಉದಾಹರಣೆಗಳು ಸಿಗುತ್ತವೆ. ಅಂತಹ ಎರಡು ಉದಾಹರಣೆಗಳನ್ನು ಗಮನಿಸಬಹುದು. ಈ ಘಟನೆಗಳು ವಾಸ್ತವದಲ್ಲಿ ನಡೆದಿರುವಂತಹುದು ಎಂಬುದು ವಿಶೇಷ. ಅದರಲ್ಲಿ ಬರುವ ವ್ಯಕ್ತಿಗಳೆಲ್ಲಾ ತಮ್ಮ ಹೃದಯದ ಮಿಡಿತ ಅರಿತು ಸೇವೆ ಮಾಡಿದವರು.

ಇತ್ತೀಚೆಗೆ ಇಂತಹ ಒಬ್ಬ ವ್ಯಕ್ತಿಯ ಬಗ್ಗೆ ಓದಿದಾಗ ನಿಜಕ್ಕೂ ಅವರ ಬಗ್ಗೆ ಹೆಮ್ಮೆ ಎನಿಸಿತು. ಅವರ ಹೆಸರು ಹರಖ್‌ಚಂದ್ ಸಾವ್ಲಾ ಎಂದು. ಮುಂಬಯಿಯವರು. ಅವರು ಒಂದು ಉತ್ತಮ ಹೋಟೆಲ್ ನಡೆಸುತ್ತಿದ್ದರು. ವ್ಯಾಪಾರ ಚೆನ್ನಾಗಿಯೇ

> "ಸಾಲವನ್ನು ಯಾರೂ ಹಾಗೇ ನೀಡುವುದಿಲ್ಲ. ಅದಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತದೆ. ಸಾಲ ಬೆಳೆದಂತೆ ಬಡ್ಡಿಯ ಪಾವತಿ ಅಧಿಕವಾಗುತ್ತಾ ಹೋಗುತ್ತದೆ. ಇದರಿಂದಾಗಿ ಸರ್ಕಾರಗಳು ಯಾವುದೇ ಜನೋಪಯೋಗಿ ಕೆಲಸ ಮಾಡಲಾಗುವುದಿಲ್ಲ. ಇದು ಸರ್ಕಾರಕ್ಕೆ ಅನ್ವಯಿಸಿದಂತೆಯೇ ಸಾರ್ವಜನಿಕ ಜೀವನದ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ನಡೆಯುತ್ತಿತ್ತು. ಹಣವೂ ಬರುತ್ತಿತ್ತು. ಒಂದು ರೀತಿಯ ನೆಮ್ಮದಿಯ ಜೀವನ. ಅವರು ಒಂದು ದಿನ ಮುಂಬಯಿಯ ಪ್ರಸಿದ್ಧ ಟಾಟಾ ಕ್ಯಾನ್ಸರ್ ಆಸ್ಪತ್ರೆಯ ಮುಂದಿನ ಪಾದಚಾರಿ ಮೇಲು ಸೇತುವೆಯ ಮೇಲೆ ನಿಂತಿದ್ದರು. ಆಗವರಿಗೆ 30 ವರ್ಷ ವಯಸ್ಸಷ್ಟೇ. ಮೇಲಿನಿಂದ ಅವರು ಕೆಳಗೆ ಜನರ ಓಡಾಟ ಗಮನಿಸುತ್ತಿ ದ್ದರು. ಕ್ಯಾನ್ಸರ್ ಎಂದರೆ ಒಂದು ರೀತಿಯಲ್ಲಿ ಸಾವಿನ ಬಾಗಿಲಲ್ಲಿ ನಿಂತಂತಹ ಅನುಭವ. ಅಲ್ಲಿನ ಕ್ಯಾನ್ಸರ್ ಪೀಡಿತ ರೋಗಿಗಳ ಮುಖದಲ್ಲಿನ ಭಯ, ಅವರ ಸಂಬಂಧಿಕರ ಅಸಹಾಯಕ ಓಡಾಟ ಎಲ್ಲವನ್ನು ಗಮನಿಸಿದ ಅವರ ಮನಸ್ಸಲ್ಲಿ ಒಂದು ರೀತಿಯ ಆತಂಕದ ಛಾಯೆ ಮೂಡಿತು.

ಆ ಆಸ್ಪತ್ರೆಗೆ ಬರುವ ರೋಗಿಗಳಲ್ಲಿ ಬಹುತೇಕರು ದೂರದ ಹಳ್ಳಿಗಳಿಂದ ಬಂದ ಬಡವರು. ಅವರಿಗೆ ಯಾರನ್ನು ಭೇಟಿ ಮಾಡಬೇಕು, ಏನು ಮಾಡಬೇಕು ಎಂಬುದೇ ತಿಳಿದಿರಲಿಲ್ಲ. ಅವರ ಬಳಿ ಔಷಧಿಗಾಗಲೀ, ಆಹಾರಕ್ಕಾಗಲೀ ಹಣವಿರಲಿಲ್ಲ. ಇದನ್ನು ಈ ಯುವಕ ನೋಡುತ್ತಾ ನೋಡುತ್ತಾ ಅವನ ಅಂತಃಕರಣ ಕಲಕಿತು. ಈ ಜನರಿಗಾಗಿ ಏನನ್ನಾದರೂ ಮಾಡಬೇಕು ಎಂದು ಅನಿಸಲಾರಂಭವಾಯಿತು. ಮನೆಗೆ ಬಂದು ಮಲಗಿದವನಿಗೆ ನಿದ್ರೆಯೇ ಬರಲಿಲ್ಲ. ಹಲವಾರು ದಿನ ಹೀಗೇ ಆಯಿತು. ಮನಸ್ಸಿನಲ್ಲಿ ಒಂದೇ ಆಲೋಚನೆ, ಆ ಜನರಿಗಾಗಿ ಏನಾದರೂ ಮಾಡಬೇಕು ಎಂಬುದೇ ಆಗಿತ್ತು.

ಕೆಲ ದಿನಗಳ ನಂತರ ಆತ ಒಂದು ನಿರ್ಧಾರಕ್ಕೆ ಬಂದ. ತಾನು ನಡೆಸುತ್ತಿದ್ದ ಹೋಟೆಲನ್ನು ಬಾಡಿಗೆಗೆ ನೀಡಿದ. ತನ್ನಲ್ಲಿದ್ದ ಒಂದಷ್ಟು ಹಣವನ್ನೂ ಒಟ್ಟು ಮಾಡಿದ. ಆ ಆಸ್ಪತ್ರೆಯ ಸಮೀಪದಲ್ಲಿ ಒಂದು ಸಣ್ಣ ಜಾಗವನ್ನು ಬಾಡಿಗೆಗೆ ಪಡೆದ. ಈ ರೀತಿ ಅಸಹಾಯಕರಾಗಿ ಓಡಾಡುತ್ತಿದ್ದ ರೋಗಿಗಳು ಹಾಗೂ ಅವರ ಕುಟುಂಬದವರಿಗಾಗಿ ಉಚಿತ ಆಹಾರ ನೀಡಲು ಪ್ರಾರಂಭಿಸಿದ. ಇದು ಒಂದು ದಿನದ ಕಾಯಕವಾಗಿರಲಿಲ್ಲ. ನಿರಂತರವಾಗಿ ಆತ ಈ ಕೆಲಸದಲ್ಲಿ ತೊಡಗಿದ. ಒಬ್ಬಂಟಿಯಾದರೂ ಯೋಚನೆ ಮಾಡಲಿಲ್ಲ. ಅದನ್ನು ತನ್ನ ಕರ್ತವ್ಯ ಎಂಬಂತೆ ಮಾಡತೊಡಗಿದ. ಅವನ ಈ ಕೆಲಸವು ಕ್ರಮೇಣ ಜನರ ಗಮನ ಸೆಳೆಯಿತು. ಆರಂಭದಲ್ಲಿ ಆತ ದಿನಕ್ಕೆ 50–60 ಜನರಿಗೆ ಆಹಾರ ಒದಗಿಸುತ್ತಿದ್ದ. ಆಸ್ಪತ್ರೆಗೆ ಬರುತ್ತಿದ್ದ ರೋಗಿಗಳು ಹಾಗೂ ಅವರ ಸಹಾಯಕರಿಗೆ ಈ ವಿಷಯ ಅರಿವಾಗಿ ಹೆಚ್ಚು ಜನರು ಬರತೊಡಗಿದರು. 50–60 ಇದ್ದದ್ದು ಕ್ರಮೇಣ 100, 200, 300 ಆಯಿತು. ಇವನನ್ನು ಗಮನಿಸುತ್ತಿದ್ದ ಇತರ ಕೆಲವು ಯುವಕರು ಅವನಿಗೆ ಸಹಾಯಕರಾಗಿ ಕೆಲಸ ನಿರ್ವಹಿಸತೊಡಗಿದರು. ಅದೂ ಉಚಿತವಾಗಿ. ಈ ಪ್ರತಿಕ್ರಿಯೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತು.

ಮುಂಬಯಿಯ ಚಳಿ, ಮಳೆ, ಗಾಳಿ ಯಾವುದನ್ನು ಇವರು ಲೆಕ್ಕಿಸದೆ ತಮ್ಮ ಕಾಯಕ ಮುಂದುವರೆಸಿದರು. ಕ್ರಮೇಣ ಹೀಗೆ ಉಚಿತ ಆಹಾರ ಪಡೆಯುವವರ ಸಂಖ್ಯೆ 700 ದಾಟಿತು. ಕೆಲವರು ಆರ್ಥಿಕ ಸಹಾಯಕ್ಕೆ ನಿಂತರು. ಈ ಜನರಿಗೆ ಕೇವಲ ಆಹಾರ ಕೊಟ್ಟರೆ ಸಾಲದು. ಅವರಿಗೆ ಔಷಧಿಯನ್ನೂ ಕೊಡಬೇಕು ಎನಿಸಿ, ಔಷಧಿಯ ಬ್ಯಾಂಕ್ ಆರಂಭಿಸಿದ. ಕ್ರಮೇಣ ಅವನೊಡನೆ ಮೂವರು ಔಷಧಿಕಾರರು, ಮೂವರು ವೈದ್ಯರು ಹಾಗೂ ಅನೇಕ ಸಾಮಾಜಿಕ ಕಾರ್ಯಕರ್ತರು ಕೈಜೋಡಿಸಿದರು.

ಅವರು ಮುಂದೆ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳಿಗಾಗಿ ಟಾಯ್ ಬ್ಯಾಂಕ್ ಸ್ಥಾಪಿಸಿದರು. ಮಕ್ಕಳು ಆ ನೋವನ್ನು ಮರೆಯಲು ಆ ಆಟಿಕೆಗಳು ಸಹಾಯ ಮಾಡತೊಡಗಿದವು. ನಂತರ ಇದಕ್ಕಾಗಿ ಒಂದು ಟ್ರಸ್ಟ್ ಸ್ಥಾಪನೆಯಾಯಿತು. ಅದಕ್ಕೆ ಜೀವನ್ ಜ್ಯೋತ್ ಎಂದು ಹೆಸರಿಡಲಾಯಿತು. ಅದರರ್ಥ ಜೀವನ ಜ್ಯೋತಿ ಎಂದು. ಇಂದು ಆ ಟ್ರಸ್ಟ್ 60ಕ್ಕೂ ಹೆಚ್ಚು ಸಾಮಾಜಿಕ ಕಾರ್ಯದಲ್ಲಿ ತೊಡಗಿದೆ. ಆದರೂ ಈ ಹರಖ್‌ಚಂದ್ ಹೆಸರು ಹೆಚ್ಚು ಪ್ರಚಾರಕ್ಕೆ ಬರಲೇ ಇಲ್ಲ. ಆತನಿಗೆ ಅದು ಬೇಕಾಗಿಯೂ ಇರಲಿಲ್ಲ.


ಈ ಪ್ರತಿಕ್ರಿಯೆ ಕಳೆದ ಸುಮಾರು ಮೂರು ದಶಕಗಳಿಂದ ನಡೆಯುತ್ತಿದೆ. ಈತನಲ್ಲಿ ಈ ರೋಗಿಗಳು ಹಾಗೂ ಅವರ ಸಹಾಯಕರು ದೇವರನ್ನು ಕಾಣುತ್ತಿದ್ದಾರೆ. ಎಂತಹ ಘನ ಕಾರ್ಯವಲ್ಲವೇ? ಸಾರ್ವಜನಿಕ ಸೇವೆಗಾಗಿ ಮನಸ್ಸು ಈ ರೀತಿ ಮಿಡಿಯಬೇಕು ಎನ್ನಿಸುತ್ತದೆ. ಯಾವುದರಲ್ಲಿ ಸ್ವಾರ್ಥ ಇರುವುದಿಲ್ಲವೋ ಅದು ಮಾತ್ರ ಸೇವೆ ಎನಿಸಿಕೊಳ್ಳುತ್ತದೆ. ಇಲ್ಲದಿದ್ದಲ್ಲಿ ಅಂತಹುದನ್ನು ಬೂಟಾಟಿಕೆ ಎಂದು ಭಾವಿಸಬೇಕಾಗುತ್ತದೆ.

ಇತ್ತೀಚಿನ ಪತ್ರಿಕೆಗಳಲ್ಲಿ ಸಣ್ಣದಾಗಿ ಪ್ರಕಟವಾದ ಒಂದು ಸುದ್ದಿ ಹೆಚ್ಚಿನ ಗಮನ ಸೆಳೆಯಿತು. ಅದು ಇತ್ತೀಚೆಗೆ ಒಬ್ಬ ಭಾರತೀಯನಿಗೆ ನೋಬೆಲ್ ಪಾರಿತೋಷಕ ದೊರೆತ ಸುದ್ದಿ. ವಿಶೇಷ ಎಂದರೆ ಇವರಿಗೆ ಈಗ 102 ವರ್ಷ ವಯಸ್ಸು. ಅವರೇ ಕರ್ನಾಟಕದ ಶ್ರೀ ಸಿ ರಾಧಾಕೃಷ್ಣರಾವ್. ವಿಶೇಷ ಎಂದರೆ ಇವರು 60 ವರ್ಷದ ತಮ್ಮ ನಿವೃತ್ತಿಯ ನಂತರ ತಮ್ಮ ಮಗಳು ಹಾಗೂ ಮೊಮ್ಮಗಳ ಜೊತೆಗೆ ವಿಶ್ರಾಂತ ಜೀವನ ನಡೆಸಲು ಅಮೇರಿಕಾಕ್ಕೆ ತೆರಳಿದರು. ಆದರೆ ಸುಮ್ಮನಿರಲಾಗದ ಅವರು ಅಲ್ಲಿ ತಮ್ಮ 62ನೇ ವಯಸ್ಸಿನಲ್ಲಿ ಒಂದು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಕೆಲಸಕ್ಕೆ ಸೇರಿದರು. ಅವರ 70ನೇ ವಯಸ್ಸಿನಲ್ಲಿ ಒಂದು ವಿಶ್ವವಿದ್ಯಾಲಯದಲ್ಲಿ ಸಾಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರಾದರು. ತಮ್ಮ 75ನೇ ವಯಸ್ಸಿನಲ್ಲಿ ಅಮೇರಿಕಾದ ಪೌರತ್ವ ಪಡೆದರು. 81ನೇ ವಯಸ್ಸಿನಲ್ಲಿ ವಿಜ್ಞಾನದಲ್ಲಿ ರಾಷ್ಟ್ರೀಯ ಮೆಡಲ್ ಗಳಿಸಿದರು. ಈಗ ಅವರ 102ನೇ ವಯಸ್ಸಿನಲ್ಲಿ ನೋಬೆಲ್ ಮನ್ನಣೆ ಪಡೆದಿದ್ದಾರೆ. ಇವರಿಗೆ 2001ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ತಮ್ಮ ನಿವೃತ್ತಿ ನಂತರ ತಮ್ಮ ಜೀವನ ಮುಗಿದೇ ಹೋಯಿತು ಎಂದುಕೊಳ್ಳುವವರಿಗೆ ಶ್ರೀ ಸಿ.ರಾಧಾಕೃಷ್ಣರಾವ್ ಒಬ್ಬ ಆದರ್ಶ ವ್ಯಕ್ತಿಯಾಗಿ ಕಂಡುಬರುತ್ತಾರೆ. ಏನನ್ನಾದರೂ ಮಾಡಬೇಕು ಎನ್ನುವವರಿಗೆ ವಯಸ್ಸು ಎಂದಿಗೂ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಇವರು ಒಂದು ನಿದರ್ಶನವಾಗಿ ಕಂಡು ಬರುತ್ತಾರೆ. ಮನಸ್ಸಿದ್ದರೆ ಮಾರ್ಗ ಎಂಬುದಕ್ಕೆ ಇಂತಹುದನ್ನು ಗಮನಿಸಬೇಕು. ನೋಡುವುದಾದರೆ ಇಂತಹವರನ್ನು ನೋಡೋಣ, ಅನುಸರಿಸುವುದಾದರೆ ಇಂತಹವರನ್ನು ಅನುಸರಿಸೋಣ.

ಕಾಶ್ಮೀರದಿಂದ ಕನ್ಯಾಕುಮಾರಿ 3658ಕಿ.ಮೀ ಯಶಸ್ವಿ ಸೈಕ್ಲಿಸ್ಟ್‌ಗಳಿಗೆ ಅದ್ದೂರಿ ಸ್ವಾಗತ

ಸೌಹಾರ್ದತೆ, ಪರಿಸರ ಜಾಗೃತಿ ಮೂಡಿಸಿದ ಸಾಹಸಿ ತಂಡದ ಸಾಧನೆಗೆ ಸಂಸದ ಯದುವೀರ್ ಶ್ಲಾಘನೆ



ಸೈಕ್ಲಿಸ್ಟ್‌ಗಳನ್ನು ಆತ್ಮೀಯವಾಗಿ ಸ್ವಾಗತಿಸಿದ ಸಂಸದ ಯದುವೀರ್ ಒಡೆಯರ್



ಮಧ್ಯಪ್ರದೇಶದಲ್ಲಿನ ಮಕ್ಕಳೊಂದಿಗೆ ಡಾ. ಬೃಂದಾ ಸುಹಾಸ್ ಗೋಧಿ

ಮೈಸೂರು, ಅ.17(ವಿವಿಹೆಚ್)– ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸೈಕ್ಲಿಂಗ್‌ನಲ್ಲಿ 22 ದಿನಗಳಲ್ಲಿ 3658 ಕಿ.ಮೀ ಕ್ರಮಿಸಿ ಮೈಸೂರಿಗೆ ವಾಪಸಾದ ಪ್ರಖ್ಯಾತ ಸೈಕ್ಲಿಸ್ಟ್ ವಿನಯ್ ಸಿಂಗ್ ನೇತೃತ್ವದ ರಾಯಲ್ ರೈಡರ್ಸ್ ಮೈಸೂರು ತಂಡದ 11 ಮಂದಿಯನ್ನು ಶುಕ್ರವಾರ ರಾತ್ರಿ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆತ್ಮೀಯವಾಗಿ ಬರಮಾಡಿಕೊಂಡರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಯಲ್ ರೈಡರ್ಸ್ ಅವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸೈಕಲ್ ರೈಡಿಂಗ್ ಮಾಡುವ ಮೂಲಕ ಸಮಾಜದ ಪರಿವರ್ತನೆಗೆ, ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಜಾಥಾ ರೀತಿಯಲ್ಲಿ ಈ ಕಾರ್ಯಕ್ರಮ ಮಾಡಿದ್ದಾರೆ. ಇದೊಂದು ಅತ್ಯಂತ ಪರಿಶ್ರಮದ ಪ್ರಯತ್ನ. ಈ ಕಾರ್ಯಸಾಧನೆ ಮಾಡಿ ಮೈಸೂರಿಗೆ ಹೆಮ್ಮೆ ತಂದಿದ್ದಾರೆ ಎಂದು ಶ್ಲಾಘಿಸಿದರು.

ರಾಯಲ್ ರೈಡರ್ಸ್ ತಂಡದ ಮೆಂಟರ್ ವಿನಯ್ ಸಿಂಗ್ ಮಾತನಾಡಿ, ಕಾಶ್ಮೀರದಿಂದ ಕನ್ಯಾಕುಮಾರಿಗೆ ಸೈಕ್ಲಿಂಗ್ ಮಾಡುವುದು ಕಳೆದ ನಾಲ್ಕು ವರ್ಷಗಳ ಕನಸಾಗಿತ್ತು. ಅದು ಇಂದು ನನಸಾಗಿದೆ. 5 ಮಹಿಳೆಯರು ಹಾಗೂ 6 ಪುರುಷರನ್ನೊಳಗೊಂಡ 11 ಜನರ ತಂಡ 22 ದಿನಗಳಲ್ಲಿ 11 ರಾಜ್ಯಗಳನ್ನು ಕ್ರಮಿಸಿ ಈ ಗುರಿ ಸಾಧನೆ ಮಾಡಿದೆ ನಮ್ಮ ಜೊತೆ ಇಬ್ಬರು ವೈದ್ಯರಿದ್ದು, ಪ್ರಯಾಣದುದ್ದಕ್ಕೂ ಮೂಳೆ ಕ್ಯಾನ್ಸರ್ ಹಾಗೂ ಓರಲ್ ಹೈಜಿನ್ (ಬಾಯಿ ಮತ್ತು ಮುಖ ಆರೋಗ್ಯ) ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು ಎಂದು ಸಂತಸ ಹಂಚಿಕೊಂಡರು.

ರಾಯಲ್ ರೈಡರ್ಸ್ ಮೈಸೂರು ತಂಡದ ಮೆಂಟರ್ ಸೈಕ್ಲಿಸ್ಟ್ ವಿನಯ್ ಸಿಂಗ್, ಡಾ. ಬೃಂದಾ ಸುಹಾಸ್ ಗೋಧಿ, ಡಾ. ಸುಮನ್ ಎಂ.ಭೈರೇಗೌಡ, ಸಂದೀಪ್, ವೀಣಾ ಅಶೋಕ್, ಜೀತೇಂದ್ರ ಚುದನಾ, ಅನಿತಾ ಬರ್ಗ್, ಎಲ್.ಸೋಲಂಕಿ, ಹರೀಶ್ ರಾಮನ್ ಹಾಗೂ ಪೂಜಾ ಒಳಗೊಂಡ 11 ಜನರ ತಂಡ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ 11 ರಾಜ್ಯಗಳನ್ನೊಳಗೊಂಡಂತೆ ಕೇವಲ 22 ದಿನಗಳಲ್ಲಿ ಸೈಕಲ್‌ನಲ್ಲಿ 3658 ಕಿ.ಮೀ ಕ್ರಮಿಸಿದ್ದಾರೆ. ಕಾಶ್ಮೀರದಿಂದ ನೀರನ್ನು ಸಂಗ್ರಹಿಸಿ ಕನ್ಯಾಕುಮಾರಿ ಸಮುದ್ರದಲ್ಲಿ ವಿಸರ್ಜನೆ ಮಾಡುವ ಮೂಲಕ ತಮ್ಮ ಸೈಕ್ಲಿಂಗ್ ಪ್ರಯಾಣಕ್ಕೆ ತೆರೆ ಎಳೆದರು.

ಓರಲ್ ಕ್ಯಾನ್ಸರ್ ಬಗ್ಗೆ ಜಾಗೃತಿ: ಡಾ. ಬೃಂದಾ


ಬಾಯಿ ಮತ್ತು ಮುಖ (ಓರಲ್ ಹೈಜಿನ್)ದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಆಸೆಯಿತ್ತು. ರಾಷ್ಟ್ರೀಯ ಹೆದ್ದಾರಿ ಎನ್‌ಎಚ್.44 ರಲ್ಲಿ ಪ್ರಯಾಣದ ವೇಳೆ ಸಿಗುವ ಊರುಗಳು, ಡಾಬಾಗಳಲ್ಲಿ ಲಾರಿ ಡ್ರೈವರ್ಸ್, ಶಾಲೆಗಳು, ಬೀದಿಬದಿ ವ್ಯಾಪಾರಿಗಳಿಗೆ ಓರಲ್ ಹೈಜಿನ್ ಬಗ್ಗೆ ಉಪಯುಕ್ತ ಮಾಹಿತಿ ನೀಡಲಾಯಿತು. ಮಾನವನ ಆರೋಗ್ಯಕ್ಕೆ ಬಾಯಿ ಸ್ವಚ್ಛತೆ ಎಷ್ಟು ಮುಖ್ಯ ಎಂಬ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಯಿತು. ದೈನಂದಿನ ಜೀವನ ಕ್ರಮಗಳು, ಹಲ್ಲು ಉಜ್ಜುವ ಬಗೆ ಹಾಗೂ ಅದರಿಂದ ಆಗುವ ಪ್ರಯೋಜನಗಳ ಕುರಿತಂತೆ ವಿಶೇಷ ತರಗತಿಗಳನ್ನು ನೀಡಲಾಯಿತು. ಪ್ರಮುಖವಾಗಿ 20 ರಿಂದ 25 ವರ್ಷ ಒಳಗಿನ ಮಕ್ಕಳಿಗೆ ಓರಲ್ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು ಎಂದು ಪೀಡಿಯಾಟ್ರಿಕ್ ಮತ್ತು ಪ್ರಿವೆಂಟಿವ್ ಡೆಂಟಿಸ್ಟ್ರಿ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಬೃಂದಾ ಸುಹಾಸ್ ಗೋಧಿ ಹೇಳಿದರು.

ವೀಣಾ ಅಶೋಕ್ ಮಾತನಾಡಿ, ದಿನವೊಂದಕ್ಕೆ 175 ರಿಂದ 200 ಕಿಮೀ ದೂರ ಕ್ರಮಿಸುವ ದೊಡ್ಡ ಸವಾಲು ನಮ್ಮದಾಗಿತ್ತು ವಿವಿಧ ಹವಾಗುಣಕ್ಕೆ ಹೊಂದಿಕೊಂಡು ಸೈಕ್ಲಿಂಗ್ ಮಾಡುವುದು ಬಹು ದೊಡ್ಡ ಸವಾಲಾಗಿತ್ತು. 11 ರಾಜ್ಯಗಳನ್ನು ಕ್ರಮಿಸುವ ಮೂಲಕ ವಿವಿಧತೆಯಲ್ಲಿ ಏಕತೆಯನ್ನು ಕಂಡೆವು ಎಂದು ಹರ್ಷ ವ್ಯಕ್ತಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಎಲ್ಲಾ ಪ್ರಯತ್ನ

ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ 'ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳ'ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು, ಅ.17(ಎಂಕೆ)– ನಿರುದ್ಯೋಗ ಸಮಸ್ಯೆ ಹೋಗಲಾಡಿಸುವುದೇ ಸರ್ಕಾರಕ್ಕೆ ದೊಡ್ಡ ಸವಾಲಾಗಿದ್ದು, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ನಗರಪಾಲಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳ' ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗದಾತರು ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗಗಳನ್ನು ನೀಡುವ ಪ್ರಯತ್ನ ಮಾಡಬೇಕು ಎಂದರು.

ಕಳೆದ ಎರಡು ವರ್ಷದಲ್ಲಿ ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಉದ್ಯೋಗ ಮೇಳಗಳನ್ನು ನಡೆಸಲಾಗುತ್ತಿದ್ದು, ರಾಜ್ಯ ಮಟ್ಟದ ಉದ್ಯೋಗ ಮೇಳದಲ್ಲಿ 58,892 ಅಭ್ಯರ್ಥಿಗಳು ಭಾಗವಹಿಸಿದ್ದಾರೆ. ಅವರಲ್ಲಿ 11,507 ಅಭ್ಯರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ನೇಮಕಾತಿ ಪತ್ರಗಳನ್ನು ನೀಡಿದ್ದು, 22,869 ಅಭ್ಯರ್ಥಿಗಳ ಹೆಸರನ್ನು ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಹಾಗೆಯೆ ಜಿಲ್ಲಾ ಮಟ್ಟದಲ್ಲಿ ನಡೆದ ಉದ್ಯೋಗ ಮೇಳಗಳಲ್ಲಿ 1,20,534 ಅಭ್ಯರ್ಥಿಗಳು ಭಾಗವಹಿಸಿದ್ದು, 24,391 ಅಭ್ಯರ್ಥಿಗಳು ವಿವಿಧ ಕಂಪನಿಗಳಿಗೆ ನೇಮಕಗೊಂಡಿದ್ದಾರೆ. ಸುಮಾರು 48,232 ಅರ್ಭರ್ಥಿಗಳನ್ನು ಹೆಸರನ್ನು ಶಾರ್ಟ್‌ಲಿಸ್ಟ್ ಮಾಡಲಾಗಿದೆ ಎಂದು ವಿವರಿಸಿದರು.

ಸರ್ಕಾರಿ ಹುದ್ದೆಗಳಿಗೆ ಅನುಮೋದನೆ: ಸರ್ಕಾರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶದಿಂದ ಇಲ್ಲಿಯವರೆಗೆ 28 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಜೊತೆಗೆ 35 ಸಾವಿರ ಹುದ್ದೆಗಳಿಗೆ ಅನುಮೋದನೆ ನೀಡಲಾಗಿದೆ ರಾಜ್ಯ ಸರಕಾರದಲ್ಲಿ 7 ಲಕ್ಷ ಸರ್ಕಾರಿ ಹುದ್ದೆಗಳು ಮಾತ್ರವಿದ್ದು, ಉಳಿದವರಿಗೆಲ್ಲ ಖಾಸಗಿ ಕಂಪನಿಗಳಲ್ಲಿ ಮತ್ತು ಹಲವು ಸಂಸ್ಥೆಗಳಲ್ಲಿ ಉದ್ಯೋಗ ಕೊಡಿಸಲು ಉದ್ಯೋಗ ಮೇಳ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ನಿರುದ್ಯೋಗಿ ಯುವ–ಯುವತಿಯರು ಉದ್ಯೋಗ ಮೇಳಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

42 ಸಾವಿರಕ್ಕೂ ಅಧಿಕ ನೋಂದಣಿ: ನಿರುದ್ಯೋಗ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಎಲ್ಲಾ ಜಿಲ್ಲೆಗಳಲ್ಲಿ ಉದ್ಯೋಗಮೇಳ ಆಯೋಜಿಸಿ ಸ್ಥಳದಲ್ಲೇ ಉದ್ಯೋಗ ಕೊಡಿಸುವ ನಿಟ್ಟಿನಲ್ಲಿ ಇಂದು ಮೈಸೂರಿನಲ್ಲಿ ನಡೆಯುತ್ತಿರುವ ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ 42 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಎಲ್ಲರಿಗೂ ಉದ್ಯೋಗ ದೊರಕಿಸಿ ಕೊಡುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ ಎಂದರು.


ನೇಮಕಾತಿ ಪತ್ರ ವಿತರಣೆ: ಉದ್ಯೋಗಮೇಳದಲ್ಲಿ ಸ್ಥಳದಲ್ಲೇ ನೇಮಕಗೊಂಡ ಹಲವು ಅಭ್ಯರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನೇಮಕಾತಿ ಪತ್ರ ವಿತರಿಸಿ ಶುಭ ಕೋರಿದರು. ಹಾಗೆಯೇ ಸಂಕಲ್ಪ ಟೂಲ್ ಕಿಟ್‌ನಲ್ಲಿ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ಯಂತ್ರ ವಿತರಣೆ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಕೆ.ಶಿವಕುಮಾರ್, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ.ಪುಷ್ಪ ಅಮರನಾಥ್, ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶಿವಕಾಂತಮ್ಮ ನಾಯಕ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್. ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸೀಫ್ ಅವರು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

ಯುವನಿಧಿ ನಿಲ್ಲಲ್ಲ...!

ಸರ್ಕಾರದ 5 ಗ್ಯಾರಂಟಿ ಯೋಜನೆಗಳಲ್ಲೊಂದಾದ ಯುವನಿಧಿ ಯೋಜನೆ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಯೋಜನೆಗೆ ಒಳಪಟ್ಟ ಪ್ರತಿಯೊಬ್ಬರು 2 ವರ್ಷಗಳ ಕಾಲ ಫಲಾನುಭವಿಗಳಾಗಿರಲಿದ್ದಾರೆ. ಯುವನಿಧಿ ಫಲಾನುಭವಿಗಳು ಕೆಲಸ ಪಡೆದುಕೊಂಡಲ್ಲಿ ಮಾತ್ರವೇ ಹಣ ನಿಲ್ಲಿಸಲಾಗುತ್ತದೆ ಹೊರತು ಕೌಶಲ್ಯ ಅಭಿವೃದ್ಧಿ ತರಬೇತಿಗೆ ಪಡೆಯುವವರಿಗೆ ಯುವನಿಧಿ ಹಣ ನಿಲ್ಲಿಸುವುದಿಲ್ಲ. ಹಾಗಾಗಿ ಸುಳ್ಳು ಪ್ರಚಾರಗಳಿಗೆ ಕಿವಿಗೊಡದೆ ತರಬೇತಿ ಪಡೆಯಿರಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿ



ಉದ್ಯೋಗ ಮೇಳದಲ್ಲಿ ಸಂದರ್ಶನದ ಸರತಿ ಸಾಲಿನಲ್ಲಿ ನಿಂತಿರುವ ಯುವಕ–ಯುವತಿಯರು

ನಿರುದ್ಯೋಗ ಸಮಸ್ಯೆ ತೊಡೆದು ಹಾಕುವುದೇ ಪ್ರಮುಖ ಉದ್ದೇಶ

ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್

ಮೈಸೂರು, ಅ.17(ಎಂಕೆ)– ಪ್ರತಿಯೊಬ್ಬ ಉದ್ಯೋಗಕಾಂಕ್ಷಿಗಳು ಉದ್ಯೋಗವನ್ನು ಪಡೆದುಕೊಳ್ಳಬೇಕು ಎಂಬ ನಿಟ್ಟಿನಲ್ಲಿ ಹಲವಾರು ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಂಘಟಿಸಿ ಉದ್ಯೋಗ ಮೇಳ ನಡೆಸಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಹೇಳಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಮಾತನಾಡಿದ ಅವರು, ನಿರುದ್ಯೋಗ ಎಂಬುದು ನಮ್ಮ ದೇಶದ ಒಂದು ದೊಡ್ಡ ಸಮಸ್ಯೆಯಾಗಿದ್ದು, ನಿರುದ್ಯೋಗ ಸಮಸ್ಯೆಯನ್ನು ತೊಡೆದು ಹಾಕುವುದು ನಮ್ಮ ಪ್ರಮುಖ ಉದ್ದೇಶವಾಗಿದೆ ಎಂದರು. ಯುವಕರಿಗೆ ಒಂದು ಉತ್ತಮವಾದಂತಹ ಭವಿಷ್ಯವನ್ನು ಕಟ್ಟಿಕೊಡಬೇಕು ಹಾಗೂ ಅವರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಯುವನಿಧಿ, ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ನಡೆಸುತ್ತಾ ಬರಲಾಗುತ್ತಿದೆ ಎಂದು ಹೇಳಿದರು.

ಹಾಸನಾಂಬೆಗೆ ಒಂದೇ ವಾರದಲ್ಲಿ 10.5 ಕೋಟಿ ಆದಾಯ


ಹಾಸನ, ಅ. 17– ಹಾಸನಾಂಬ ದರ್ಶನೋತ್ಸವ ಆರಂಭಗೊಂಡು ಕೇವಲ ಒಂದೇ ವಾರದಲ್ಲಿ (8 ದಿನ) ಹೊಸ ಇತಿಹಾಸ ಸೃಷ್ಟಿಯಾಗಿದೆ. ಇಲ್ಲಿಯವರೆಗೂ 15,30,000 ಭಕ್ತರು ಹಾಸನಾಂಬ ದೇವಿ ದರ್ಶನ ಪಡೆದುಕೊಂಡಿದ್ದಾರೆ. \ಕೇವಲ 8 ದಿನದಲ್ಲಿ ದೇವಾಲಯಕ್ಕೆ 10.5 ಕೋಟಿ ರೂ. ಆದಾಯ ಹರಿದು ಬಂದಿದ್ದು, ದಾಖಲೆಯಾಗಿದೆ.

ಈ ಬಾರಿ ವಿಐಪಿ, ವಿವಿಐಪಿ ಪಾಸ್‌ಗಳನ್ನು ರದ್ದುಪಡಿಸಿರುವುದರಿಂದ ಭಕ್ತರು ಸುಗಮವಾಗಿ ದರ್ಶನ ಪಡೆಯುತ್ತಿದ್ದಾರೆ. ಇದರಿಂದಾಗಿ ಭಕ್ತರಲ್ಲಿ ಸಂತಸ ಮೂಡಿದೆ. ನಾಡಿನ ನಾನಾ ಭಾಗಗಳಿಂದ ಭಕ್ತರ ದಂಡೇ ಹಾಸನಾಂಬೆಯ ದರ್ಶನಕ್ಕೆ ಹರಿದು ಬರುತ್ತಿದೆ. ಇನ್ನೂ ಐದು ದಿನ ಹಾಸನಾಂಬ ಜಾತ್ರಾ ಮಹೋತ್ಸವ ಇದ್ದು, ಈ ಐದು ದಿನದಲ್ಲಿ ಲಕ್ಷಾಂತರ ಭಕ್ತರು ದರ್ಶನಕ್ಕೆ ಆಗಮಿಸುವ ನಿರೀಕ್ಷೆ ಇದೆ.

ಹಾಸನ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶುಕ್ರವಾರ ಹಿನ್ನೆಲೆಯಲ್ಲಿ ಸಾಗರೋಪಾದಿಯಲ್ಲಿ ಭಕ್ತರು ಆಗಮಿಸಿದ್ದಾರೆ. ಇಂದು 1,60,000 ಭಕ್ತರಿಂದ ದರ್ಶನ ಮಾಡಿದ್ದು, ಜಿಲ್ಲಾಡಳಿತಕ್ಕೆ ಸವಾಲಾಗಿದೆ. ಎಲ್ಲಾ ಸರತಿ ಸಾಲುಗಳು ಸಂಪೂರ್ಣ ಭರ್ತಿಯಾಗಿವೆ. ಇಂದು 4 ಲಕ್ಷಕ್ಕೂ ಹೆಚ್ಚು ಭಕ್ತರು ದರ್ಶನ ಪಡೆಯುವ ನಿರೀಕ್ಷೆ ಇದೆ. ನಾನೇ ಧರ್ಮದರ್ಶನದ ಸಾಲಿನಲ್ಲಿ ಬಂದು 3 ಗಂಟೆ ನಂತರ ದರ್ಶನ ಪಡೆದಿದ್ದೇನೆ. ಈಗ ಸಮಯ ಹೆಚ್ಚಾಗುತ್ತಿದೆ. ಕೆಲವು ಭಕ್ತರು ಅಸಮಾಧಾನ ತೋಡಿಕೊಳ್ಳುತ್ತಿದ್ದಾರೆ. ಬೆಳಗ್ಗೆ 7 ಗಂಟೆಗೆ ಸಾಲಿನಲ್ಲಿ ನಿಂತವರು, ಸಂಜೆ 4 ಗಂಟೆಗೆ ದರ್ಶನ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

1000 ಕೊಟ್ಟು ಬಂದರೆ ಸರತಿ ಸಾಲು ಕಡಿಮೆ ಇರುತ್ತದೆ ಅಷ್ಟೇ. ಅನುಕೂಲವಾಗಲಿ ಎಂದು ಮಾಡಿದ್ದೇವೆ ಹೊರತು ಹಣ ಮಾಡಲು ಅಲ್ಲ. ಎರಡರಿಂದ ಮೂರು ಪಟ್ಟು ಹೆಚ್ಚು ಭಕ್ತರು ಬಂದಿದ್ದಾರೆ. ಮುಂದೆ ಒಂದು ದಿನದಲ್ಲಿ ಭಕ್ತರ ಸಂಖ್ಯೆ ಐದು ಲಕ್ಷ ಮೀರಬಹುದು ಎಂದು ತಿಳಿಸಿದರು.

ಧರ್ಮದರ್ಶನದ ಸಾಲಿನಲ್ಲಿ ಬರುತ್ತಿರುವವರಿಗೆ 7ರಿಂದ 8 ಗಂಟೆ, 1000 ರೂಪಾಯಿ ಟಿಕೆಟ್ ಪಡೆದವರಿಗೆ 3ರಿಂದ 4 ಗಂಟೆ ಹಾಗೂ 300 ರೂ. ಟಿಕೆಟ್ ಪಡೆದವರಿಗೆ 6ರಿಂದ 7 ಗಂಟೆ ಸಮಯ ಆಗುತ್ತಿದೆ. ಹಾಸನಾಂಬೆ ದರ್ಶನಕ್ಕೆ ನಿಮಗೆ ಸಿಗುವುದು ಕೆಲ ಸೆಕೆಂಡ್‌ಗಳು ಮಾತ್ರ ಪೂರ್ವ ತಯಾರಿ ಮಾಡಿಕೊಂಡು ಬಂದು ಆಶೀರ್ವಾದ ಪಡೆಯಿರಿ. ಮೊದಲು ತಾಳ್ಮೆ ಕಲಿಯಿರಿ, ಮೊಬೈಲ್‌ಫೋನ್ ಬಳಸಬೇಡಿ. ಮಕ್ಕಳನ್ನು ಮೇಲೆತ್ತಿಕೊಂಡು ಬನ್ನಿ, ತುಂಬಾ ಒತ್ತಡ ಇದೆ. ದ್ವಾರ ಬಾಗಿಲು ಬಳಿ ಬಂದ ಒಡನೆ ದೇವಿ ಕಡೆ ನೋಡಿ ಎಂದು ಭಕ್ತರಿಗೆ ಡಿಸಿ ಕೆ.ಎಸ್.ಲತಾಕುಮಾರಿ ಮನವಿ ಮಾಡಿದರು.



ಹಾಸನಾಂಬೆ ದರ್ಶನ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಶುಕ್ರವಾರ ಬೆಳಗ್ಗೆ ಕುಟುಂಬ ಸಮೇತರಾಗಿ ಹಾಸನಾಂಬೆಯ ದರ್ಶನ ಪಡೆದರು. ಈ ವೇಳೆ ಅನಿತಾ ಕುಮಾರಸ್ವಾಮಿ, ಪುತ್ರ ನಿಖಿಲ್, ಸೊಸೆ ರೇವತಿ, ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಜೊತೆಗಿದ್ದರು.

ಹುಲಿದಾಳಿಯಿಂದ ಗಾಯಗೊಂಡ ರೈತನ ಕುಟುಂಬದ ಒಬ್ಬರಿಗೆ ಉದ್ಯೋಗ

- ಬಡಗಲಪುರ ಗ್ರಾಮಸ್ಥರಿಗೆ ಹಿರಿಯ ಅರಣ್ಯಾಧಿಕಾರಿ ಪ್ರಭಾಕರನ್ ಭರವಸೆ
- ಇಂದಿನಿಂದ ಮತ್ತೆ ಕಾರ್ಯಾಚರಣೆ

ಮೈಸೂರು, ಅ.17(ಎಂಟಿವೈ)– ವ್ಯಕ್ತಿ ಮೇಲೆ ಹುಲಿ ದಾಳಿ ನಡೆದ ಪ್ರಕರಣದಿಂದ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾಗಿದ್ದ ಬಡಗಲಪುರ ಗ್ರಾಮಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಪ್ರಭಾಕರನ್ ಭೇಟಿ ನೀಡಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ, ಎಚ್ಚರಿಕೆಯಿಂದ ಹುಲಿ ಸೆರೆ ಕಾರ್ಯಾಚರಣೆ ಮುಂದುವರಿಸುವುದಾಗಿ ಭರವಸೆ ನೀಡಿದರು.

ಕಾಡಂಚಿನ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಉಪಟಳ ನೀಡುತ್ತಿದ್ದ ಹುಲಿ ಸೆರೆಗಾಗಿ ಕಾರ್ಯಾಚರಣೆ ಆರಂಭಿಸಿದ ದಿನವೇ(ಅ.16) ಗ್ರಾಮದ ನಿವಾಸಿ ಮಹದೇವೇಗೌಡ ಅವರ ಮೇಲೆ ದಾಳಿ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಸಂಜೆಯಿಂದಲೇ ಉದ್ರಿಕ್ತಗೊಂಡಿದ್ದ ಗ್ರಾಮಸ್ಥರು, ನುಗು ಆರ್‌ಎಫ್‌ಓ ಸೇರಿದಂತೆ ಕೆಲ ಸಿಬ್ಬಂದಿಗಳನ್ನು ಕೂಡಿ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದರು. ಅಲ್ಲದೆ, ಹುಲಿ ಕಾರ್ಯಾಚರಣೆಗೆ ಅಡ್ಡಿಪಡಿಸಿದ್ದರು. ಸ್ಥಳಕ್ಕೆ ಮೇಲಾಧಿಕಾರಿಗಳು ಬರುವಂತೆ ಬಿಗಿಪಟ್ಟು ಹಿಡಿದಿದ್ದರು.


ಇಲಾಖಾ ಕರ್ತವ್ಯದ ಮೇರೆಗೆ ಬೆಂಗಳೂರಿಗೆ ತೆರಳಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಪ್ರಭಾಕರನ್ ಶುಕ್ರವಾರ ಬೆಳಗ್ಗೆ ಬಡಗಲಪುರ ಗ್ರಾಮಕ್ಕೆ ಭೇಟಿ ನೀಡಿದರು. ಗ್ರಾಮಸ್ಥರ ಸಭೆಯಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕಾಡಂಚಿನ ಗ್ರಾಮದಲ್ಲಿ ಆನೆ, ಹುಲಿ, ಚಿರತೆ, ಕಾಡಂದಿ ಹಾಗೂ ಜಿಂಕೆಗಳ ಉಪಟಳ ದಿಂದ ಪ್ರಾಣ ಹಾನಿ, ಬೆಳೆ ಹಾನಿ ಯಾಗುತ್ತಲೇ ಇದೆ. ಇದರಿಂದ ರೈತರು ತತ್ತರಿಸುತ್ತಿದ್ದಾರೆ. ಬೆಳೆ ಹಾನಿಗೆ ನೀಡುತ್ತಿರುವ ಪರಿಹಾರ ಹೆಚ್ಚಿಸಬೇಕು. ವನ್ಯಜೀವಿಗಳ ಹಾವಳಿಗೆ ಕಡಿವಾಣ ಹಾಕಬೇಕು. ಕಾಡಿನಿಂದ ನಾಡಿಗೆ ಪ್ರಾಣಿಗಳು ಬಂದಿರುವ ಮಾಹಿತಿ ನೀಡಿದ ಕೂಡಲೇ ಅರಣ್ಯ ಸಿಬ್ಬಂದಿಗಳು ಸ್ಥಳಕ್ಕೆ ಬಂದು, ಗ್ರಾಮಸ್ಥರ ಅಳಲು ಆಲಿಸಬೇಕು. ಆದರೆ, ಅಧಿಕಾರಿಗಳು ಸ್ಥಳಕ್ಕೆ ಬರದೇ ಇದ್ದರೆ ರೈತರು ಹಾಗೂ ಅರಣ್ಯ ಇಲಾಖೆ ನಡುವೆ ಸಂಘರ್ಷ ಉಂಟಾಗುತ್ತದೆ. ಹುಲಿ ಸೆರೆ ಕಾರ್ಯಾಚರಣೆ ಕುರಿತು ಸ್ಥಳೀಯರಿಗೆ ಮಾಹಿತಿ ನೀಡಿಲ್ಲ. ಸ್ಥಳದಲ್ಲಿ ಹಿರಿಯ ಅಧಿಕಾರಿಗಳಿಲ್ಲ. ಗಾಯಾಳುವನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಿಲ್ಲ. ಈ ಕಾರಣದಿಂದ ಗ್ರಾಮಸ್ಥರು ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಮಹದೇವೇಗೌಡರ ಕುಟುಂಬಸ್ಥರಿಗೆ ಉದ್ಯೋಗ ನೀಡಬೇಕು. ಅವರಿಗೆ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಬೆಳಗ್ಗೆ ಆರಂಭವಾದ ಸಭೆ ಮಧ್ಯಾಹ್ನದವರೆಗೂ ಮುಂದುವರೆಯಿತು. ಸಭೆಯುದ್ದಕ್ಕೂ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಲೇ ಇದ್ದರು. ಪದೆ ಪದೇ ಮಾತಿನ ಚಕಮಕಿ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಳ್ಳುತ್ತಲೇ ಇತ್ತು. ಅಂತಿಮವಾಗಿ ಗ್ರಾಮದ ಮುಖಂಡರು ಉದ್ರಿಕ್ತರನ್ನು ಸಮಾದಾನ ಮಾಡಿದರು.

ಬಳಿಕ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಮಾತನಾಡಿ, ಹುಲಿ ದಾಳಿಯಿಂದ ಗಾಯಗೊಂಡಿರುವ ಮಹದೇವೇಗೌಡರಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ. ಚಿಕಿತ್ಸಾ ವೆಚ್ಚವನ್ನು ಭರಿಸಲಾಗುವುದು. ಗಾಯಾಳು ಕುಟುಂಬದ ಸದಸ್ಯರೊಬ್ಬರಿಗೆ ತಾತ್ಕಾಲಿಕವಾಗಿ ಉದ್ಯೋಗ ನೀಡಲಾಗುವುದು. ಗಾಯಾಳುವಿನ ಮಕ್ಕಳ ಶಿಕ್ಷಣಕ್ಕೆ ಇಲಾಖೆ ನೆರವು ನೀಡಲಿದೆ. ಉಪಟಳ ನೀಡುತ್ತಿರುವ ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗುವುದು. ಕಾಡಾನೆ ಅರಣ್ಯ ಪ್ರದೇಶದಿಂದ ನುಸುಳಿ ಬರುವು ದನ್ನು ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸರಗೂರು ತಹಶೀಲ್ದಾರ್ ಮೋಹನ್ ಕುಮಾರಿ, ಹಾದನೂರು ಗ್ರಾ.ಪಂ ಸದಸ್ಯ ಬಿ.ಎಸ್. ಗಂಗಾಧರ್ ಇನ್ನಿತರರು ಉಪಸ್ಥಿತರಿದ್ದರು.



ಹುಲಿ ಉಪಟಳ ನೀಡುತ್ತಿದ್ದ ಸರಗೂರು ತಾಲೂಕಿನ ಬಡಗಲಪುರ ಗ್ರಾಮದಲ್ಲಿ ಶುಕ್ರವಾರ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಅವರಿಗೆ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಗ್ರಾಮಸ್ಥರು ವಿವಿಧ ಬೇಡಿಕೆಯುಳ್ಳ ಮನವಿ ಸಲ್ಲಿಸಿದರು.

ಕಾರ್ಯಾಚರಣೆಗೆ ಜನ ಅಡ್ಡಿ ಮಾಡಬೇಡಿ

ಹುಲಿ ಕಾರ್ಯಾಚರಣೆಗೆ ಜನ ಅಡ್ಡಿ ಮಾಡಿಬೇಡಿ. ಕಾರ್ಯಾಚರಣೆ ವೇಳೆ ಹೆಚ್ಚು ಜನ ಸೇರಬಾರದು. ಹುಲಿ ಸಂಚರಿಸುವ ಕಾಡಂಚಿನ ಹೊಲ, ತೋಟದಲ್ಲಿ ಓಡಾಡಂತೆ ಮನವಿ ಮಾಡಿದ ಅರಣ್ಯಾಧಿಕಾರಿಗಳು, ಉಪಟಳ ನೀಡುವ ಹುಲಿ ಸೆರೆಗೆ ಶ್ರಮಿಸುವುದಾಗಿ ಭರವಸೆ ನೀಡಿದ್ದಾರೆ.

ಇಂದಿನಿಂದ ಹುಲಿ ಸೆರೆ ಕಾರ್ಯಾಚರಣೆ ಚುರುಕು

ಬಡಗಲಪುರ ಗ್ರಾಮದ ಬಳಿ ವ್ಯಕ್ತಿ ಮೇಲೆ ದಾಳಿ ನಡೆಸಿದ ಹುಲಿ ಸೆರೆಗೆ ಶನಿವಾರ (ಅ.18)ದಿಂದ ಕಾರ್ಯಾಚರಣೆ ಚುರುಕುಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಸ್ಥಳದಲ್ಲಿ ಅಂಬಾರಿ ಆನೆ, ಕ್ಯಾಪ್ಟನ್ ಅಭಿಮನ್ಯು ಹಾಗೂ ಭಗೀರಥ ಆನೆಗಳಿದ್ದು, ಶನಿವಾರ ದಸರಾ ಆನೆಗಳಾದ ಭೀಮ ಮತ್ತು ಮಹೇಂದ್ರ ಆನೆಯೊಂದಿಗೆ ಗುರಿಕಾರ ದುಬಾರೆ ಡಿಆರ್‌ಎಫ್‌ಓ ರಂಜನ್ ಹಾಗೂ ಇನ್ನಿತರರು ಹುಲಿ ಸೆರೆ ಕಾರ್ಯಾಚರಣೆ ಆರಂಭಿಸಲಿದ್ದಾರೆ.



ಗ್ರಾಮಸ್ಥರೊಂದಿಗೆ ಸಭೆ ನಡೆಸುತ್ತಿರುವ ಅಧಿಕಾರಿಗಳು.

ಛಲವಾದಿ, ಈಶ್ವರಪ್ಪಗೆ ನೀಡಿದ್ದ ಭದ್ರತೆ ವಾಪಸ್ ಪಡೆದ ಸರ್ಕಾರ

ಬೆಂಗಳೂರು: ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಕೆ.ಎಸ್.ಈಶ್ವರಪ್ಪ ಮನೆಗೆ ನೀಡಿದ್ದ ಭದ್ರತೆಯನ್ನು ಸರ್ಕಾರ ವಾಪಸ್ ಪಡೆದುಕೊಂಡಿದೆ. ಈ ಕುರಿತು ಮಾತನಾಡಿದ ಛಲವಾದಿ, ಭದ್ರತಾ ದೃಷ್ಟಿಯಿಂದ ನಮ್ಮ ಮನೆಗೆ ಬೆಂಗಾವಲು ರಕ್ಷಕರನ್ನು ಕೊಟ್ಟಿದ್ದರು. ಆದರೆ ಮೂವರು ಭದ್ರತಾ ಸಿಬ್ಬಂದಿಯನ್ನು ವಾಪಸ್ ಪಡೆದಿದ್ದಾರೆ. ಇದರ ಹಿಂದೆ ಪ್ರಿಯಾಂಕ್ ಖರ್ಗೆ ಇದ್ದಾರೆ. ನನಗೆ ಏನಾದರೂ ಆದರೆ ಸರ್ಕಾರ ಎಷ್ಟು ಹೊಣೆಯೋ, ಪ್ರಿಯಾಂಕ್ ಖರ್ಗೆ ಕುಟುಂಬವೂ ಕೂಡ ಹೊಣೆ ಎಂದು ಆಕ್ರೋಶ ಹೊರಹಾಕಿದರು. ಇವರ ಭ್ರಷ್ಟಾಚಾರ ಎತ್ತಿ ತೋರಿಸುವ ಕೆಲಸ ವಿಪಕ್ಷ ನಾಯಕರು ಮಾಡಬಾರದು ಎಂಬ ನಿರ್ಧಾರಕ್ಕೆ ಸರ್ಕಾರ ಬಂದಿದೆ. ನಾನು ವಿಪಕ್ಷ ನಾಯಕನಾಗಿ ಒಂದೂವರೆ ವರ್ಷ ಆಗುತ್ತಿದೆ. ಇಲ್ಲಿವರೆಗೂ ಸರ್ಕಾರಿ ಮನೆ ಕೊಟ್ಟಿಲ್ಲ. ಇದೇ ಸ್ಥಾನದಲ್ಲಿ ಸಿದ್ದರಾಮಯ್ಯ ಇದ್ದಾಗ ಜಗಳ ಮಾಡಿ ಮನೆ ತೆಗೆದುಕೊಂಡಿದ್ದರು ಎಂದರು.



ನಾರಾಯಣಸ್ವಾಮಿ



ಈಶ್ವರಪ್ಪ


ನನಗೆ ಕೊಟ್ಟ ಭದ್ರತೆಯನ್ನು ವಾಪಸ್ ಪಡೆದಿದ್ದು ಯಾಕೆ. ಇದಕ್ಕೆ ಗೃಹ ಸಚಿವರು ಉತ್ತರ ಕೊಡಲೇಬೇಕು. ಇಲ್ಲದೇ ಇದ್ದರೆ ನನಗೆ ಕೊಟ್ಟಿರುವ ಕಾರು, ಬೆಂಗಾವಲು ಭದ್ರತಾ ಸಿಬ್ಬಂದಿ ಎಲ್ಲರನ್ನೂ ವಾಪಸ್ ಕಳುಹಿಸುತ್ತೇನೆ. ಪ್ರಿಯಾಂಕ್ ಖರ್ಗೆ ಮನೆಗೆ ಬೆದರಿಕೆ ಬಂದಿದೆ ಎಂದು ಮತ್ತಷ್ಟು ಭದ್ರತೆ ನೀಡಿದ್ದಾರೆ. ನನ್ನ ಭದ್ರತೆ ವಾಪಸ್ ಪಡೆದು, ಅವರಿಗೆ ಭದ್ರತೆ ಹೆಚ್ಚಿಸಿದ್ದಾರೆ ಎಂದು ಹೇಳಿದರು.

ಹುಲಿ ದಾಳಿಗೀಡಾದ ಮಹದೇವೆಗೌಡ ಕುಟುಂಬಕ್ಕೆ ಸಿಎಂ ಸಾಂತ್ವನ

ಚಿಕಿತ್ಸಾ ವೆಚ್ಚ, ಹೆಚ್ಚಿನ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸೂಚನೆ

ಮೈಸೂರು, ಅ.17(ಎಂಟಿವೈ)– ಹುಲಿ ದಾಳಿಗೆ ತುತ್ತಾಗಿ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಕುಟುಂಬದ ಸದಸ್ಯರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಭೇಟಿ ಮಾಡಿ ಸಾಂತ್ವನ ಹೇಳಿದರಲ್ಲದೆ ಘಟನೆಯ ಬಗ್ಗೆ ಮಾಹಿತಿ ಪಡೆದು, ಹೆಚ್ಚಿನ ಪರಿಹಾರ ನೀಡುವಂತೆ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಉದ್ಯೋಗ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹುಲಿ ದಾಳಿಗೆ ಒಳಗಾಗಿ ಗಂಭೀರವಾಗಿ ಗಾಯಗೊಂಡಿರುವ ಸರಗೂರು ತಾಲೂಕಿನ ಬಡಗಲಪುರ ಗ್ರಾಮದ ಮಹದೇವೆಗೌಡ(43) ಕುಟುಂಬ ಸದಸ್ಯರು ಹಾಗೂ ಸಂಬಂಧಿಗಳೊಂದಿಗೆ ಚರ್ಚಿಸಿದರು. ಗಾಯಾಳು ಮಹದೇವೆಗೌಡ ಅವರಿಗೆ ಶಸ್ತ್ರಚಿಕಿತ್ಸೆ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಕುಟುಂಬ ಸದಸ್ಯರು ಹಾಗೂ ಗ್ರಾಮದ ಕೆಲ ಮುಖಂಡರೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.



ಮೈಸೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಗೆ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ, ಹುಲಿ ದಾಳಿಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಮಹದೇವೆಗೌಡ ಅವರ ಕುಟುಂಬಸ್ಥರೊಂದಿಗೆ ಚರ್ಚಿಸಿ ಸಾಂತ್ವಾನ ಹೇಳಿದರು.

ಇದೇ ವೇಳೆ ಅಪೋಲೋ ಆಸ್ಪತ್ರೆಯ ಮುಖ್ಯಸ್ಥ ಡಾ.ಎನ್.ಜಿ.ಭರತೇಶ್‌ರೆಡ್ಡಿ ಅವರು, ಗಾಯಾಳು ಮಹದೇವೆಗೌಡ ಅವರ ಪರಿಸ್ಥಿತಿ, ಚಿಕಿತ್ಸೆಗೆ ಸ್ಪಂದಿಸುತ್ತಿರುವುದು, ಕಣ್ಣಿನ ದೃಷ್ಠಿ ಬಗ್ಗೆ ಮಾಹಿತಿ ನೀಡಿದರು. ಗಾಯಾಳುವಿನ ಕುಟುಂಬಸ್ಥರು ಮಾತನಾಡಿ, ಎರಡೂ ಕಣ್ಣುಗಳು ಹಾನಿಯಾಗಿವೆ. ಕಣ್ಣಿನ ನರಗಳೆಲ್ಲವೂ ಹಾನಿಯಾಗಿರುವುದರಿಂದ ದೃಷ್ಟಿ ಬರುವುದಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಆರೋಗ್ಯ ಸುಧಾರಿಸಿ ಹೊರಗೆ ಬಂದರೂ, ಮುಂದಿನ ದಿನಗಳಲ್ಲಿ ಸ್ವತಂತ್ರವಾಗಿ ಜೀವನ ಸಾಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಅಳಲು ತೋಡಿಕೊಂಡರು.

ಈ ವೇಳೆ ಸಿಎಂ ಸಿದ್ದರಾಮಯ್ಯ ಕಣ್ಣಿನ ಗಾಯದ ಬಗ್ಗೆ ಕೇಳುತ್ತಿದ್ದಂತೆಯೇ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಗಾಯದ ಬಗ್ಗೆ ವಿವರಣೆ ನೀಡಿದರು. ಹುಲಿ ಪಂಜದಿಂದ ಬಡಿದ ಪರಿಣಾಮ ಎರಡೂ ಕಣ್ಣುಗಳು ಹಾನಿಯಾಗಿವೆ. ಒಂದು ಕಣ್ಣಿನ ಗುಡ್ಡೆ ಹೊರಗೆ ನೇತಾಡುತ್ತಿತ್ತು ಎಂದು ತಿಳಿಸಿದರು. ಅಲ್ಲಿಯೇ ಇದ್ದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಹುಲಿ ದಾಳಿ ಬಳಿಕ ಗಾಯಾಳು ಇದ್ದ ಸ್ಥಿತಿಯ ಬಗ್ಗೆ ವಿಡಿಯೋ ತೋರಿಸಿದರು.

ವಿಡಿಯೋ ನೋಡಿ ಮರುಗಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಗಾಯಾಳುವಿಗೆ ಉತ್ತಮ ಚಿಕಿತ್ಸೆ ಕೊಡಿಸಬೇಕು. ಚಿಕಿತ್ಸಾ ವೆಚ್ಚವನ್ನು ಸಂಪೂರ್ಣವಾಗಿ ಭರಿಸಬೇಕು. ಹೆಚ್ಚಿನ ಪರಿಹಾರ ನೀಡಬೇಕು ಎಂದು ಮೈಸೂರು ವೃತ್ತದ ಸಿಎಫ್ ಡಾ.ರವಿಶಂಕರ್ ಅವರಿಗೆ ಸೂಚನೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಫ್ ಡಾ.ರವಿಶಂಕರ್, ಕಳೆದ ರಾತ್ರಿಯಿಂದಲೇ ಇಲಾಖಾ ವತಿಯಿಂದ ಚಿಕಿತ್ಸೆ ಕೊಡಿಸಲಾಗುತ್ತಿದೆ. ವೈದ್ಯರಿಂದ ಆರೋಗ್ಯ ಸ್ಥಿತಿ ಬಗ್ಗೆ ಕ್ಷಣಕ್ಷಣಕ್ಕೂ ಮಾಹಿತಿ ಪಡೆಯುತ್ತಿದ್ದೇವೆ. ನಿಯಮಾನುಸಾರ ಹೆಚ್ಚಿನ ಪರಿಹಾರ ಕೊಡಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಶಾಸಕ ಡಿ.ರವಿಶಂಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 18 ಅಕ್ಟೋಬರ್ 2025

ಮದ್ಯ ಮಾರಾಟ; ವಾರದಲ್ಲಿ ವರದಿ ನೀಡಿ

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರ ತಾಕೀತು

ಮಂಡ್ಯ, ಅ.17–ಜಿಲ್ಲೆಯಾದ್ಯಂತ ಅನುಮಾನಾಸ್ಪದ ಜಾಗಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವವರನ್ನು ಪತ್ತೆಹಚ್ಚಿ ಕಠಿಣ ಕ್ರಮ ಜರುಗಿಸಿರುವ ಬಗ್ಗೆ ವಾರದೊಳಗೆ ಆಯೋಗಕ್ಕೆ ವರದಿ ನೀಡುವಂತೆ ಅಧಿಕಾರಿಗಳಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ತಾಕೀತು ಮಾಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ನಡೆದ ಆರ್.ಟಿ.ಇ, ಪೋಕ್ಸೋ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಮಕ್ಕಳ ಕಳ್ಳ ಸಾಗಾಣಿಕೆ, ಪಿ.ಸಿ.ಪಿಎನ್‌ಡಿಟಿ ಹಾಗೂ ಬಾಲ ನ್ಯಾಯ ಕಾಯಿದೆಯ ಅನುಷ್ಠಾನ ಹಾಗೂ ಮಕ್ಕಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮ/ಯೋಜನೆಗಳ ಕುರಿತು ಜಿಲ್ಲಾ ಮಟ್ಟದ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲಾ ಆವರಣ ಹಾಗೂ ಗ್ರಾಮೀಣ ಭಾಗದ ಕೆಲ ಪೆಟ್ಟಿ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿದೆ, ಇದರಿಂದ ಹದಿಹರೆಯದ ಮಕ್ಕಳು ಮಾದಕ ವ್ಯಸನಿಗಳಾಗುತ್ತಿದ್ದಾರೆ ಈ ಬಗ್ಗೆ ಅಧಿಕಾರಿಗಳು ಕಠಿಣ ಕ್ರಮ ಜರುಗಿಸಬೇಕೆಂದು ಆದೇಶಿಸಿದರು.

ಜಿಲ್ಲೆಯಲ್ಲಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕೊಂಡೊಯ್ಯುವ ಆಟೋಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕರೆದುಕೊಂಡು ಹೋಗುತ್ತಿರುವುದು ಗಮನಕ್ಕೆ ಬಂದಿದೆ. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಕೊಂಡೊಯ್ಯುವ ಆಟೋ ಟ್ಯಾಕ್ಸಿ ಚಾಲಕರಿಗೆ ಅಧಿಕಾರಿಗಳು ದಂಡ ವಿಧಿಸಿ ಸೂಕ್ತ ಕ್ರಮ ವಹಿಸಿ 18 ವರ್ಷದೊಳಗಿನ ಮಕ್ಕಳು ವಾಹನ ಚಲಾಯಿಸಿದರೆ ಸದರಿ ವಾಹನದ ಮಾಲೀಕರು ಹಾಗೂ ಮಕ್ಕಳ ಪೋಷಕರ ವಿರುದ್ಧ ಕ್ರಮ ಜರುಗಿಸಿ, ರಸ್ತೆ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.



ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು

ಜಿಲ್ಲೆಯಲ್ಲಿ ಪೋಕ್ಸೋ ಪ್ರಕರಣಗಳನ್ನು ದಾಖಲು ಮಾಡುವಲ್ಲಿ ವಿಳಂಬವಾಗುತ್ತಿರುವುದು ಬೆಳಕಿಗೆ ಬಂದಿದೆ, ಪೋಕ್ಸೋ ಪ್ರಕರಣಗಳನ್ನು ದಾಖಲು ಮಾಡಲು ಪೊಲೀಸರು ವಿಳಂಬ ಮಾಡಬಾರದು, ಅಪ್ರಾಪ್ತ ಹೆಣ್ಣು ಮಕ್ಕಳು ಗರ್ಭಧಾರಣೆ ಮಾಡಿದ ಪಕ್ಷದಲ್ಲಿ ಆಯಾ ತಾಲೂಕು ವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಬೇಕೆಂದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿ, ಹಾಸ್ಟೆಲ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ನೀಡುವ ಪ್ಯಾಡ್‌ಗಳನ್ನು ಸೂಕ್ತ ಸಮಯಕ್ಕೆ ನೀಡಬೇಕು, ಹಾಸ್ಟೆಲ್ ಸಿಬ್ಬಂದಿಗಳು ಹೆಣ್ಣು ಮಕ್ಕಳನ್ನು ತುಚ್ಛವಾಗಿ ನಿಂದಿಸಿರುವುದು ಕಂಡು ಬಂದಿದೆ, ಅಂಥ ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಿ ಎಂದು ಆದೇಶಿಸಿದರು, ಪ್ಯಾಡ್‌ಗಳನ್ನು ವಿಲೇವಾರಿ ಮಾಡಲು ಬರ್ನಿಂಗ್ ಮಿಷನ್‌ಗಳನ್ನು ಬಳಸಿ, ಹೆಣ್ಣು ಮಕ್ಕಳ ಹಾಸ್ಟೆಲ್‌ಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳನ್ನು ಪೊಲೀಸ್ ವೆರಿಫಿಕೇಷನ್ ಮಾಡಿದ ನಂತರವೇ ನೇಮಿಸಿಕೊಳ್ಳಬೇಕು ಎಂದು ಹೇಳಿದರು.

ಎಡಿಸಿ ಶಿವಾನಂದಮೂರ್ತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆನಂದ್ ಮಾತನಾಡಿದರು. ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ–2 ಲಕ್ಷ್ಮಿ, ತಹಶೀಲ್ದಾರ್ ವಿಶ್ವನಾಥ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶ್ರೀನಿವಾಸ, ಆರ್‌ಸಿಎಚ್ ಅಧಿಕಾರಿ ಡಾ..ಅಶ್ವತ್, ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಸೋಮಶೇಖರ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಶಾಂತಿಯುತ ಕೋಟೆ ವಿದ್ಯಾ ಗಣಪತಿ ಮೆರವಣಿಗೆ

ನಾಗಮಂಗಲ, ಅ.17–ಪಟ್ಟಣದ ಇತಿಹಾಸ ಪ್ರಸಿದ್ಧ ಕೋಟೆ ವಿದ್ಯಾಗಣಪತಿ ವಿಸರ್ಜನಾ ಮಹೋತ್ಸವದ ಮೆರವಣಿಗೆಗೆ ಶ್ರೀ ಆದಿಚುಂಚನಗಿರಿಯ ಶ್ರೀ ಮಠದ ಸತ್ಕೀರ್ತಿನಂದನಾಥ ಸ್ವಾಮೀಜಿ ಹಾಸನ ಜಿಲ್ಲೆಯ ಶಂಭುನಂದನಾಥ ಮಹಾ ಸ್ವಾಮೀಜಿರವರು ಸಂಯುಕ್ತವಾಗಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸ್ವಾಮೀಜಿಯವರನ್ನು ಪೂರ್ಣ ಕುಂಭಮೇಳದೊಂದಿಗೆ ಸ್ವಾಗತಿಸಿದ ಎಂಎಲ್‌ಸಿ ದಿನೇಶ್ ಗೂಳಿಗೌಡ, ಮನ್ಮುಲ್ ನಿರ್ದೇಶಕ ಅಪ್ಪಾಜಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಗುತ್ತಿಗೆದಾರ ಲಕ್ಷ್ಮಿಕಾಂತ್, ಸೇರಿದಂತೆ ಹಲವು ಮುಖಂಡರು ಶ್ರೀಗಳ ಜೊತೆಗೆ ಭಾಗವಹಿಸಿದ್ದರು.

ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ಹೋಮ, ಹವನ, ಪಂಚಾಭಿಷೇಕ ಜರುಗಿದವು. ವಿವಿಧ ಬಗ್ಗೆಯ ಹೂವುಗಳಿಂದ ಪುಷ್ಪ ಮಂಟಪವನ್ನು ಅಲಂಕಾರಗೊಳಿಸಿ ಶ್ರೀ ಕೋಟೆ ವಿದ್ಯಾ ಗಣಪತಿಮೂರ್ತಿಯನ್ನು ಅಲಂಕೃತ ಪುಷ್ಪ ಮಂಟಪದಲ್ಲಿ ಪ್ರತಿಷ್ಠಾಪಿಸಿ ಟ್ರ್ಯಾಕ್ಟರ್ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ಸಂದರ್ಭದಲ್ಲಿ ಜಾನಪದ ವಿವಿಧ ಕಲಾತಂಡಗಳಾದ ಹಾಸ್ಯಗೊಂಬೆಗಳು, ಮನುಷ್ಯನ ಎಲಬು ನೃತ್ಯ, ಯಕ್ಷಗಾನ, ವೀರಗಾಸೆ ಕುಣಿತ, ವೀರಭದ್ರ ಕುಣಿತ,



ಶ್ರೀ ಕೋಟೆ ವಿದ್ಯಾ ಗಣಪತಿ ಮೆರವಣಿಗೆ.

ಪಟದ ಕುಣಿತ, ಕೇರಳದ ಕವಡಿ ನೃತ್ಯ, ವಿವಿಧ ಮನರಂಜನೆಯ ನೃತ್ಯ ತಂಡಗಳೊಂದಿಗೆ ಶ್ರೀ ಕೋಟೆ ವಿದ್ಯಾ ಗಣಪತಿಯನ್ನು ಪ್ರತಿ ವರ್ಷದಂತೆ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. 73 ವರ್ಷಗಳ ಐತಿಹಾಸಿಕ ಹಿನ್ನಲೆಯುಳ್ಳ ಗಣೇಶ ಮೂರ್ತಿ ಮೊದಲ ಬಾರಿಗೆ ನಾಗಮಂಗಲ ಪಟ್ಟಣದ ಟಿಬಿ ವೃತ್ತಕ್ಕೆ ಮೆರವಣಿಗೆ ಸಾಗಿತು. ಸಾವಿರಾರು ಸಂಖ್ಯೆ ಭಕ್ತರು ಪಾಲ್ಗೊಂಡು ದೇವರ ಆಶೀರ್ವಾದ ಪಡೆದರು. ಮಳೆಯಲ್ಲಿಯೇ ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೂಕ್ಷ್ಮ ಪ್ರದೇಶಗಳಿಗೆ ನಡಿಗೆಯಲ್ಲಿ ಸಂಚರಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಖುದ್ದು ಮುಂಜಾಗ್ರತಾ ಕ್ರಮಗಳನ್ನ ಕೈಗೊಂಡಿದ್ದರು. ಇದೇ ವೇಳೆ ಮೈಸೂರು ಐಜಿ ಬೋರಲಿಂಗೇಗೌಡ, ಡಿವೈಎಸ್‌ಪಿ ಚಲುವರಾಜು, ಸಿಪಿಐ ನಿರುಜನ್, ತಹಸೀಲ್ದಾರ್ ಆದರ್ಶ, ನಾಗಮಂಗಲ ಇನ್ಸ್‌ಪೆಕ್ಟರ್ ಶಿವಕುಮಾರ್, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ರಾಜೇಂದ್ರ, ಬೆಳ್ಳೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವಿಕುಮಾರ್, ಬಿಂಡಿಗನವಿಲೆ ಇನ್ಸ್‌ಪೆಕ್ಟರ್ ಮಾರುತಿ ಬಂದೋಬಸ್ತ್‌ನ ಉಸ್ತುವಾರಿ ವಹಿಸಿದ್ದರು.

ಜಲಮೂಲದ ಪಾವಿತ್ರ್ಯತೆ ಅರಿತುಕೊಳ್ಳಬೇಕಿದೆ



ಶ್ರೀ ಕಾವೇರಿ ಮಾತೆಗೆ ಪೂಜೆ, ದೀಪನಮನ ಸಲ್ಲಿಸಲಾಯಿತು.

ಮಂಡ್ಯ, ಅ.17–ಜಲ ಶುದ್ಧಿ ಮತ್ತು ವೃದ್ಧಿಗೆ ಆಧಾರ, ಜಲಮೂಲದ ಪಾವಿತ್ರ್ಯತೆಯನ್ನು ಅರಿತುಕೊಳ್ಳಬೇಕಿದೆ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯ ತೋಟಗಾರಿಕೆ ರಸ್ತೆಯಂಚಿನಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಮಂಡ್ಯ ಆಯೋಜಿಸಿದ್ದ ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವ ಪ್ರಯುಕ್ತ ಕಾವೇರಿ ಮಾತೆಗೆ ಪೂಜೆ, ಅಭಿನಂದನೆ ಮತ್ತು ಅನ್ನಸಂತರ್ಪಣೆ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಕಾವೇರಿ ನದಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಋಣ ನಮ್ಮ ಮೇಲಿದೆ, ಇತ್ತೀಚಿನ ದಿನಗಳಲ್ಲಿ ಕೆ.ಆರ್. ಎಸ್.ಬಳಿ ಕಾವೇರಿ ಆರತಿಯನ್ನು ಸರ್ಕಾರ ಸಾಂಪ್ರದಾಯಿಕ ಕಾರ್ಯಕ್ರಮ, ಹಬ್ಬವನ್ನು ಪ್ರಾರಂಭ ಮಾಡಿದೆ, ಮುಂದಿನ ದಿನಗಳಲ್ಲೂ ನಡೆದರೆ ಪ್ರವಾಸೋದ್ಯಮ ಬೆಳೆಯಲಿದೆ ಎಂದು ನುಡಿದರು.

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಅಧ್ಯಕ್ಷ ತಗ್ಗಹಳ್ಳ ವೆಂಕಟೇಶ್, ಪ್ರತಿವರ್ಷ ತಲಕಾವೇರಿ ತೀರ್ಥೋದ್ಭವದಂದು ಮಂಡ್ಯದಲ್ಲಿಯೇ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ನಡೆಯುತ್ತಿದೆ ಎಂದರು. ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಎಚ್.ಕೃಷ್ಣ ಮನ್ಮುಲ್ ಅಧ್ಯಕ್ಷ ಉಮ್ಮಡಹಳ್ಳಿ ಶಿವಪ್ಪ ಅವರನ್ನು ಗಣ್ಯರು ಅಭಿನಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಕಾವೇರಿ ಉದ್ಯಾನವನದಲ್ಲಿರುವ ಶ್ರೀ ಕಾವೇರಿ ಪ್ರತಿಮೆಗೆ ಪೂಜೆ ಮತ್ತು ದೀಪನಮನ ಸಲ್ಲಿಸಲಾಯಿತು. ಜಾನಪದ ಕಲಾತಂಡಗಳ ಮೇಳದೊಂದಿಗೆ ಗಣ್ಯರನ್ನು ವೇದಿಕೆಗೆ ಕರೆತರಲಾಯಿತು. ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಪುರುಷೋತ್ತಮ ನಂದನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಭುನಂದನಾಥ ಸ್ವಾಮೀಜಿ, ಬಿಜಿಎಸ್ ಶಾಖೆಯ ಸತ್ಕೀರ್ತಿನಂದನಾಥ ಸ್ವಾಮೀಜಿ, ಮಾಜಿ ಶಾಸಕ ಎಂ.ಶ್ರೀನಿವಾಸ್, ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ ಇದ್ದರು.

ಬೆಳಗೊಳ ಗ್ರಾಪಂ ಅಧ್ಯಕ್ಷರ ಅವಿರೋಧ ಆಯ್ಕೆ

ಶ್ರೀರಂಗಪಟ್ಟಣ: ಬೆಳಗೊಳ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಹೆಚ್.ಎಸ್.ಸವಿತಾ ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷ ರವಿಕುಮಾರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಸವಿತಾರನ್ನು ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿದ್ದ ತಾಪಂ ಕಾರ್ಯನಿರ್ವಹಣಾಧಿಕಾರಿ ವೇಣು ಅಧ್ಯಕ್ಷರಾಗಿ ಸವಿತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಗ್ರಾ.ಪಂ ನಲ್ಲಿ ಒಟ್ಟು 26 ಸದಸ್ಯರಿದ್ದು, ಚುನಾವಣೆಯಲ್ಲಿ 21 ಸದಸ್ಯರು ಭಾಗವಹಿಸಿದ್ದರು. ನೂತನ ಅಧ್ಯಕ್ಷ ಕಾಂಗ್ರೆಸ್ ಬೆಂಬಲಿತ. ಹೆಚ್.ಎಸ್.ಸವಿತಾ ರವಿಕುಮಾರ್‌ರನ್ನು, ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮಾಜಿ ಅಧ್ಯಕ್ಷರಾದ ಬಿ.ವಿ.ಸುರೇಶ್, ರವಿಕುಮಾರ್, ಪುಟ್ಟರಾಜು, ಗ್ರಾ.ಪಂ ಸದಸ್ಯರು ಸೇರಿದಂತೆ ಗ್ರಾಮದ ಮುಖಂಡರು ಕಾಂಗ್ರೆಸ್ ಕಾರ್ಯಕರ್ತರು, ಬೆಂಬಲಿಗರು ಅಭಿನಂದಿಸಿದರು.

ಅಮ್ಮನ ಆಸರೆ ವೃದ್ಧಾಶ್ರಮಕ್ಕೆ ಫ್ಯಾನ್‌ಗಳ ವಿತರಣೆ

ಪಾಂಡವಪುರ, ಅ.17–ತಾಲೂಕಿನ ಹಾಗನಹಳ್ಳಿ ಗ್ರಾಮದಲ್ಲಿ ಇರುವ ಅಮ್ಮನ ಆಸರೆ ವೃದ್ಧಾಶ್ರಮಕ್ಕೆ ಪಟ್ಟಣದ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಸಂಸ್ಥೆಯ ಅಧ್ಯಕ್ಷ ಕುರಹಟ್ಟಿ ಲಯನ್ ಡಾ.ಕೆ. ಸ್ವಾಮೀಗೌಡ ಉಚಿತವಾಗಿ ಫ್ಯಾನ್‌ಗಳನ್ನು ವಿತರಣೆ ಮಾಡಿದರು.



ಅಮ್ಮನ ಆಸರೆ ವೃದ್ಧಾಶ್ರಮಕ್ಕೆ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಅಧ್ಯಕ್ಷ ಕುರಹಟ್ಟಿ ಲಯನ್ ಡಾ.ಕೆ.ಸ್ವಾಮಿಗೌಡ ಉಚಿತವಾಗಿ ಫ್ಯಾನ್‌ಗಳನ್ನು ವಿತರಣೆ ಮಾಡಿದರು.

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ವೃದ್ಧಾಶ್ರಮಗಳು ಹೆಚ್ಚಾಗುತ್ತಿರುವುದು ನಿಜಕ್ಕೂ ವಿಷಾದನೀಯ. ಸಮಾಜದಲ್ಲಿ ಶಾಲೆಗಳು ಹೆಚ್ಚಾಗಬೇಕೆ ಹೊರತು ವೃದ್ಧಾಶ್ರಮಗಳಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಪ್ರತಿಯೊಬ್ಬ ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಜೋಪಾನವಾಗಿ ಕಾಪಾಡಿ ಸಾಕಿ ಬೆಳೆಸಿ ಬದುಕು ಕಟ್ಟಿಕೊಡುವ ಕೆಲಸ ಮಾಡುತ್ತಾರೆ. ಅದೇ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ತಮ್ಮ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಬಿಡುವುದು ಎಷ್ಟು ಸರಿ, ಕೊನೆಯ ದಿನಗಳಲ್ಲಿ ನಾವು ನಮ್ಮ ತಂದೆ–ತಾಯಿಯನ್ನು ಮಕ್ಕಳಂತೆ ಪಾಲನೆ ಮಾಡಬೇಕು, ಆಗ ಮಾತ್ರ ಭಗವಂತ ಮೆಚ್ಚುತ್ತಾನೆ ಎಂದರು.

ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿ ಇರುವ ವಿದ್ಯಾವಂತರೇ ಹೆಚ್ಚಾಗಿ ತಮ್ಮ ಪೋಷಕರನ್ನು ವೃದ್ಧಾಶ್ರಮಗಳಿಗೆ ಬಿಡುತ್ತಾರೆ. ಇದಾಗಬಾರದು, ಯುವ ಜನಾಂಗ ಈ ಬಗ್ಗೆ ಜಾಗೃತರಾಗಬೇಕು ಸಮಾಜದಲ್ಲಿ ವೃದ್ಧಾಶ್ರಮಗಳು ಇಲ್ಲದಂತೆ ನಾವೆಲ್ಲರು ನಮ್ಮ ಪೋಷಕರನ್ನು ಪಾಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಹಾಗನಹಳ್ಳಿ ಗ್ರಾಮದಲ್ಲಿ ಇರುವ ಅಮ್ಮನ ಆಸರೆ ಚಾರಿಟಬಲ್ ಟ್ರಸ್ಟ್ ಹಲವಾರು ವೃದ್ಧರಿಗೆ ಆಸರೆಯಾಗುವ ಕೆಲಸ ಮಾಡಿದೆ, ಮುಂದಿನ ದಿನಗಳಲ್ಲಿ ಟ್ರಸ್ಟ್‌ಗೆ ಮತ್ತಷ್ಟು ಅನುಕೂಲ ಮಾಡಿಕೊಡುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಫ್ರೆಂಚ್ ರಾಕ್ಸ್ ಲಯನ್ಸ್ ಕ್ಲಬ್ ಕಾರ್ಯದರ್ಶಿ ಬಿ.ಪುಟ್ಟಬಸವೇಗೌಡ, ಲಯನ್ಸ್ ಸದಸ್ಯ ಹೊಸಕೋಟೆ ವಿಜಿಕುಮಾರ್, ಸಮಾಜ ಸೇವಕ ನಾಗೇಶ್, ಟ್ರಸ್ಟ್ ಅಧ್ಯಕ್ಷ ಪ್ರಭುಸ್ವಾಮಿ, ಕಾರ್ಯದರ್ಶಿ ಪುಷ್ಪವತಿ ಮೊದಲಾದವರು ಇದ್ದರು.

ಹೊಳಲು ಗ್ರಾಪಂ ಉಪಾಧ್ಯಕ್ಷರ ಆಯ್ಕೆ

ಮಂಡ್ಯ: ತಾಲೂಕಿನ ಹೊಳಲು ಗ್ರಾಮ ಪಂಚಾಯತಿ ಉಪಾಧ್ಯಕ್ಷರ ಚುನಾವಣೆಯಲ್ಲಿ ಹೆಚ್.ಸಿ.ಜಯಪ್ರಕಾಶ್ ನಾರಾಯಣ ಗೆಲುವು ಸಾಧಿಸಿದ್ದಾರೆ.

ಉಪಾಧ್ಯಕ್ಷರಾಗಿದ್ದ ನಾರಾಯಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರ ಸ್ಥಾನಕ್ಕೆ ಸೌಭಾಗ್ಯ ಹಾಗೂ ಹೆಚ್.ಸಿ ಜಯಪ್ರಕಾಶ್ ನಾರಾಯಣ ನಾಮಪತ್ರ ಸಲ್ಲಿಸಿದ್ದರು. ಸೌಭಾಗ್ಯ 6 ಮತ ಪಡೆದರೆ ಜಯಪ್ರಕಾಶ್ ನಾರಾಯಣರವರಿಗೆ 7 ಮತ ಪಡೆದು ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ತಾ.ಪಂ. ಯೋಜನಾಧಿಕಾರಿ ವೆಂಕಟರಾವ್ ಘೋಷಿಸಿದರು.

ಒಂದನೇ ಪುಟದಿಂದ

ಸುಪ್ರೀಂ ಅಸ್ತು

ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣಪತ್ರ ಪರಿಗಣಿಸಲಾಗಿತ್ತು. ವಿವಾಹಿತ ಮಹಿಳೆಯರು ಪತಿಯ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಬೇಕು ಎಂಬ ಬಗ್ಗೆ ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಅರ್ಹತೆ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅವಕಾಶ ಪಡೆಯದವರು ಹೈಕೋರ್ಟ್‌ನ ಮೊರೆ ಹೋಗಿದ್ದರು. ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು ಎಂದು ಏಕಸದಸ್ಯ ಆದೇಶಿಸಿ ತಾತ್ಕಾಲಿಕ ಆಯ್ಕೆಪಟ್ಟಿ ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಆಯ್ಕೆ ಪಟ್ಟಿಯನ್ನು ಸರ್ಕಾರ ಪರಿಷ್ಕರಿಸಿತ್ತು. ಮೊದಲಿದ್ದ ಪಟ್ಟಿಯಲ್ಲಿದ್ದ 451 ಅಭ್ಯರ್ಥಿಗಳನ್ನು ಹೊಸ ಪಟ್ಟಿಯಲ್ಲಿ ಕೈಬಿಡಲಾಗಿತ್ತು. ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತ್ತು. ಏಕಸದಸ್ಯ ಪೀಠದ ಆದೇಶವನ್ನು ದ್ವಿಸದಸ್ಯ ಪೀಠ ರದ್ದುಗೊಳಿಸಿತ್ತು.

1346 ಮಂದಿಗೆ ಉದ್ಯೋಗ ಭಾಗ್ಯ

ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ 13,289 ಅಭ್ಯರ್ಥಿಗಳ ಪೈಕಿ 1,346 ಮಂದಿ ನೇಮಕಗೊಂಡರೆ, 3,303 ಅಭ್ಯರ್ಥಿಗಳ ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 5.30 ರವರೆಗೆ ನಡೆದ ಉದ್ಯೋಗ ಮೇಳದಲ್ಲಿ 235 ಕಂಪನಿಗಳು ಭಾಗವಹಿಸಿದ್ದು, 24 ಸಾವಿರ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಜೊತೆಗೆ ಸ್ಥಳದಲ್ಲಿಯೇ ಹೊಸದಾಗಿ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಆದರೆ ಹಾಜರಾದವರು ಮಾತ್ರ 13289 ಮಂದಿ.

ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ಅಭ್ಯರ್ಥಿಗಳು, ಸರತಿ ಸಾಲಿನಲ್ಲಿ ನಿಂತು ಮಹಾರಾಜ ಕಾಲೇಜು ಮೈದಾನದಲ್ಲಿ ನಿರ್ಮಿಸಿದ್ದ 30ಕ್ಕೂ ಹೆಚ್ಚು ಆನ್‌ಲೈನ್ ಮತ್ತು ಆಫ್‌ಲೈನ್ ರಿಜಿಸ್ಟ್ರೇಷನ್ ಕೌಂಟರ್‌ಗಳಲ್ಲಿ ಹೆಸರು ನೋಂದಾಯಿಸಿಕೊಂಡು ಟೋಕನ್ ಪಡೆದ ಬಳಿಕ ಮಹಾರಾಜ ಮತ್ತು ಯುವರಾಜ ಕಾಲೇಜಿನ ತರಗತಿ ಕೊಠಡಿಗಳಲ್ಲಿ 5 ಬ್ಲಾಕ್‌ಗಳಲ್ಲಿ ಖಾಸಗಿ ಕಂಪನಿಗಳು ನಡೆಸಿದ ಸಂದರ್ಶನಕ್ಕೆ ಹಾಜರಾದರು.

ಸರ್ವರ್ ಸಮಸ್ಯೆ: ಹೆಸರು ನೋಂದಾಯಿಸುವ ವೇಳೆಯೇ ಉದ್ಯೋಗಾಕಾಂಕ್ಷಿಗಳು ಸರ್ವರ್ ಸಮಸ್ಯೆಯಿಂದ ಪರದಾಡುವಂತಾಯಿತು. ಕೌಶಲ್ಯಾಭಿವೃದ್ಧಿ ಇಲಾಖೆಯ ವೆಬ್‌ಸೈಟ್ ಓಪನ್ ಆಗದೆ ಕೆಲವರು ವಾಪಸ್ಸಾದರು. ಈ ವೇಳೆ ಅಲ್ಲಿಯೇ ಮೈಕ್ ಮೂಲಕ ಮಾರ್ಗದರ್ಶನ ನೀಡುತ್ತಿದ್ದ ಸಿಬ್ಬಂದಿ ಸರ್ವರ್ ಸಮಸ್ಯೆ ಇದ್ದು, ವೆಬ್‌ಸೈಟ್‌ಗೆ ಲಾಗಿನ್ ಆಗಿ. ನೋಂದಣಿ ಸ್ವಲ್ಪ ತಡವಾಗುತ್ತಿದ್ದು, ಯಾರು ವಾಪಸ್ ಹೋಗದಂತೆ ಸಂದರ್ಶನಕ್ಕೆ ಹಾಜರಾಗಿ ಅಟೆಂಡ್ ಮಾಡುವಂತೆ ತಿಳಿಸುತ್ತಿದ್ದರು. ಯಾರಾದರೂ ವೈಫೈ ವ್ಯವಸ್ಥೆ ಮಾಡಿದ್ದರೆ ಅನುಕೂಲವಾಗುತ್ತಿತ್ತು ಎನ್ನುತ್ತಿದ್ದರು.

ಬಹುತೇಕ ಬಿಕಾಂ... ಎಂಕಾಂ... ಎಂಬಿಎ... ಡಿಪ್ಲೊಮಾ ಹೋಲ್ಡರ್ಸ್: ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಬಹುತೇಕ ಅಭ್ಯರ್ಥಿಗಳಲ್ಲಿ ಬಿಕಾಂ, ಎಂಕಾಂ, ಎಂಬಿಎ, ಬಿಎಸ್ಸಿ ಮತ್ತು ಎಂಎಸ್ಸಿ, ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಿದ್ದವರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಮಾಡಿದವರು ಬೆರಳಣಿಕೆಯಷ್ಟು ಮಂದಿ ಕಂಡು ಬಂದರೆ, ಬಿಎ, ಎಂಎ ಮಾಡಿದವರು ಕೆಲವೇ ಮಂದಿ. ಐಟಿ–ಬಿಟಿ ಕಂಪನಿಗಳು, ವಿವಿಧ ಉತ್ಪನ್ನಗಳ ಮ್ಯಾನಿಫಾಕ್ಚರಿಂಗ್ ಕಂಪನಿಗಳು, ಕೌಶಲ್ಯ ತರಬೇತಿ ಸಂಸ್ಥೆಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವು. ಏಕಕಾಲದಲ್ಲಿ 2–3 ಅಭ್ಯರ್ಥಿಗಳ ಸಂದರ್ಶನ ನಡೆಸಿ, ಶಾರ್ಟ್‌ಲಿಸ್ಟ್ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಕಂಡು ಬಂದವು.

ಹೆಸರು ನೋಂದಣಿ ಹಾಗೂ ಸಂದರ್ಶನ ಕೊಠಡಿಗಳ ಎದುರು ಸಂಜೆವರೆಗೂ ನೂಕುನುಗ್ಗಲು ಹೆಚ್ಚಾಗಿತ್ತು. ಮಹಿಳೆಯರು, ಪುರುಷ ಅಭ್ಯರ್ಥಿಗಳನ್ನು ಪ್ರತ್ಯೇಕ ಸಾಲಿನಲ್ಲಿ ನಿಲ್ಲಿಸಿ ಸಂದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಸಂದರ್ಶನ ನಡೆಯುವ ಸ್ಥಳಗಳ ಹೊರಗಡೆ ಅಭ್ಯರ್ಥಿಗಳು ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಲಾಗಿತ್ತು.

ಓದುತ್ತಿದ್ದವರೂ ಭಾಗಿ: ಅಂತಿಮ ವರ್ಷದ ಬಿಕಾಂ... ಅಂತಿಮ ವರ್ಷ ಎಂಕಾಂ... ಐದಾರು ತಿಂಗಳಲ್ಲಿ ಕೋರ್ಸ್ ಮುಗಿಸುವ ವಿದ್ಯಾರ್ಥಿಗಳು ಕೂಡ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದರು. ಮೈಸೂರಿನ ಮಹಾರಾಣಿ, ಮಹಾರಾಜ, ಯುವರಾಜ ಸೇರಿದಂತೆ ಅನೇಕ ಕಾಲೇಜುಗಳ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದರು. ಆದರೆ ಆಯ್ಕೆಯಾದವರು ಕೆಲವೇ ಮಂದಿ.

ಐದು ಅವಕಾಶ: ಉದ್ಯೋಗ ಮೇಳದಲ್ಲಿ ಹೆಸರು ನೋಂದಾಯಿಸಿದ್ದ ಅಭ್ಯರ್ಥಿಯೊಬ್ಬರು 5 ಕೂಪನ್‌ಗಳನ್ನು ನೀಡುವ ಮೂಲಕ ಇಷ್ಟದ ಐದು ಕಂಪನಿಗಳಲ್ಲಿ ಸಂದರ್ಶನ ನಡೆಸಲು ಅವಕಾಶ ಮಾಡಿಕೊಡಲಾಗಿತ್ತು. ಒಂದು ಕಂಪನಿಯಲ್ಲಿ ಆಯ್ಕೆಯಾಗದಿದ್ದರೆ, ಮತ್ತೊಂದು ಕಂಪನಿಯಲ್ಲಾದರೂ ಆಯ್ಕೆಯಾಗಲಿ ಎಂಬ ಉದ್ದೇಶದಿಂದ ಅವಕಾಶ ಕಲ್ಪಿಸುವ ಜೊತೆಗೆ ಕಂಪನಿಗಳ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಣೆ ಮಾಡಲಾಯಿತು. ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಎಲ್ಲಾ ಅಭ್ಯರ್ಥಿಗಳಿಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು. ಹಾಗೆಯೇ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.

ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ, ಒತ್ತೋರ್ಮೆಕೂಟ



ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ 24ನೇ ವರ್ಷದ ಮಹಾಸಭೆ ಹಾಗೂ ಒತ್ತೋರ್ಮೆಕೂಟ ವಿಜಯನಗರದ ಕೊಡವ ಸಮಾಜದ ಗುರುಮನೆ ಹಾಲಿನಲ್ಲಿ ಸಂಘದ ಅಧ್ಯಕ್ಷ ಮಲಚೀರ ಎಂ.ಪೊನ್ನಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು, ಅ.17–ನಗರದ ಹೆಬ್ಬಾಳಿನ ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ 24ನೇ ವರ್ಷದ ಮಹಾಸಭೆ ಹಾಗೂ ಒತ್ತೋರ್ಮೆಕೂಟ ವಿಜಯನಗರದ ಕೊಡವ ಸಮಾಜದ ಗುರುಮನೆ ಹಾಲಿನಲ್ಲಿ ಸಂಘದ ಅಧ್ಯಕ್ಷ ಮಲಚೀರ ಎಂ. ಪೊನ್ನಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಜ್ಜಿಕುಟ್ಟಿರ ಟಿ.ಪೂವಯ್ಯ, ಶ್ರೀಮತಿ ಡಯನ ಪೂವಯ್ಯ ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಮತಿ ಮಲಚೀರ ಶಶಿ ಪೊನ್ನಪ್ಪ ಉಪಸ್ಥಿತರಿದ್ದರು.

ಉಪಾಧ್ಯಕ್ಷ ಮಿದೇರಿರ ಕೆ ಪ್ರಕಾಶ್ ಅಗಲಿದ ಸದಸ್ಯರಿಗೆ ಸಂತಾಪ ಸೂಚಿಸಿದರು. ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಸಂಘದ ವಾರ್ಷಿಕ ನಡಾವಳಿ ವರದಿಯನ್ನು ಹಾಗೂ ಲೆಕ್ಕಪತ್ರದ ವರದಿ ಯನ್ನು ಗೌ. ಕಾರ್ಯದರ್ಶಿ ದೇಯಂಡ ಅಯ್ಯಣ್ಣ ಹಾಗೂ ಖಜಾಂಚಿ ಕೊಟ್ಟಂಗಡ ಪೆಮ್ಮಯ್ಯನವರು ಮಂಡಿಸಿದರು. ಸಭೆಯಲ್ಲಿ ಮುಂದಿನ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಮಿದೇರಿರ ಕೆ. ಪ್ರಕಾಶ್ ಅವರನ್ನು ಆಯ್ಕೆ ಮಾಡಲಾಯಿತು.

ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ಮುಖ್ಯ ಅತಿಥಿಗಳು ಮಾತನಾಡಿ, ಕಾಡಿನಿಂದಾಗುವ ಪ್ರಯೋಜನ, ಕಾಡುಪ್ರಾಣಿಗಳ ಸಂರಕ್ಷಣೆ ಬಗ್ಗೆ ತಿಳಿಸಿದರು. ಅಪರಾಹ್ನ ವಿವಿಧ ಸ್ಪರ್ಧೆಗಳನ್ನು ನಡೆಸಿ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಸಮಿತಿ ಸದಸ್ಯರಾದ ತಾಪಂಡ ಚರ್ಮಣ, ಆಟ್ರಂಗಡ ರಾಜೇಶ್, ಮಚ್ಚಮಡ ರೋಶನ್ ಕಾವೇರಪ್ಪ, ಮಾಣೀರ ಗಿರೀಶ್ ದೇವಯ್ಯ, ಮಹಿಳಾ ಸಮಿತಿ ಸದಸ್ಯೆಯರಾದ ಶ್ರೀಮತಿ ಮುಂಜಾಂದಿರ ಶೈಲಾ ದೇವಯ್ಯ, ಶ್ರೀಮತಿ ತಾಪಂಡ ಲತಾ ನಾಗೇಶ್, ಶ್ರೀಮತಿ ಮಾದೇಟಿರ ಲೀಲಾವತಿ ನಂಜಪ್ಪ ಉಪಸ್ಥಿತರಿದ್ದರು. ಶ್ರೀಮತಿ ಮುಂಜಾಂದಿರ ಶೈಲಾ ದೇವಯ್ಯ, ಕು. ಮಾಳೇಟಿರ ತೇಜಲ್ ಸತೀಶ್, ಉಪಕಾರ್ಯದರ್ಶಿ ಶ್ರೀ ಅಂಜಪರವಂಡ ಟಿ.ಚಿಣ್ಣಪ್ಪ ಪ್ರಾರ್ಥಿಸಿದರು. ಅಧ್ಯಕ್ಷ ಮಲಚೀರ ಎಂ. ಪೊನ್ನಪ್ಪ ಸ್ವಾಗತಿಸಿದರು. ಶ್ರೀಮತಿ ಮಿದೇರಿರ ಶಕೀಲಾ ಪ್ರಕಾಶ್ ಕಾರ್ಯಕ್ರಮವನ್ನು ನಿರೂಪಿಸಿದರು. ಗೌರವ ಕಾರ್ಯದರ್ಶಿ ದೇಯಂಡ ಅಯ್ಯಣ್ಣ ವಂದಿಸಿದರು.

‘ಮತಗಳ್ಳತನ’: ಆಳಂದ ಮಾಜಿ ಬಿಜೆಪಿ ಶಾಸಕ ಸುಭಾಷ್ ಗುತ್ತೇದಾರ್ ಮನೆ ಮೇಲೆ ವಿಶೇಷ ತನಿಖಾ ತಂಡ ದಾಳಿ

ಆಳಂದ: 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಆಳಂದ ಕ್ಷೇತ್ರದಲ್ಲಿ ನಡೆದ "ಮತಗಳ್ಳತನ" ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ, ಶುಕ್ರವಾರ ಆಳಂದ ಮಾಜಿ ಶಾಸಕ ಮತ್ತು ಬಿಜೆಪಿ ನಾಯಕ ಸುಭಾಷ್ ಗುತ್ತೇದಾರ್ ಅವರ ನಿವಾಸದ ಮೇಲೆ ದಾಳಿ ನಡೆಸಿದೆ.



ಸುಭಾಷ್ ಗುತ್ತೇದಾರ್

ಉಪ ಪೊಲೀಸ್ ಅಧಿಕಾರಿ ಅಲ್ಲಾನ್ ಬಾಷಾ ನೇತೃತ್ವದ ವಿಶೇಷ ತನಿಖಾ ತಂಡ, 20ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಕಲಬುರ್ಗಿಯ ಗುಬ್ಬಿ ಕಾಲೋನಿಯಲ್ಲಿರುವ ಗುತ್ತೇದಾರ್ ಅವರ ನಿವಾಸದ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದ ಹಣಕಾಸಿನ ಹಗರಣದಲ್ಲಿ ಭಾಗಿಯಾಗಿದ್ದಾರೆಂದು ಹೇಳಲಾದ ಚಾರ್ಟರ್ಡ್ ಅಕೌಂಟೆಂಟ್ ಮಲ್ಲಿಕಾರ್ಜುನ ಮಹಾಂತಗೋಳ್ ಅವರ ನಿವಾಸದ ಮೇಲೂ ಎಸ್‌ಐಟಿ ದಾಳಿ ನಡೆಸಿದೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಮತದಾರರ ಸೇರ್ಪಡೆಗೆ ಮಲ್ಲಿಕಾರ್ಜುನ ಅವರು, ಅಕ್ರಂ ಎಂಬ



ವ್ಯಕ್ತಿಗೆ ಡೀಲ್ ಕೊಟ್ಟಿದ್ದರು ಎನ್ನುವ ವಿಚಾರ ತಿಳಿದುಬಂದಿದೆ. ಹೀಗಾಗಿ ಎಸ್‌ಐಟಿ ಮಲ್ಲಿಕಾರ್ಜುನ ಅವರ ಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದೆ.

ನಿನ್ನೆಯಷ್ಟೇ ಎಸ್‌ಐಟಿ ಅಧಿಕಾರಿಗಳು ಕಲಬುರಗಿಯಲ್ಲಿ ಅಕ್ರಂ ಎಂಬಾತನ ಮನೆ ಮೇಲೆ ದಾಳಿ ಮಾಡಿತ್ತು. ಈ ವೇಳೆ ರಾಶಿ ರಾಶಿ ವೋಟರ್ ಐಡಿಗಳು ಪತ್ತೆ ಆಗಿದ್ದವು. ಒಟ್ಟು 15 ಮೊಬೈಲ್ ಫೋನ್, 7 ಲ್ಯಾಪ್‌ಟಾಪ್‌ಗಳನ್ನು ಎಸ್‌ಐಟಿ ಅಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದರು. ಇದರ ಬೆನ್ನಲ್ಲೇ ಇಂದು ಎಸ್‌ಐಟಿ, ಬಿಜೆಪಿ ಮಾಜಿ ಶಾಸಕರ ಮನೆ ಮೇಲೂ ದಾಳಿ ನಡೆಸಿದೆ.

2023ರ ವಿಧಾಸಭಾ ಚುನಾವಣೆ ವೇಳೆ ಆಳಂದ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ದೂರು ನೀಡಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿತ್ತು.

ಡಿ.1ರೊಳಗೆ 33,000 ಕೋಟಿ ಬಾಕಿ ಪಾವತಿಸದಿದ್ದರೆ ಎಲ್ಲಾ ಕಾಮಗಾರಿ ಸ್ಥಗಿತ

ಬೆಂಗಳೂರು: ರಾಜ್ಯ ಸರ್ಕಾರ ಡಿ. 1 ರೊಳಗೆ ರೂ. 33,000 ಕೋಟಿ ಮೊತ್ತದ ಬಾಕಿ ಮೊತ್ತವನ್ನು ಪಾವತಿಸಲು ರಾಜ್ಯ ಗುತ್ತಿಗೆದಾರರ ಸಂಘ ಗಡುವು ನೀಡಿದೆ. ಇಲ್ಲದಿದ್ದರೆ ಎಲ್ಲಾ ಕಾಮಗಾರಿಗಳನ್ನು ನಿಲ್ಲಿಸುವುದಾಗಿ ಸಂಘ ಬೆದರಿಕೆ ಹಾಕಿದೆ.

ಇನ್ನೂ 44 ದಿನ ಕಾಯುತ್ತೇವೆ: ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದು, ಮನವಿ ಸಲ್ಲಿಸಲಾಗಿತ್ತು. ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಸಿಎಂ ಭರವಸೆ ನೀಡಿದ್ದರು. ನಾವು ಎರಡೂವರೆ ವರ್ಷದಿಂದ ಕಾಯುತ್ತಿದ್ದೇವೆ. ಇನ್ನೂ 44 ದಿನ ಕಾಯುತ್ತೇವೆ. ಆ ನಂತರ ನಾವು ಕಾಮಗಾರಿ ಸ್ಥಗಿತಗೊಳಿಸುವುದು ಮಾತ್ರವಲ್ಲದೇ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಮಧ್ಯಸ್ಥಿಕೆಗೆ ಮನವಿ ಮಾಡುತ್ತೇವೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ರಾಜ್ಯಪಾಲರಿಗೆ ದೂರು: ಗೌರಿ–ಗಣೇಶ ಹಬ್ಬ, ದಸರಾ ಮತ್ತು ದೀಪಾವಳಿ ಸಂದರ್ಭದಲ್ಲಿ ಕಾರ್ಮಿಕರು ತಮ್ಮ ಬಾಕಿ ಹಣ ಹಾಗೂ ಬೋನಸ್‌ಗೆ ಬೇಡಿಕೆ ಇಡುವುದರಿಂದ ಗುತ್ತಿಗೆದಾರರು ತಮ್ಮ ಫೋನ್‌ಗಳನ್ನು ಸ್ವಿಚ್ ಆಫ್ ಮಾಡುವಷ್ಟು ಪರಿಸ್ಥಿತಿ ಭೀಕರವಾಗಿದೆ ಎಂದು ಸಂಘ ಹೇಳಿಕೊಂಡಿದೆ. ಹಬ್ಬದ ನಂತರ ಸಭೆ ನಡೆಸುತ್ತೇವೆ ಎಂದು ಹೇಳಿದ್ದ ಸಿಎಂ ಸಿದ್ದರಾಮಯ್ಯ, ಸಭೆ ಕರೆದು ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ಡಿಸೆಂಬರ್‌ನಲ್ಲಿ ರಾಜ್ಯಪಾಲರಿಗೆ ದೂರು ನೀಡುತ್ತೇವೆ ಎಂದು ಮಂಜುನಾಥ್ ಎಚ್ಚರಿಸಿದ್ದಾರೆ. ಭ್ರಷ್ಟಾಚಾರ ಇನ್ನೂ ಮುಂದುವರಿದಿದೆ. ಆದರೆ ತಮ್ಮ ಮುಖ್ಯ ಗಮನವು ಬಾಕಿ ಉಳಿದಿರುವ ಬಾಕಿಗಳನ್ನು ಬಗೆಹರಿಸುವುದಾಗಿದೆ ಎಂದು ಸಂಘ ಹೇಳಿದೆ.



ಮಂಜುನಾಥ್

ಹಣ ಬಿಡುಗಡೆ ವಿಚಾರದಲ್ಲಿ ಕಮಿಷನ್ ದುಪ್ಪಟ್ಟಾಗಿದೆ ಎಂದು ಪತ್ರದಲ್ಲಿ ಹೇಳಿದ್ದೇನೆ, ಶೇ. 40, ಶೇ. 60, ಶೇ.80 ಅಂತಾ ಹೇಳಿಲ್ಲ. ಸಣ್ಣ ಗುತ್ತಿಗೆದಾರರು ವಿಷ ಕುಡಿಯುವ ಸ್ಥಿತಿಗೆ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಲಂಚವಿಲ್ಲ ಎಂದು ನಾನು ಹೇಳುತ್ತಿಲ್ಲ, ಎಲ್ಲಾ ವಿಚಾರಗಳನ್ನು ಡಿಸೆಂಬರ್ ನಲ್ಲಿ ಬಹಿರಂಗಪಡಿಸುತ್ತೇವೆ ಎಂದು ಮಂಜುನಾಥ್ ಹೇಳಿದ್ದಾರೆ.

ಐದರಿಂದ ಆರು ಬಾರಿ ಸಿಎಂ ಅವರನ್ನು ಭೇಟಿ ಮಾಡಿದ್ದೇವೆ. ಸಚಿವ ಸಂಪುಟದ ಪ್ರತಿ ಸಚಿವರನ್ನು ಭೇಟಿ ಮಾಡಿದ್ದೇವೆ, ಆದರೆ ಬಾಕಿ ಉಳಿದಿರುವ ಸಮಸ್ಯೆಯನ್ನು ಪರಿಹರಿಸಲಾಗಿಲ್ಲ.'ಪಿಡಬ್ಲ್ಯುಡಿ ಇಲಾಖೆಯಲ್ಲಿ 9,000 ಕೋಟಿ ಬಾಕಿ ಇದೆ. ಸೀನಿಯಾರಿಟಿ ಆಧಾರದ ಮೇಲೆ ಹಣ ನೀಡುತ್ತಿದ್ದಾರೆ. ಉಳಿದ ಇಲಾಖೆಗಳಲ್ಲಿ ಆಗುತ್ತಿಲ್ಲ, ನೀರಾವರಿ ಇಲಾಖೆಯಿಂದ 12,000 ಕೋಟಿ ಬಾಕಿ ಇದೆ. ಒಟ್ಟಾರೆ 33,000 ಕೋಟಿ ಬಾಕಿ ಇದೆ. ಲೋಕೋಪಯೋಗಿ ಇಲಾಖೆ ಹೊರತುಪಡಿಸಿದರೆ ಬೇರೆ ಯಾವುದೇ ಇಲಾಖೆಯಿಂದ ಬಾಕಿ ಹಣ ಬಿಡುಗಡೆಯಾಗಿಲ್ಲ. ಇದನ್ನು ಸಿಎಂ ಮತ್ತು ಸಚಿವರ ಗಮನಕ್ಕೆ ತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

50 ಕೋಟಿ ಮೊತ್ತದ ಒಂದು ಬಿಲ್ ಸಿಎಂ ಕ್ಲಿಯರ್ ಮಾಡಬೇಕು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯು ಗುರುವಾರದಿಂದ ಹಂತ ಹಂತವಾಗಿ ಬಾಕಿ ಬಿಡುಗಡೆಯನ್ನು ಪ್ರಾರಂಭಿಸಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. 50 ಕೋಟಿ ಮೊತ್ತದ ಒಂದು ಬಿಲ್ ಅನ್ನು ಸಿಎಂ ಕ್ಲಿಯರ್ ಮಾಡಬೇಕಿದೆ ಎಂದು ಮಂಜುನಾಥ್ ತಿಳಿಸಿದರು. ಲೋಕಾಯುಕ್ತದಿಂದ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ನಿವೃತ್ತ ಅಧಿಕಾರಿ ಬಾಲರಾಜ್ ಅವರನ್ನು ವಸತಿ ಇಲಾಖೆಗೆ ನೇಮಕ ಮಾಡಲಾಗಿದೆ ಎಂದು ಸಂಘ ಆರೋಪಿಸಿದೆ. ಭ್ರಷ್ಟ ಅಧಿಕಾರಿಯನ್ನು ವಜಾಗೊಳಿಸುವಂತೆ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಮನವಿ ಮಾಡಿದ್ದರೂ ಇನ್ನೂ ಕ್ರಮ ಕೈಗೊಂಡಿಲ್ಲ ಎಂದು ಸಂಘ ದೂರಿದೆ.

ಪಕ್ಷ ಬೇಧವಿಲ್ಲದೆ ಸುಮಾರು 70 ಶಾಸಕರು ಸಿವಿಲ್ ಕಾಮಗಾರಿ ಗುತ್ತಿಗೆಗೆ ಕಡಿವಾಣ ಹಾಕಲು ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಸಂಘದ ಗೌರವಾಧ್ಯಕ್ಷ ಜಗನ್ನಾಥ ಸೇಠಜಿ ಗಂಭೀರ ಆರೋಪ ಮಾಡಿದರು. ಕಲ್ಯಾಣ ಕರ್ನಾಟಕದಲ್ಲಿ ಪ್ಯಾಕೇಜ್ ಒಪ್ಪಂದಗಳಲ್ಲಿ ಶೇ.15, ಶೇ.20ರಷ್ಟು ಕಮಿಷನ್ ಒಳಗೊಂಡಿರುವ ಭ್ರಷ್ಟಾಚಾರವಿದೆ. ಯಾವುದೇ ಸಚಿವರು ಭಾಗಿಯಾಗಿಲ್ಲ, ಮತ್ತು ಎಲ್ಲಾ ಶಾಸಕರು ಅದರ ಭಾಗವಾಗಿಲ್ಲ. ಹೈಕಮಾಂಡ್‌ಗೆ ಪತ್ರ ಬರೆದಾಗ ಆ ಎಲ್ಲಾ ಶಾಸಕರ ಹೆಸರನ್ನು ನಾವು ಉಲ್ಲೇಖಿಸುತ್ತೇವೆ. ಗುತ್ತಿಗೆದಾರರನ್ನು ಒಳಗೊಂಡ ಗಂಭೀರ ಅಕ್ರಮಗಳಿವೆ ಮತ್ತು ಗುಲ್ಬರ್ಗ ಡಿಎಂಎ ಪ್ಯಾಕೇಜ್ ಸೇರಿದಂತೆ ಎಲ್ಲಾ ನಾಲ್ಕು ಪ್ಯಾಕೇಜ್ ಯೋಜನೆಗಳನ್ನು ಸರ್ಕಾರ ತನಿಖೆ ಮಾಡಬೇಕು ಎಂದು ಹೇಳಿದರು.

ಬೌದ್ಧ ಮಹಾ ಸಮ್ಮೇಳನ ಯಶಸ್ಸಿಗೆ ಸಹಕರಿಸಿದ ವಿದ್ಯಾರ್ಥಿಗಳು, ಪೌರಕಾರ್ಮಿಕರಿಗೆ ಇಂದು ಅಭಿನಂದನೆ

ಮೈಸೂರು,ಅ.17(ಜಿಎ)–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ 'ಬೌದ್ಧ ಮಹಾ ಸಮ್ಮೇಳನ'ವನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ಕರ್ನಾಟಕ ರಾಜ್ಯ ಭಿಕ್ಖು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು ಹಾಗೂ ರಾಜ್ಯ ಅಂಬೇಡ್ಕರ್‌ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರ ಅಭಿನಂದನೆ ಸಲ್ಲಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಬೌದ್ಧ ಸಮ್ಮೇಳನ ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಅಚ್ಚುಕಟ್ಟಾಗಿ ಯಾವುದೇ ಸಮಸ್ಯೆ ಆಗದೇ ಉತ್ತಮ ರೀತಿಯಲ್ಲಿ ಯಶಸ್ವಿಯಾಗಿದೆ. ಅದಕ್ಕೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಎನ್‌ಎಸ್‌ಎಸ್, ಎಸ್‌ಸಿಸಿ ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಗಳಂತೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ಮಾತ್ರವಲ್ಲದೇ ವೇದಿಕೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನೋಡಿಕೊಂಡ ಎಲ್ಲರಿಗೂ ಅಭಿನಂದನೆ ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.


ಪುರುಷೋತ್ತಮ್

ಎನ್‌ಎಸ್‌ಎಸ್, ಎಸ್‌ಸಿಸಿ ವಿದ್ಯಾರ್ಥಿಗಳು ಹಾಗೂ ಪೌರಕಾರ್ಮಿಕರು ಉತ್ತಮವಾಗಿ ಕಾರ್ಯನಿರ್ವಹಿಸಿದ್ದ ಹಿನ್ನೆಲೆಯಲ್ಲಿ ಅ.18ರಂದು ಬುದ್ಧ ವಿಹಾರದ ಆವರಣದಲ್ಲಿ ಸಂಜೆ 5.30ಕ್ಕೆ ಅಭಿನಂದನೆ ಸಲ್ಲಿಸಿ, ಪ್ರಮಾಣ ಪತ್ರ ವಿತರಿಸುತ್ತೇವೆ. ಈ ವೇಳೆ 'ಬುದ್ಧ ಬೆಳಕು' ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಲಾಗುತ್ತಿದ್ದು, ಬುದ್ಧನ ಬೆಳಕು ಚೆಲ್ಲಲಾಗುತ್ತಿದೆ. ಮುಂದಿನ ವರ್ಷ ಅ.14ರಂದು 'ಬೌದ್ಧ ಮಹಾ ಸಮ್ಮೇಳನ' ಚಾಮರಾಜನಗರದಲ್ಲಿ ನಡೆಯಲಿದ್ದು, ಈಗಾಗಲೇ ಧ್ವಜ ಮತ್ತು ಜ್ಯೋತಿ ಹಸ್ತಾಂತರಿಸಿದ್ದೇವೆ. ಸಮ್ಮೇಳನ ಮಾತ್ರ ಚಾಮರಾಜನಗರದಲ್ಲಿ ನಡೆಯುತ್ತದೆ. ಆದರೆ, ರಾಜ್ಯದ 31 ಜಿಲ್ಲೆಗಳಲ್ಲಿ ಎಂದಿನಂತೆ ಬುದ್ಧ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹೇಶ್, ಸೋಮಯ್ಯ ಮಲಿಯೂರು, ಮಂಜುನಾಥ್, ಮಣಿಯಯ್ಯ, ಪುಟ್ಟರಾಜು, ತುಂಬಲರಾಮಣ್ಣ, ಸಿದ್ದಸ್ವಾಮಿ ಇದ್ದರು.

ಅರ್ಜಿ ಆಹ್ವಾನ

ಮೈಸೂರು: ಪಿಯುಸಿ, ಸ್ನಾತಕ, ವೃತ್ತಿಪರ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಿದ್ಯಾಭ್ಯಾಸ ಮುಂದುವರೆಸಲು ಬಯಸುವ ಕರ್ನಾಟಕ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಅರ್ಹ, ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಗ್ರಾಮೀಣ ಪ್ರದೇಶದ ವ್ಯವಸಾಯ ಆಧಾರಿತ ಕುಟುಂಬಗಳ ಮಕ್ಕಳು (ಆರ್‌ಟಿಸಿ ಲಗತ್ತಿಸಬೇಕು), 1 ಹೆಕ್ಟೇರ್‌ಗಿಂತ ಕಡಿಮೆ ಒಣ ಭೂಮಿಯುಳ್ಳ ಸಣ್ಣ, ಅತೀ ಸಣ್ಣ ವ್ಯವಸಾಯಗಾರರ ಮಕ್ಕಳು (ಪಹಣಿ ಲಗತ್ತಿಸಬೇಕು), ವ್ಯವಸಾಯ ಕೂಲಿ ಕಾರ್ಮಿಕರ ಮಕ್ಕಳು, ಗ್ರಾಮೀಣ ಪ್ರದೇಶದ ಶಾಲೆಯಲ್ಲಿ 10ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು. ನ.30ರೊಳಗೆ ಕೃಷಿಕ್ ಸರ್ವೋದಯ ಫೌಂಡೇಷನ್, ವಿಜಯನಗರ 2ನೇ ಹಂತ ಇಲ್ಲಿ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಮೊ.8296031570, ದೂ.0821–2301564 ಸಂಪರ್ಕಿಸಿ.

ಹಾಡ್ಯ ಡೇರಿಯಲ್ಲಿ ಅವ್ಯವಹಾರ ಆರೋಪ
ಕಾರ್ಯದರ್ಶಿ ವಿರುದ್ಧ ಕ್ರಮಕ್ಕೆ ಒತ್ತಾಯ

ಮೈಸೂರು,ಅ.17(ಜಿಎ)–ನಂಜನಗೂಡು ತಾಲೂಕಿನ ಹಾಡ್ಯ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಭಾರೀ ಅವ್ಯವಹಾರವಾಗಿದ್ದು, ಈ ಕೂಡಲೇ ಕಾರ್ಯದರ್ಶಿ ಹಾಗೂ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಯುವ ಕಾಂಗ್ರೆಸ್ ಅಧ್ಯಕ್ಷ ಆದರ್ಶ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಡ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ರೈತರು ನೀಡುವ ಹಾಲಿನೊಂದಿಗೆ ನೀರು ಮಿಶ್ರಣ ಮಾಡಿ ಕಳುಹಿಸಲಾಗಿದೆ. ಪರೀಕ್ಷೆ ವೇಳೆ ಕೆಎಂಎಫ್‌ಗೆ ಶುದ್ಧವಾದ ಹಾಲು ನೀಡಿ ನಂತರ ಕಲಬೆರಕೆ ಹಾಲು ಪೂರೈಸಲಾಗಿದೆ. ಸಂಘದ ಕಾರ್ಯದರ್ಶಿ ತನ್ನ ಕುಟುಂಬದ 9 ಜನರ ಹೆಸರಿನಲ್ಲಿ ಹಾಲು ನೀಡಿರುವುದಾಗಿ ದಾಖಲೆ ಸೃಷ್ಟಿಸಿ ಹಣ ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ಒಬ್ಬೊಬ್ಬ ಸದಸ್ಯ 70ರಿಂದ 80 ಲೀಟರ್ ಹಾಲು ನೀಡಿರುವುದಾಗಿ ದಾಖಲೆಯಲ್ಲಿದೆ. ನಿಜವಾಗಲೂ ಈ 9 ಜನರು ಹಾಲನ್ನೇ ನೀಡಿಲ್ಲ. ತಿಂಗಳಿಗೆ ಕನಿಷ್ಠ 2.80 ಲಕ್ಷ ರೂಪಾಯಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದರು.

ಈಗಾಗಲೆ ಕೆಎಂಎಫ್ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಸಹಕಾರ ಸಂಘಗಳ ಉಪನಿಬಂಧಕರು, ಸಂಘದಲ್ಲಿ ಆಡಳಿತ ಮಂಡಳಿ ಸಭೆ ನಡೆಸಿ ವರದಿ ನೀಡುವಂತೆ ಸೂಚನೆ ನೀಡಿದ್ದರು. ಆದರೆ ಇದಾದ ಬಳಿಕ ಯಾವುದೇ ಕ್ರಮ ಕೈಗೊಂಡಿಲ್ಲ. ಕಾರ್ಯದರ್ಶಿಯ ವಿರುದ್ಧ ಯಾರೂ ಬಾಯಿ ಬಿಡುತ್ತಿಲ್ಲ. ಅಧಿಕಾರಿಗಳು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಷೇರುದಾರರಾದ ರಾಮಮೂರ್ತಿ, ತಗಡೂರು ನಾಯಕ, ನಾಗೇಶ್ ಉಪಸ್ಥಿತರಿದ್ದರು.

ಸಾರ್ವಜನಿಕ ಸ್ಥಳಗಳ ಬಳಕೆ ವಿಷಯ ಮುಸ್ಲಿಮರಿಗೂ ಅನ್ವಯವಾಗಬೇಕು

ಸಿಎಂ ಸಿದ್ದರಾಮಯ್ಯರಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪತ್ರ

ಬೆಂಗಳೂರು, ಅ. 17(ಕೆಎಂಶಿ)–ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ರಸ್ತೆ ಹಾಗೂ ಸರ್ಕಾರಿ ಆವರಣಗಳಲ್ಲಿ ನಡೆಯುವ ನವಾಜ್‌ಗೂ ತಡೆ ನೀಡುವಂತೆ ಕೇಂದ್ರದ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಆರ್‌ಎಸ್‌ಎಸ್ ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ಕೆಲವು ಕಠಿಣ ತೀರ್ಮಾನ ಕೈಗೊಂಡ ಬೆನ್ನಲ್ಲೇ ಯತ್ನಾಳ್ ಮುಖ್ಯಮಂತ್ರಿ ಅವರಿಗೆ ಸುದೀರ್ಘ ಪತ್ರ ಬರೆದು, ಸಾರ್ವಜನಿಕ ಹಾಗೂ ಸರ್ಕಾರಿ ಜಾಗಗಳಲ್ಲಿ ಸಂಘ ಸಂಸ್ಥೆಗಳು ಪೂರ್ವಾನುಮತಿ ಇಲ್ಲದೆ ಚಟುವಟಿಕೆ ನಡೆಸುವಂತಿಲ್ಲ ಎಂಬ ಆದೇಶ ಮುಸ್ಲಿಮರಿಗೂ ಅನ್ವಯವಾಗಬೇಕು. ಅನುಮತಿ ಇಲ್ಲದೆ ರಸ್ತೆ ಹಾಗೂ ಸಾರ್ವಜನಿಕ ಸ್ಥಳ ಮತ್ತು ಸರ್ಕಾರಿ ಆವರಣಗಳಲ್ಲಿ ನಮಾಜ್ ಸಲ್ಲಿಸುತ್ತಿರುವ ದೃಶ್ಯಗಳ ನೋಡುತ್ತಲೇ ಇದ್ದೇವೆ. ಇಂತಹ ಚಟುವಟಿಕೆಗಳಿಂದ ಪಾದಚಾರಿ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಇದು ಭಾರತೀಯ ಸಂವಿಧಾನದ 19 ಹಾಗೂ 21 ವಿಧಿಯ ಪ್ರಕಾರ ಖಾತರಿಯಾದ ಮುಕ್ತ ಸಂಚಾರ ಮತ್ತು ಭದ್ರತೆಯ ಉಲ್ಲಂಘನೆಯಾಗಿದೆ. ಹೀಗಾಗಿ ನಮಾಜ್ ಮಾಡಲು ಈ ಸ್ಥಳಗಳಲ್ಲಿ ವಿಶೇಷ ಅನುಮತಿ ನೀಡಬಾರದು. ನೀವು ಕಳೆದ ಗುರುವಾರ ಸಂಪುಟ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನ ಎಲ್ಲಾ ಸಮುದಾಯ ಹಾಗೂ ನಾಗರಿಕರಿಗೂ ಅನ್ವಯವಾಗಬೇಕು ಎಂದಿದ್ದಾರೆ. ಇನ್ನು ಮುಂದೆ ಸರ್ಕಾರಿ ಕಾಯಿದೆ ಉಲ್ಲಂಘಿಸಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಆದೇಶ ನೀಡುವಂತೆ ಒತ್ತಾಯಿಸಿದ್ದಾರೆ.



ಸರ್ಕಾರಿ ಕಚೇರಿ ಹಾಗೂ ಅನುದಾನಿತ ಸಂಸ್ಥೆಗಳಲ್ಲಿ ನಮಾಜ್‌ಗೆ ಅವಕಾಶ ನೀಡಬಾರದು. ಇಂತಹ ಸಂಸ್ಥೆಗಳಲ್ಲಿ ಕಾರ್ಯ ಚಟುವಟಿಕೆ ನಿರ್ಬಂಧಿಸಿ, ಒಂದು ವೇಳೆ ಈ ಧಾರ್ಮಿಕ ಚಟುವಟಿಕೆಗಳಿಗೆ ಅವಕಾಶ ನೀಡುವುದು ಆಡಳಿತದ ಮೇಲಿನ ನಂಬಿಕೆಗೆ ಚ್ಯುತಿ ತರುತ್ತದೆ. ಕರ್ನಾಟಕ ಪೊಲೀಸ್ ಕಾಯಿದೆ ಮತ್ತು ಸಂಬಂಧಿತ ಸಂಚಾರ ನಿಯಮಗಳಡಿ ಸಾರ್ವಜನಿಕ ಸ್ಥಳಗಳನ್ನು ಧಾರ್ಮಿಕ ಉದ್ದೇಶಗಳಿಗೆ ಅನಧಿಕೃತವಾಗಿ ಬಳಸುವುದನ್ನು ತಡೆಗಟ್ಟಲು ಸ್ಪಷ್ಟವಾದ ನೀತಿ ನಿರೂಪಣೆಯನ್ನು ಸರ್ಕಾರ ರೂಪಿಸಬೇಕು. ಕಾನೂನಿನ ಸಮಾನತೆ, ಸಾರ್ವಜನಿಕ ಶಿಸ್ತಿನ ಬಗ್ಗೆ ತನ್ನ ಬದ್ಧತೆಯನ್ನು ದೃಢಪಡಿಸಬೇಕೆಂದು ಸಿಎಂ ಅವರನ್ನು ಒತ್ತಾಯಿಸಿದ್ದಾರೆ.

ಎನ್‌ಐಇ ಕಾಲೇಜಿನ ವಿದ್ಯಾರ್ಥಿಗಳಿಂದ ರಕ್ತದಾನ ಶಿಬಿರ


ಮೈಸೂರಿನ ಎನ್‌ಐಇ ಪ್ರಥಮ ದರ್ಜೆ ಕಾಲೇಜಲ್ಲಿ ರಕ್ತದಾನ ಶಿಬಿರ ನಡೆಯಿತು.

ಮೈಸೂರು,ಅ.17–ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಎನ್‌ಐಇ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೈಸೂರು, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಮೈಸೂರು ಹಾಗೂ ಎನ್‌ಐಇ ಪ್ರಥಮ ದರ್ಜೆ ಕಾಲೇಜು, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ವತಿಯಿಂದ ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ರಕ್ತ ನೀಡಿ ಭರವಸೆ ನೀಡಿ, ಜೊತೆಯಾಗಿ ನಾವು ಜೀವ ಉಳಿಸೋಣ ಘೋಷ ವಾಕ್ಯದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 70ಕ್ಕೂ ಹೆಚ್ಚು ಕಾಲೇಜಿನ ವಿದ್ಯಾರ್ಥಿಗಳು ಸ್ವಯಂಪ್ರೇರಿತ ರಕ್ತದಾನ ಮಾಡಿದರು. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಜಿಲ್ಲಾ ಮೇಲ್ವಿಚಾರಕಿ ಸವಿತಾ, ರಕ್ತದಾನದ ಮೂಲಕ ಹಲವರ ಜೀವ ಉಳಿಸಲು ಸಾಧ್ಯ ಎಂದರು.

ಎನ್‌ಐಇ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಆರ್.ಗೋಪಾಲಕೃಷ್ಣ ಅರಸ್, ಇಂದಿನ ಯುವಜನತೆ ದೇಶದ ಸಂಪತ್ತು, ನಿಮ್ಮ ಒಂದು ಸೇವೆ ದೇಶವನ್ನು ಮತ್ತು ಜೀವವನ್ನು ಕಾಪಾಡಬಲ್ಲದು. ಸದೃಢ ದೇಹದಲ್ಲಿ ಸದೃಢ ಮನಸ್ಸು ಇರುತ್ತದೆ. ನಮ್ಮ ಮನಸ್ಸು ಇನ್ನೊಬ್ಬರ ಉಳಿವಿಗೆ ಸಹಕರಿಸಬೇಕು ಎಂದರು.


ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕಾಲೇಜು ಅಭಿವೃದ್ಧಿ ಅಧಿಕಾರಿ ಸುಮಾ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಕುಮಾರ್, ಸಹ ಕಾರ್ಯಕ್ರಮ ಅಧಿಕಾರಿ ದಿನಕರ್, ಯೂತ್ ರೆಡ್‌ಕ್ರಾಸ್ ಸಂಯೋಜನಾಧಿಕಾರಿ ಶೈಲಜಾ, ನವ್ಯ ಇನ್ನಿತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ 33, ಪಿಯುಸಿಯಲ್ಲಿ 30 ಅಂಕಕ್ಕೆ ಪಾಸ್!
ಶಿಕ್ಷಣ ವ್ಯವಸ್ಥೆ ಏನಾಗಬೇಕು?

ಹೆಚ್.ವಿಶ್ವನಾಥ್ ಆತಂಕದ ನುಡಿ

- ವೈಜ್ಞಾನಿಕ ಅಧ್ಯಯನ ಮಾಡಿಲ್ಲ
- ಸಿದ್ದರಾಮಯ್ಯ ನಗೆಪಾಟಲಿಗೀಡಾಗುತ್ತಿದ್ದಾರೆ
- ಜಾತಿ ಸಮೀಕ್ಷೆಯಲ್ಲಿ ಶಿಕ್ಷಕರ ಬಳಕೆ; ಮಕ್ಕಳಿಗೆ ಪಾಠ, ಊಟವಿಲ್ಲ

ಮೈಸೂರು, ಅ.17(ಬಿಎಲ್‌ಯು)–ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡ 33 ಹಾಗೂ ಪಿಯುಸಿಯಲ್ಲಿ ಶೇಕಡ 30 ಅಂಕ ಪಡೆದರೆ ಪಾಸ್ ಎಂಬ ಸರ್ಕಾರದ ತೀರ್ಮಾನದಿಂದ ಶಾಲಾ ಶಿಕ್ಷಣದ ಗುಣಮಟ್ಟ ಕುಸಿಯಲಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕ ವ್ಯಕ್ತಪಡಿಸಿದ್ದಾರೆ.


ಹೆಚ್.ವಿಶ್ವನಾಥ್

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಡಿಮೆ ಅಂಕ ಪಡೆದರೂ ಪಾಸಾಗಬಹುದು ಎಂಬ ಮನೋಭಾವದಿಂದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಕುಂಠಿತವಾಗುತ್ತದೆ! ಯಾವುದೇ ಸಣ್ಣ ಹುದ್ದೆಗೆ ನೇಮಕಗೊಳ್ಳಲು ಕನಿಷ್ಟ ಶೇಕಡ 50 ಅಂಕ ಇರಬೇಕು. ಸರ್ಕಾರ ಅಂಕ ಇಳಿಸಿದ್ದರಿಂದ ಕೆಲಸ ಸಿಗುವುದಿಲ್ಲ. ಯಾವುದೇ ವೈಜ್ಞಾನಿಕ ಅಧ್ಯಯನ ಇಲ್ಲದೆ ಇಂತಹ ಕ್ರಮ ಕೈಗೊಳ್ಳುತ್ತಿರುವ ಸರ್ಕಾರ ಓತಪ್ರೋತವಾಗಿ ಓಡುತ್ತಿದೆ. ಇದರಿಂದ ಸಿದ್ದರಾಮಯ್ಯ ನಗೆಪಾಟಲಿಗೀಡಾಗುತ್ತಿದ್ದಾರೆ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ಸರ್ಕಾರದ ಇಂತಹ ಹಲವು ತೀರ್ಮಾನದಿಂದ ಶಾಲಾ ಶಿಕ್ಷಣ ವ್ಯವಸ್ಥೆ ಅಧೋಗತಿಗೆ ಇಳಿದಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಬಹಳಷ್ಟು ಮಾತನಾಡುತ್ತಾರೆ. ಆದರೆ ಅವರು ಮಾತನಾಡುವುದಕ್ಕೂ, ವಾಸ್ತವತೆಗೂ ಬಹಳ ವ್ಯತ್ಯಾಸವಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮೊದಲು ವಾಸ್ತವತೆ ತಿಳಿದು ನಿರ್ಧಾರಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಶಾಲಾ ಶಿಕ್ಷಕರನ್ನು ಜಾತಿ ಸಮೀಕ್ಷೆಗೆ ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಮಕ್ಕಳಿಗೆ ಊಟ ಮತ್ತು ಪಾಠ ಎರಡೂ ಸಿಗುತ್ತಿಲ್ಲ. ಇದರಿಂದ ಬಹಳಷ್ಟು ಮಕ್ಕಳು ಹಸಿವಿನಿಂದ ಬಳಲುತ್ತಿದ್ದಾರೆ. ಬೊಗಳೆ ಬಿಡುವುದನ್ನು ಬಿಟ್ಟು ಮೊದಲು ಶಾಲಾ ಮಕ್ಕಳಿಗೆ ಪಾಠ ಮತ್ತು ಊಟ ಸಿಗುವಂತೆ ಮಾಡಿ ಎಂದು ಕಿವಿಮಾತು ಹೇಳಿದರು.

ಹೈಕಮಾಂಡ್ ಬ್ಲಾಕ್‌ಮೇಲ್ ಮಾಡಿ ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾರೆ!: ಮುಖ್ಯಮಂತ್ರಿಯಾಗಲು ಶಾಸಕರ ಸಂಖ್ಯೆಗಿಂತ ಹೈಕಮಾಂಡ್ ನಿರ್ಧಾರ ಅಂತಿಮ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಯನ್ನು ಬೆಂಬಲಿಸಿದ ವಿಶ್ವನಾಥ್ ಅವರು, ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಇಸ್ ಎ ಸುಪ್ರೀಂ ಎಂದು ಹೇಳಿದರು.

ಈ ಬಾರಿಯ ಚುನಾವಣೆಯಲ್ಲಿ 136 ಸ್ಥಾನ ಬರಲು ಡಿ.ಕೆ.ಶಿವಕುಮಾರ್ ಅವರ ಶ್ರಮ, ಬಂಡವಾಳ ಹೂಡಿಕೆ ಕಾರಣ. ಜೊತೆಗೆ ಶಿವಕುಮಾರ್ ಪಾರ್ಟಿ ಕೂಡ ಕಟ್ಟಿ ಬೆಳೆಸಿದ್ದಾರೆ. ಆದರೆ ಪಕ್ಷದ ಬೆಳವಣಿಗೆಗೆ ಕಿಂಚಿತ್ತೂ ಕೊಡುಗೆ ನೀಡದ ಸಿದ್ದರಾಮಯ್ಯ ಸಿಎಂ ಆಗಿ ಕೂತಿದ್ದಾರೆ. ಹೈಕಮಾಂಡ್‌ಅನ್ನು ಬ್ಲ್ಯಾಕ್‌ಮೇಲ್ ಮಾಡುತ್ತಾ ಇಲ್ಲಿ ತನಕ ಅಧಿಕಾರದಲ್ಲಿದ್ದಾರೆ. ಆದರೆ ಒಂದಂತೂ ಸತ್ಯ, ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷ ಹಾಳು ಮಾಡಿ, ಬಾಗಿಲು ಹಾಕಿಸಿಯೇ ಹೋಗುತ್ತಾರೆ ಎಂದು ಭವಿಷ್ಯ ನುಡಿದರು.

ನಾನೂ ಸಿದ್ದರಾಮಯ್ಯನ ಟೀಕಿಸುವೆ; ಯಾರೂ ಪ್ರಾಣ ಬೆದರಿಕೆ ಹಾಕಿಲ್ಲ: ನಾನು ಕೂಡ ಸಿದ್ದರಾಮಯ್ಯ ವಿರುದ್ಧ ಟೀಕೆ ಮಾಡುತ್ತೇನೆ, ಆರೋಪ ಮಾಡುತ್ತೇನೆ. ಇದರಿಂದ ಯಾರಾದರೂ ನನಗೆ ಬೆದರಿಕೆ ಹಾಕಿದ್ದಾರೆಯೇ ಎಂದರು.

ಆರ್‌ಎಸ್‌ಎಸ್‌ಗೆ ನಿರ್ಬಂಧ ಹೇರುವಂತೆ ಸಲಹೆ ನೀಡಿರುವ ಪ್ರಿಯಾಂಕ್ ಖರ್ಗೆ, ನನಗೆ ಬೆದರಿಕೆ ಕರೆ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ರಾಜಕೀಯ ಮಾಡುತ್ತಿರುವ ಮಲ್ಲಿಕಾರ್ಜುನ ಖರ್ಗೆ ಪುತ್ರನಿಗೆ ಪ್ರಾಣ ಬೆದರಿಕೆ ಹಾಕಲು ಸಾಧ್ಯವೆ? ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ ಸಲಹೆಯಂತೆ ಆರ್‌ಎಸ್‌ಎಸ್ ಮೇಲೆ ನಿರ್ಬಂಧ ಹೇರಲು ಆ ಸಂಸ್ಥೆಯಿಂದ ಯಾವ ಅನಾಹುತವಾಗಿದೆ ಎಂದು ಪ್ರಶ್ನಿಸಿದ ವಿಶ್ವನಾಥ್ ಅವರು, ಹಾಗಾದರೆ ಯುವ ಕಾಂಗ್ರೆಸ್ ಸರಿಯಾಗಿದೆಯೇ, ಅಲ್ಲಿ ಏನೇನು ನಡೆಯುತ್ತಿಲ್ಲ? ಎಂದು ಪ್ರಶ್ನಿಸಿದರು.

ಕೆಲಸಕ್ಕೆ ಬಾರದ ಹೇಳಿಕೆ ನೀಡಿ ರಾಷ್ಟ್ರೀಯ ನಾಯಕನಾಗಿ ಬಿಂಬಿಸಿಕೊಳ್ಳಲು ಹೊರಟ್ಟಿದ್ದೀಯಾ, ಮೊದಲು ಸುಳ್ಳು ಹೇಳುವುದನ್ನು ಬಿಡು ಎಂದು ಪ್ರಿಯಾಂಕ್ ಖರ್ಗೆ ವಿರುದ್ಧ ಏಕವಚನದಲ್ಲೇ ಟೀಕಾ ಪ್ರಹಾರ ನಡೆಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಸಾವರ್ಕರ್ ಅವರು ಕಾಲಾಪಾನಿ ಜೈಲಿನಲ್ಲಿದ್ದರು. ಇವರ ಬಗ್ಗೆ ಟೀಕೆ ಮಾಡುವ ಕಾಂಗ್ರೆಸ್ ಮುಖಂಡ ಹರಿಪ್ರಸಾದ್, ಆ ಜೈಲಿನಲ್ಲಿ ಕೇವಲ ಒಂದು ತಿಂಗಳಿರಲಿ ನೋಡೋಣ ಎಂದು ವಿಶ್ವನಾಥ್ ಸವಾಲು ಹಾಕಿದರು.

ಯಾರಾದ್ರು ಹುಚ್ಚ, ಹೆಣ್ಣು ಮಕ್ಕಳಿಗೆ 2 ಸಾವಿರ ಕೊಡುತ್ತಾರೆಯೇ!

ಯಾವುದೇ ಮಾನದಂಡವಿಲ್ಲದೆ ಯಾರಾದ್ರು ಹುಚ್ಚ, ಹೆಣ್ಣು ಮಕ್ಕಳಿಗೆ ಎರಡು ಸಾವಿರ ರೂಪಾಯಿ ಕೊಡುತ್ತಾನೆಯೇ ಎಂದು ವಿಶ್ವನಾಥ್, ಸರ್ಕಾರದ ಗೃಹಲಕ್ಷ್ಮಿ ಯೋಜನೆ ಅವೈಜ್ಞಾನಿಕತೆಯನ್ನು ಟೀಕಿಸಿದರು.

ಗ್ಯಾರಂಟಿಗೆ 92 ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದಾರೆ. ಯಾವ ಮಾನದಂಡ ಇಟ್ಟುಕೊಂಡು 2 ಸಾವಿರ ರೂ. ನೀಡುತ್ತಿದ್ದಾರೆ. ಜನರ ತೆರಿಗೆ ಹಣವನ್ನು ಲೆಕ್ಕಾಚಾರವಿಲ್ಲದೆ ಖರ್ಚು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸರ್ಕಾರದ ಖಜಾನೆ ಹಣ ಯಾರಪ್ಪನ ಮನೆಯದಲ್ಲ. ಇದು ಜನರ ಬೆವರಿನ ಹಣ. ನಿಮ್ಮಿಷ್ಟ ಬಂದಂತೆ ಕೊಡಬಾರದು. ಪಂಚ ಗ್ಯಾರಂಟಿಗೆ 92 ಸಾವಿರ ಕೋಟಿ ಹಣ ಕೊಡುವವರು ಶ್ರೀರಾಮ ಸಕ್ಕರೆ ಕಾರ್ಖಾನೆ ಆರಂಭಕ್ಕೆ ನೂರು ಕೋಟಿ ಕೊಡುತ್ತಿಲ್ಲ. ಇಂತಹ ಒಳ್ಳೆ ಕೆಲಸ ಸಿದ್ದರಾಮಯ್ಯಗೆ ಬೇಕಿಲ್ಲ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಸೇರಿದಂತೆ ಯಾವ ಸಚಿವರು ಜನಪರ ಕೆಲಸ ಮಾಡುತ್ತಿಲ್ಲ. ಶಾಸಕರು ಇವರ ಗುಲಾಮರಾಗಿರುವ ಕಾರಣ ಇವರ ನಿರ್ಧಾರದ ಬಗ್ಗೆ ಚಕಾರವೆತ್ತುತ್ತಿಲ್ಲ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ವರ್ಗಾವಣೆಗೆ ಎಸಿಪಿ 1 ಕೋಟಿ! ಇನ್ಸ್‌ಪೆಕ್ಟರ್ 75 ಲಕ್ಷ ಕೊಡಬೇಕು!!

ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ತಾವು ಬಯಸಿದ ಸ್ಥಳಕ್ಕೆ ವರ್ಗಾವಣೆಯಾಗಲು ಎಸಿಪಿ 1 ಕೋಟಿ ರೂಪಾಯಿ, ಸರ್ಕಲ್ ಇನ್ಸ್‌ಪೆಕ್ಟರ್ 75 ಲಕ್ಷ ರೂಪಾಯಿ ನೀಡಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಶ್ವನಾಥ್ ಆಪಾದಿಸಿದರು.

ಇಷ್ಟು ಹಣ ಕೊಟ್ಟು ಬಂದ ಪೊಲೀಸ್ ಅಧಿಕಾರಿಗಳು ಹಾಕಿರುವ ಬಂಡವಾಳದ ಮೇಲೆ ಮತ್ತಷ್ಟು ಹಣ ಸಂಪಾದನೆ ಮಾಡಲು ವಾಮ ಮಾರ್ಗ ಹಿಡಿಯುತ್ತಿದ್ದಾರೆ. ಇದರಿಂದ ಕಾನೂನು ಸುವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ದೂರಿದ ವಿಶ್ವನಾಥ್ ಅವರು, ಸಿಕ್ಕ ಸಿಕ್ಕ ಕಡೆ ರೇಪ್ ಆಗುತ್ತಿದೆ, ಮಕ್ಕಳನ್ನು ಸುಲಭವಾಗಿ ಹೊತ್ತೊಯ್ಯುವ ಘಟನೆ ಮಾಮೂಲಾಗಿ ಬಿಟ್ಟಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆಯಾ ಶಾಸಕರ ಶಿಪಾರಸ್ಸಿನಿಂದ ಅಧಿಕಾರಿಗಳು ವರ್ಗಾವಣೆ ಗೊಳ್ಳುತ್ತಿದ್ದಾರೆ. ಇದರಿಂದ ಅಧಿಕಾರಿಗಳು ಶಾಸಕರ ಕೃಪಾ ಪೋಷಿತರು. ಅವರ ಪುತ್ರ ಯತೀಂದ್ರ ಹಾಗೂ ಸ್ನೇಹಿತರು ವರ್ಗಾವಣೆ ದಂಧೆ ನಡೆಸುತ್ತಿದ್ದಾರೆ. ಎಲ್ಲಾ ಮಾಹಿತಿ ತಿಳಿದರೂ ಸಿದ್ದರಾಮಯ್ಯ ಮೌನ ವಹಿಸಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನಾಮಕಾವಸ್ಥೆಗೆ ಇದ್ದಾರೆ. ಇಡೀ ಜಿಲ್ಲೆಯ ಆಡಳಿತ ಡಾ.ಯತೀಂದ್ರ ಅವರ ಕಪಿ ಮುಷ್ಟಿಯಲ್ಲಿದೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಮೊದಲು ನಾನತ್ವದ ಜೊತೆಗೆ ಸುಳ್ಳು ಹೇಳುವುದನ್ನು ಬಿಡಬೇಕು. ಇಲ್ಲವೆಂದರೆ ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಸಿದರು.

> "ಮೂರು ಪಟ್ಟೆ ವಿಭೂತಿ, ಮಧ್ಯೆ ಕುಂಕುಮ ಹಾಕಿಕೊಂಡು ನಾನು ಹಿಂದೂ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ತೋರಿಕೆಗಾಗಿ ತಂತ್ರ, ಕುತಂತ್ರ ಮಾಡುತ್ತಾರೆ. ಬೂಟಾಟಿಕೆಯ ಮಾತಾಡುತ್ತಾರೆ. ಯೂ ಆರ್ ಬಫೂನ್ ಅಲ್ಲ, ಬಿಹೇವ್ ಆಫ್ ಕರ್ನಾಟಕ. ಕಾಂತರಾಜು ಆಯೋಗದ ಬಗ್ಗೆ ಜಪ ಮಾಡುತ್ತಾರೆ. ಆದರೆ ಅದನ್ನು ಒಂದು ಬಾರಿ ಓದುವುದಿರಲಿ, ಪುಟ ತಿರುಗಿಸಿ ಕೂಡ ನೋಡಿಲ್ಲ. ವರದಿಯನ್ನು ದಿಂಬಿನ ಕೆಳಗೆ ಹಾಕಿಕೊಂಡು ಮಲಗಿದ್ದಾರೆ.
> –ಎ.ಹೆಚ್.ವಿಶ್ವನಾಥ್

ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ; ಗೀತೆ ಗಾಯನ ಸ್ಪರ್ಧೆ

ಮೈಸೂರು,ಅ.17–ಮೈಸೂರು ಧರ್ಮ ಪ್ರಾಂತ್ಯದ ಶೈಕ್ಷಣಿಕ ಸೊಸೈಟಿಯ ವಜ್ರ ಮಹೋತ್ಸವದ ಅಂಗವಾಗಿ ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯಲ್ಲಿ ಅ.18ರಂದು ಬೆಳಗ್ಗೆ 9ಕ್ಕೆ 'ಹಸಿರು ಪರಿಸರ, ಸ್ವಚ್ಛದಾಯಕ ವಲಯ' ವಿಷಯದಡಿ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ ಮತ್ತು ಜನಪದ ಗೀತೆ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ. 17ಕ್ಕೂ ಹೆಚ್ಚು ಶಾಲೆಗಳಿಂದ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವರು. ಪ್ರತಿ ಶಾಲೆಯಿಂದ 4 ವಿದ್ಯಾರ್ಥಿಗಳಂತೆ ಚರ್ಚಾ ಮತ್ತು ಗಾಯನ ವಿಭಾಗಗಳಲ್ಲಿ ಸ್ಪರ್ಧಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ. ಸಕಲೇಶಪುರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಆರ್.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಈ ಎರಡು ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ವಿಜೇತ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುತ್ತದೆ. ಎರಡೂ ಸ್ಪರ್ಧೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಶಾಲೆಗೆ ಸಮಗ್ರ ಬಹುಮಾನ ಸಹ ನೀಡಲಾಗುವುದು. ಕನ್ನಡದಲ್ಲಿ ಮಾತನಾಡುವ ಮತ್ತು ಗಾಯನ ಕೌಶಲ ಪ್ರದರ್ಶಿಸುವ ಮೂಲಕ ಹಸಿರು ಮತ್ತು ಸ್ವಚ್ಛ ಶೈಕ್ಷಣಿಕ ಪರಿಸರ ನಿರ್ಮಾಣದ ಸಂದೇಶವನ್ನು ವಿದ್ಯಾರ್ಥಿಗಳು ಹಂಚಿಕೊಳ್ಳಲಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಖಂಡಿಸಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ



ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಕರೆ ಖಂಡಿಸಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ವತಿಯಿಂದ ಮೈಸೂರಿನ ಗಾಂಧಿ ಚೌಕದ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.17(ಎಂಕೆ)–ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದುಷ್ಕರ್ಮಿಗಳು ಕರೆ ಮಾಡಿ ಜೀವ ಬೆದರಿಕೆ ಹಾಕಿರುವುದನ್ನು ಖಂಡಿಸಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ದುಷ್ಕರ್ಮಿಗಳನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು. ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ನಾವಿದ್ದೇವೆ ಎಂದು ಬೆಂಬಲ ಸೂಚಿಸಿದರಲ್ಲದೆ ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುವ ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಬಸನಗೌಡಪಾಟೀಲ್ ಯತ್ನಾಳ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ಭಾವಚಿತ್ರ ಹಿಡಿದು ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ಸಮಾಜದಲ್ಲಿ ಕೋಮುವಾದ ಸೃಷ್ಟಿಸುತ್ತಿರುವ ಸಂಘಟನೆಯಾಗಿದ್ದು, ಗಾಂಧಿ ಹತ್ಯೆ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಎಂಬ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಯಿತು. ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದುಷ್ಕರ್ಮಿಗಳು ಕರೆ ಮಾಡಿ ಜೀವ ಬೆದರಿಕೆ ಹಾಕಿರುವುದು ಅತ್ಯಂತ ಖಂಡನೀಯ. ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಿ, ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಆರ್‌ಎಸ್‌ಎಸ್ ಬ್ಯಾನ್ ಮಾಡಿ ಎಂದು ಹೇಳಿಲ್ಲ: ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಬ್ಯಾನ್ ಮಾಡಿ ಎಂದು ಹೇಳಿಲ್ಲ. ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮಗಳನ್ನು ಮಾಡಲು ಸರ್ಕಾರದ ಅನುಮತಿ ಪಡೆದುಕೊಳ್ಳಬೇಕು ಎಂದು ಹೇಳಿದ್ದನ್ನೇ ರಾಜಕೀಯ ದ್ವೇಷದಿಂದ ಬ್ಯಾನ್ ಮಾಡಲು ಹೇಳಿದ್ದಾರೆಂದು ಜೀವ ಬೆದರಿಕೆಗಳನ್ನು ಹಾಕುತ್ತಿದ್ದಾರೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಡಿಸಿಸಿ ವಕ್ತಾರ ರಾಜೇಶ್, ಸಂಚಾಲಕ ಬಿ.ಕೆ.ಈಶ್ವರ್, ಪ್ರಧಾನ ಕಾರ್ಯದರ್ಶಿ ಮರಿದೇವಯ್ಯ, ಟ್ರೇಡ್ ಯೂನಿಯನ್ ಕಾಂಗ್ರೆಸ್ ಯುವ ಘಟಕದ ಉಪಾಧ್ಯಕ್ಷ ನಾಗರಾಜು, ಎಸ್‌ಟಿ ವಿಭಾಗದ ಜಿಲ್ಲಾಧ್ಯಕ್ಷ ನಾಗವಾಲ ಮಹೇಶ್, ಯುವ ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಶೌಕತ್ ಅಲಿಖಾನ್, ವಕೀಲ ಹರೀಶ್‌ಗೌಡ, ಮುಖಂಡರಾದ ಚಿಕ್ಕನಳ್ಳಿ ಸಂತೋಷ, ಅಶೋಕಪುರಂ ಕೃಷ್ಣಪ್ಪ, ಕಂಬ್ರಳ್ಳಿ ಸಂತೋಷ್, ಇಲವಾಲ ಚೆಲುವರಾಜು, ಮೊಗಣ್ಣ, ಹಿನಕಲ್ ಮಂಜು, ಬಿಳಿಕೆರೆ ಸ್ವಾಮಿ, ಅಶೋಕ ಪುರಂ ಸುನೀಲ್ ಮತ್ತಿತರರರು ಭಾಗವಹಿಸಿದ್ದರು.

ದೇಶ – ವಿದೇಶ

ಗುಜರಾತ್ ಸಂಪುಟ ಪುನರ್ರಚನೆ: ಜಡೇಜಾ ಪತ್ನಿ ರಿವಾಬಾಗೆ ಮಿನಿಸ್ಟರ್ ಪಟ್ಟ

ಗಾಂಧಿನಗರ: ಗುಜರಾತ್‌ನಲ್ಲಿ ನಡೆದ ಸಂಪುಟ ವಿಸ್ತರಣೆ ಕಾರ್ಯಕ್ರಮದಲ್ಲಿ ಹರ್ಷ ಸಾಂಘ್ವಿ ನೂತನ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅಲ್ಲದೇ ಕ್ರಿಕೆಟಿಗ ರವೀಂದ್ರ ಜಡೇಜಾ ಅವರ ಪತ್ನಿ ರಿವಾಬಾ ಸೇರಿ 26 ಸಚಿವರೂ ಪ್ರಮಾಣ ವಚನ ಸ್ವೀಕರಿಸಿದರು.



ಭೂಪೇಂದ್ರ ಪಟೇಲ್ ಸಂಪುಟದ 16 ಸಚಿವರು ಸಾಮೂಹಿಕ ರಾಜೀನಾಮೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಗಾಂಧಿನಗರದ ಮಹಾತ್ಮ ಮಂದಿರ ಸಮಾವೇಶ ಕೇಂದ್ರದಲ್ಲಿ ನಡೆದ ಸಮಾರಂಭದಲ್ಲಿ 26 ಸದಸ್ಯರು ಸಚಿವರಾಗಿ ಪ್ರಮಾಣ ಸ್ವೀಕರಿಸಿದರು. ಜಾತಿ ಮತ್ತು ಪ್ರಾದೇಶಿಕ ಸಮತೋಲನದ ಆಧಾರದ ಮೇಲೆ ಕೆಲವರಿಗೆ, ವಿಪಕ್ಷಗಳಿಂದ ಬಿಜೆಪಿ ಸೇರ್ಪಡೆಯಾದ ಕೆಲ ನಾಯಕರನ್ನ ಗುರುತಿಸಿ ಸಚಿವ ಸ್ಥಾನ ನೀಡಿರುವುದು ಹಿರಿಯ ನಾಯಕರ ಮೆಚ್ಚುಗೆಗೂ ಪಾತ್ರವಾಗಿದೆ. 2027ರ ವಿಧಾನ ಸಭಾ ಚುನಾವಣೆಯನ್ನ ಗುರಿಯಾಗಿಟ್ಟು ಸಮುದಾಯದ ನಾಯಕರು, ಕಾರ್ಯಕರ್ತರ ಮೇಲೆ ಹಿಡಿತ ಸಾಧಿಸುವ ನಾಯಕರನ್ನ ಸಂಪುಟಕ್ಕೆ ಆಯ್ಕೆ ಮಾಡಲಾಗಿದೆ.

ಟ್ರಂಪ್–ಪುಟಿನ್ ನಡುವೆ ಎರಡು ಗಂಟೆಗೂ ಅಧಿಕ ಕಾಲ ಸಂಭಾಷಣೆ

ವಾಷಿಂಗ್ಟನ್: ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ದೂರವಾಣಿ ಕರೆ ಮಾಡಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಎರಡು ಗಂಟೆಗೂ ಅಧಿಕ ಸಂಭಾಷಣೆ ನಡೆಸಿದ್ದಾರೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಭೇಟಿಗೂ ಮುನ್ನ ಪುಟಿನ್ ಜೊತೆ ಟ್ರಂಪ್ ಮಾತುಕತೆ ನಡೆಸಿದ್ದು, ಈ ಕುರಿತು ಸಾಮಾಜಿಕ ಮಾಧ್ಯಮ ಟ್ರುತ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. 'ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದು, ಫಲಪ್ರದವಾಗಿತ್ತು. ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ನನ್ನನ್ನು ಹಾಗೂ ಅಮೆರಿಕವನ್ನು ಅಭಿನಂದಿಸಿದ್ದಾರೆ. ಇದು ಅವರ ಶತಮಾನಗಳ ಕನಸಾಗಿತ್ತು. 'ಮಧ್ಯಪ್ರಾಚ್ಯದಲ್ಲಿ ಶಾಂತಿ ನೆಲೆಸಿರುವುದು ರಷ್ಯಾ ಹಾಗೂ ಉಕ್ರೇನ್ ನಡುವಣ ಸಂಘರ್ಷವನ್ನು ಕೊನೆಗೊಳಿಸಲು ಸಹಾಯಕವಾಗಲಿದೆ ಎಂಬ ನಂಬಿಕೆ ನನಗಿದೆ ಎಂದು ತಿಳಿಸಿದ್ದಾರೆ. ಉಕ್ರೇನ್ ವಿರುದ್ಧದ ಯುದ್ಧ ಕೊನೆಗೊಂಡ ಬಳಿಕ ಅಮೆರಿಕ–ರಷ್ಯಾ ವ್ಯಾಪಾರ ಒಪ್ಪಂದದ ಸಾಧ್ಯತೆ ಬಗ್ಗೆಯೂ ಚರ್ಚಿಸಿದ್ದೇವೆ ಎಂದು ಹೇಳಿದ್ದಾರೆ. ಏತನ್ಮಧ್ಯೆ ಟ್ರಂಪ್ ಹಾಗೂ ಪುಟಿನ್ ನಡುವೆ ಎರಡು ತಾಸಿಗೂ ಅಧಿಕ ಕಾಲ ಮಾತುಕತೆ ನಡೆದಿದೆ ಎಂದು ಶ್ವೇತಭವನ ತಿಳಿಸಿದೆ.



ಟಿವಿಕೆ ಮಾನ್ಯತೆ ಪಡೆದ ಪಕ್ಷವಲ್ಲ: ಮದ್ರಾಸ್ ಹೈಕೋರ್ಟ್‌ಗೆ ಚುನಾವಣಾ ಆಯೋಗ ಮಾಹಿತಿ

ಚೆನ್ನೈ: ನಟ, ರಾಜಕಾರಣಿ ವಿಜಯ್ ಅವರ ಟಿವಿಕೆ ಮಾನ್ಯತೆ ಪಡೆದ ರಾಜಕೀಯ ಪಕ್ಷವಲ್ಲ ಎಂದು ಭಾರತದ ಚುನಾವಣಾ ಆಯೋಗವು ಮದ್ರಾಸ್ ಹೈಕೋರ್ಟ್‌ಗೆ ತಿಳಿಸಿದೆ. ಚುನಾವಣಾ ಆಯೋಗದ ಪರ ಹಾಜರಿದ್ದ ವಕೀಲ ನಿರಂಜನ್ ರಾಜಗೋಪಾಲ್ ಅವರು ಮುಖ್ಯ ನ್ಯಾಯಮೂರ್ತಿ ಶ್ರೀವಾಸ್ತವ ಮತ್ತು ನ್ಯಾಯಮೂರ್ತಿ ಅರುಳ್ ಮುರುಗನ್ ಅವರನ್ನೊಳಗೊಂಡ ಪೀಠದ ಮುಂದೆ ಈ ವಿಷಯ ತಿಳಿಸಿದರು.

ಸೆ.27ರಂದು ಕರೂರಿನಲ್ಲಿ ಆಯೋಜಿಸಲಾಗಿದ್ದ ರ್ಯಾಲಿಯಲ್ಲಿ ಕಾಲ್ತುಳಿತ ಸಂಭವಿಸಿ 41 ಜನರು ಸಾವಿಗೀಡಾದ ಹಿನ್ನೆಲೆಯಲ್ಲಿ ತಮಿಳಗ ವೆಟ್ರಿ ಕಳಗಂ ಮಾನ್ಯತೆ ರದ್ದುಗೊಳಿಸುವಂತೆ ಕೋರಿ ಸೆಲ್ವಕುಮಾರ್, ಇತರರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಟಿವಿಕೆಗೆ ಮಾನ್ಯತೆಯೇ ಇಲ್ಲದಿರುವುದರಿಂದ ಈ ಪಿಐಎಲ್‌ಗೆ ಯಾವುದೇ ಮಹತ್ವ ಇಲ್ಲ ಎಂದು ನಿರಂಜನ್ ರಾಜಗೋಪಾಲ್ ವಾದಿಸಿದರು. ಕರೂರ್ ಕಾಲ್ತುಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಹೈಕೋರ್ಟ್‌ನ ಆಡಳಿತಾತ್ಮಕ ವಿಭಾಗದ ಮುಂದಿಡಲು ಸೂಚಿಸಿದ ನ್ಯಾಯಾಲಯ, ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಪ್ರಕರಣಗಳ ವಿಚಾರಣೆಗೆ ಪೀಠವನ್ನು ರಚಿಸಲು ರಿಜಿಸ್ಟ್ರಿಗೆ ನಿರ್ದೇಶನ ನೀಡಿತು.

ಕೆನಡಾದಲ್ಲಿ ನಟ ಕಪಿಲ್ ಶರ್ಮಾ ಕೆಫೆ ಮೇಲೆ 3ನೇ ಬಾರಿ ಗುಂಡಿನ ದಾಳಿ

ಒಟ್ಟಾವಾ: ಕೆನಡಾದಲ್ಲಿರುವ ನಟ ಕಪಿಲ್ ಶರ್ಮಾ ಕೆಫೆ ಮೇಲೆ ಮೂರನೇ ಬಾರಿ ಗುಂಡಿನ ದಾಳಿ ನಡೆದಿದೆ.



ಗುರುವಾರ (ಅ.16) ಕೆನಡಾದ ಸರ್ರೆಯಲ್ಲಿರುವ ಕೆಫೆ ಮೇಲೆ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಗುಂಡಿನ ದಾಳಿಯ ವಿಡಿಯೋ ವೈರಲ್ ಆಗಿದ್ದು, ವ್ಯಕ್ತಿಯೋರ್ವ ಕಾರಿನ ಕಿಟಕಿಯಿಂದ ಕೈ ಹೊರಗೆ ಹಾಕಿ ಹ್ಯಾಂಡ್‌ಗನ್‌ನಿಂದ ಗುಂಡು ಹಾರಿಸಿರುವುದು ಕಂಡುಬಂದಿದೆ. ಹಾರಿಸಿದ ಗುಂಡುಗಳು ಕೆಫೆಯ ಕಿಟಕಿ ಹಾಗೂ ಗೋಡೆಗೆ ತಾಗಿದೆ. ಗುಂಡಿನ ದಾಳಿ ನಡೆದ ಸಮಯದಲ್ಲಿ ಕೆಫೆಯೊಳಗೆ ಸಿಬ್ಬಂದಿಯಿದ್ದರು ಎಂದು ತಿಳಿದುಬಂದಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಸಹಚರರಾದ ಕುಲ್ವೀರ್ ಸಿಧು ಮತ್ತು ಗೋಲ್ಡಿ ಧಿಲ್ಲೋನ್ ದಾಳಿಯ ಹೊಣೆ ಹೊತ್ತಿದ್ದಾರೆ. ನಮಗೆ ಸಾರ್ವಜನಿಕರ ವಿರುದ್ಧ ಯಾವುದೇ ದ್ವೇಷವಿಲ್ಲ. ಆದರೆ ನಮಗೆ ಮೋಸ ಮಾಡುವವರಿಗೆ ನಾವು ಎಚ್ಚರಿಕೆ ನೀಡುತ್ತೇವೆ. ಗುಂಡು ಎಲ್ಲಿಂದಾದರೂ ಬರಬಹುದು ನಮ್ಮ ಧರ್ಮದ ವಿರುದ್ಧ ಮಾತನಾಡುವ ಬಾಲಿವುಡ್ ವ್ಯಕ್ತಿಗಳು ಕೂಡ ಸಿದ್ಧರಾಗಿರಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಶಬರಿಮಲೆ ಚಿನ್ನ ಕಳವು ಪ್ರಕರಣದ ಪ್ರಮುಖ ಆರೋಪಿ ಬಂಧನ

ತಿರುವನಂತಪುರ: ಶಬರಿಮಲೆ ದೇವಸ್ಥಾನದ ಸ್ವರ್ಣ ಲೇಪಿತ ತಾಮ್ರದ ದ್ವಾರಪಾಲಕರ ಮೂರ್ತಿಗಳಲ್ಲಿನ ಬಂಗಾರದ ತೂಕದಲ್ಲಿ ಕಡಿಮೆಯಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿಯನ್ನು ವಿಶೇಷ ತನಿಖಾ ತಂಡದ ಎಸ್‌ಐಟಿ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ. ಗುರುವಾರದಂದು ಬೆಂಗಳೂರು ಮೂಲದ ಉದ್ಯಮಿ ಉಣ್ಣಿಕೃಷ್ಣನ್ ಪೋಟಿಯನ್ನು ವಶಕ್ಕೆ ಪಡೆದಿದ್ದ ಎಸ್‌ಐಟಿ, ತಿರುವನಂತಪುರದಲ್ಲಿ ತೀವ್ರ ವಿಚಾರಣೆಗೆ ಒಳಪಡಿಸಿತ್ತು. ವಿಚಾರಣೆ ಬಳಿಕ ಎಸ್‌ಐಟಿ ಅಧಿಕಾರಿಗಳು ಪೋಟಿಯನ್ನು ಬಂಧಿಸಿದ್ದು, ವೈದ್ಯಕೀಯ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು, ಪತ್ತನಂತಿಟ್ಟದ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಚಾರಣೆ ವೇಳೆ ಪೋಟಿಯನ್ನು ಕಸ್ಟಡಿಗೆ ಒಪ್ಪಿಸುವಂತೆ ಎಸ್‌ಐಟಿ ಕೋರಲಿದೆ. ಕೇರಳ ಹೈಕೋರ್ಟ್ ನಿರ್ದೇಶನದ ಮೇರೆಗೆ ಎಸ್‌ಐಟಿ 2 ಪ್ರಕರಣಗಳ ತನಿಖೆ ನಡೆಸುತ್ತಿದೆ. ದ್ವಾರಪಾಲಕ ಮೂರ್ತಿಗಳಲ್ಲಿ ಚಿನ್ನ ಕಳವು ಜೊತೆಗೆ ದೇವಸ್ಥಾನದ ಗರ್ಭಗುಡಿಯ ಬಾಗಿಲಿನ ಚಿನ್ನವೂ ಕಾಣೆಯಾದ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ಹಿಂದೆ ಪೋಟಿಯನ್ನು ತಿರುವಾಂಕೂರು ದೇವಸ್ವಂ ಮಂಡಳಿ ಎರಡು ದಿನ ವಿಚಾರಣೆ ನಡೆಸಿದ್ದರು.



ಕಾವೇರಿ ತೀರ್ಥ ಸ್ವರೂಪಿಣಿಯಾಗಿ ಭಕ್ತರಿಗೆ ದರ್ಶನ

ಭಕ್ತಿ–ಸಂಭ್ರಮದಲ್ಲಿ ಮಿಂದೆದ್ದ ಭಕ್ತ ಸಮೂಹ



ತೀರ್ಥೋದ್ಭವವಾಗುತ್ತಿದ್ದಂತೆಯೇ ಪವಿತ್ರ ಕೊಳಕ್ಕೆ ಧುಮುಕಿರುವ ಭಕ್ತ ಮೂಹ

ಮಡಿಕೇರಿ, ಅ.17–ಜೀವ ನದಿ ಕಾವೇರಿಯ ಉಗಮ ಸ್ಥಾನ ತಲಕಾವೇರಿಯಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಸಲ್ಲುವ 'ಮಕರ' ಲಗ್ನದಲ್ಲಿ ಪವಿತ್ರ ಬ್ರಹ್ಮ ಕುಂಡಿಕೆಯಿಂದ ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ಆವಿರ್ಭವಿಸಿ ಭಕ್ತರಿಗೆ ದರ್ಶನ ನೀಡಿದಳು.

ಭಕ್ತರ ಜಯಘೋಷ, ವೈದಿಕ ತಂಡದವರಿಂದ ವೇದ ಮಂತ್ರಗಳ ಪಠಣ, ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪವಿತ್ರ ಕುಂಡಿಕೆಯಲ್ಲಿ 'ತೀರ್ಥ ಸ್ವರೂಪಿಣಿ' ಮಾತೆ ಕಾವೇರಿಯ ದರ್ಶನ ಪಡೆದು ಭಕ್ತ ಸಮೂಹ ಪಾವನವಾಗಿ ಜೈ ಜೈ ಮಾತಾ, ಕಾವೇರಿ ಮಾತಾ, ಕಾವೇರಮ್ಮನ ಪಾದಾರವಿಂದಕ್ಕೆ ಗೋವಿಂದಾ, ಕಾವೇರಿ ಮಾತೆ ಉಕ್ಕಿ ಬಾ ಘೋಷಣೆಗಳು ಮುಗಿಲು ಮುಟ್ಟಿದವು. ಕೊಡವ ಸಾಂಪ್ರದಾಯಿಕ ದುಡಿಕೊಟ್ಟ್ ಪಾಟ್ ಮೂಲಕ ಕಾವೇರಿ ಮಾತೆಯನ್ನು ಸ್ತುತಿಸಿದರೆ, ಸಾಂಪ್ರದಾಯಿಕ ವಾಲಗದ ಸದ್ದು ಪುಣ್ಯ ಕ್ಷೇತ್ರದಲ್ಲಿ ಪ್ರತಿಧ್ವನಿಸಿತು.

ತಲಕಾವೇರಿಯ ತೀರ್ಥ ಕುಂಡಿಕೆಯಲ್ಲಿ ಪ್ರಧಾನ ಅರ್ಚಕ ಪ್ರಶಾಂತ್ ಆಚಾರ್ ನೇತೃತ್ವದಲ್ಲಿ ಅರ್ಚಕರಾದ ಗುರುರಾಜ್, ರವಿರಾಜ್, ಸುಧೀರ್ ಆಚಾರ್, ರವಿರಾಜ್ ಆಚಾರ್ ಮಧ್ಯಾಹ್ನ ವಿವಿಧ ಪೂಜಾ–ವಿಧಿಗಳನ್ನು ನೆರವೇರಿಸಿದರು. ಸಂಕಲ್ಪ ನೆರವೇರಿಸಿ ಕುಂಕುಮಾರ್ಚನೆ ನಂತರ ಮಹಾ ಮಂಗಳಾರತಿ ಮಾಡಲಾಯಿತು. ಕುಂಡಿಕೆಯಿಂದ ತೀರ್ಥ ಹೊರ ತೆಗೆದ ಕೂಡಲೇ ಮೊದಲಿಗೆ ಬ್ರಹ್ಮಾರ್ಪಣೆ ಮಾಡಲಾಯಿತು. ಬಳಿಕ ಬೆಳ್ಳಿಯ ಬಿಂದಿಗೆಯಲ್ಲಿ ತೀರ್ಥ ಹೊರ ತೆಗೆದು ಭಾಗಮಂಡಲದ ಶ್ರೀ ಭಗಂಡೇಶ್ವರ ಅಭಿಷೇಕಕ್ಕಾಗಿ ಸನ್ನಿಧಿಗೆ ಕೊಂಡೊಯ್ಯಲಾಯಿತು. ನಂತರ ಅರ್ಚಕ ವೃಂದ ಸುತ್ತಲೂ ನೆರೆದಿದ್ದ ಭಕ್ತರ ಮೇಲೆ ಸಂಪ್ರೋಕ್ಷಣೆ ಮಾಡಿದರು.

ಭಕ್ತರ ನೂಕು–ನುಗ್ಗಲು ತಡೆಯುವ ಸಲುವಾಗಿ ಪವಿತ್ರ ಕೊಳ ಮತ್ತು ಕುಂಡಿಕೆಯ ಸುತ್ತಲೂ ಬಿದಿರು ತಡೆಗೋಡೆ ಮತ್ತು ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದಲ್ಲದೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗುತ್ತಿದ್ದಂತೆಯೇ ಪವಿತ್ರ ಕೊಳದ ಸುತ್ತಲೂ ಭಕ್ತರ ಸಂಖ್ಯೆ ಏರತೊಡಗಿತು. ಇನ್ನೇನು ತೀರ್ಥೋದ್ಭವ ಸನ್ನಿಹಿತವಾಗುತ್ತಿದ್ದಂತೆಯೇ ಏಕಾಏಕಿ ಭಕ್ತ ಸಮೂಹ ಪವಿತ್ರ ಕೊಳಕ್ಕೆ ಧುಮುಕುವ ಮೂಲಕ ಕಾವೇರಿ ಮಾತೆಗೆ ತಮ್ಮ ಭಕ್ತಿ ಪ್ರದರ್ಶಿಸಿದರು. ಬಳಿಕ ತಾವುಗಳು ತಂದಿದ್ದ ಸ್ಟೀಲ್ ಬಿಂದಿಗೆಗಳಲ್ಲಿ ತೀರ್ಥ ತುಂಬಿಕೊಂಡು ಪ್ರಸನ್ನರಾದರು.

ಜಿಲ್ಲೆಯ ವಿವಿಧೆಡೆಗಳಿಂದಲ್ಲದೆ ಮೈಸೂರು, ಮಂಡ್ಯ, ಮದ್ದೂರು, ಬೆಂಗಳೂರು, ನೆರೆಯ ಕೇರಳ, ತಮಿಳುನಾಡು ಮೊದಲಾದೆಡೆಗಳಿಂದ ಸಹಸ್ರಾರು ಭಕ್ತರು ಪವಿತ್ರ ಕ್ಷೇತ್ರಕ್ಕೆ ಆಗಮಿಸಿದ್ದರು. ವಿವಿಧ ಕೊಡವ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರು, ಕೊಡವ ಸಮಾಜದ ಪದಾಧಿಕಾರಿಗಳು, ಕೊಡವ ಪೊಮ್ಮಕ್ಕಡ ಕೂಟದ ಸದಸ್ಯರು ಬೊಳ್ಚ(ದೀಪ) ಹಿಡಿದು ಭಾಗಮಂಡಲದಿಂದ ತಲಕಾವೇರಿವರೆಗೆ ಸಾಂಪ್ರದಾಯಿಕ ಉಡುಗೆಯಲ್ಲಿ ದುಡಿಕೊಟ್ ಪಾಟ್ ಮೂಲಕ ಪಾದಯಾತ್ರೆಯಲ್ಲಿ ಸಾಗಿ ಬಂದರು.

ಯುನೈಟೆಡ್ ಕೊಡವ ಆರ್ಗನೈಜೇಷನ್, ಕೊಡವ ರೈಡರ್ಸ್ ಕ್ಲಬ್, ಅಖಿಲ ಕೊಡವ ಸಮಾಜ ಯೂತ್‌ವಿಂಗ್, ಕೊಡವ ಮಕ್ಕಡ ಕೂಟ ಸೇರಿದಂತೆ ನೂರಾರು ಸಂಖ್ಯೆಯಲ್ಲಿದ್ದ ಕೊಡವ ಸಂಘಟನೆಗಳ ಸದಸ್ಯರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಪಿಂಡ ಪ್ರದಾನ, ಕೇಶ ಮುಂಡನ ಮತ್ತಿತರ ಸಾಂಪ್ರದಾಯಿಕ ಪೂಜಾ ವಿಧಿ ವಿಧಾನಗಳು ನಡೆದವು. ಭಾಗಮಂಡಲದಿಂದ ತಲಕಾವೇರಿಗೆ ಕೆಎಸ್‌ಆರ್‌ಟಿಸಿ ಬಸ್ ವಿಶೇಷ ಸೇವೆ ಒದಗಿಸಲಾಗಿತ್ತು ಕೊಡಗು ಏಕೀಕರಣ ರಂಗದ ವತಿಯಿಂದ ಎಲ್ಲಾ ಭಕ್ತರಿಗೂ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ತೀರ್ಥೋದ್ಭವವನ್ನು ಭಕ್ತರು ವೀಕ್ಷಿಸಲು ಅನುಕೂಲವಾಗುವಂತೆ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಿ ನೇರ ಪ್ರಸಾರ ಮಾಡಲಾಗಿತ್ತು. ಈ ಬಾರಿ ಹಗಲಿನ ವೇಳೆ ತೀರ್ಥೋದ್ಭವವಾದ ಕಾರಣ ನಿರೀಕ್ಷೆಗೂ ಮೀರಿ ಭಕ್ತರು ಕ್ಷೇತ್ರಕ್ಕೆ ಆಗಮಿಸಿದ್ದರು.

ಭಾಗಮಂಡಲದಿಂದ ತಲಕಾವೇರಿವರೆಗೆ ಯದುವೀರ್ ಪಾದಯಾತ್ರೆ



ಪಾದಯಾತ್ರೆಯಲ್ಲಿ ಬರುತ್ತಿರುವ ಸಂಸದ ಯದುವೀರ್

ಮಡಿಕೇರಿ: ನಮ್ಮ ನಾಡಿನ ಜೀವನದಿ, ಸಕಲ ಜೀವರಾಶಿಗಳಿಗೂ ತಾಯಿ ಸ್ವರೂಪಳಾದ ಕಾವೇರಿ ಮಾತೆಯ ತೀರ್ಥೋದ್ಭವದಲ್ಲಿ ಪಾಲ್ಗೊಂಡಿದ್ದು ನಿಜಕ್ಕೂ ಧನ್ಯತಾ ಭಾವ ಮೂಡಿಸಿತು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಕಾವೇರಿ ತೀರ್ಥೋದ್ಭವವನ್ನು ಕಣ್ತುಂಬಿಕೊಂಡ ನಂತರ ಹೇಳಿಕೆ ನೀಡಿರುವ ಅವರು, ಇದೊಂದು ಅಪೂರ್ವ ಕ್ಷಣ ಮತ್ತು ಕಾವೇರಿ ಮಾತೆಯು ತೀರ್ಥ ಸ್ವರೂಪದಲ್ಲಿ ಉಕ್ಕುತ್ತಿದ್ದಂತೆ ಧಾರ್ಮಿಕ ಭಾವನೆಗಳೂ ಉಕ್ಕುತ್ತವೆ ಎಂದು ತಿಳಿಸಿದ್ದಾರೆ.

ಇದಕ್ಕೂ ಮುನ್ನ ಕೊಡಗು ಜನರು ಹಾಗೂ ನಮ್ಮ ನಾಯಕರೊಂದಿಗೆ ಭಾಗಮಂಡಲದಿಂದ ತಲಕಾವೇರಿವರೆಗೆ ಪಾದಯಾತ್ರೆಯಲ್ಲಿ ಬಂದಿದ್ದು ನಿಜಕ್ಕೂ ಹೆಮ್ಮೆ ಎನಿಸಿತು. ಇದೊಂದು ಅಪೂರ್ವ ಅವಕಾಶವಾಗಿತ್ತು ಎಂದರು. ಕಾವೇರಿ ಮಾತೆ ಸಮೃದ್ಧತೆಯಿಂದ ಕೂಡಿದ್ದರೆ ನಾಡು ಸಮೃದ್ಧವಾಗಿರುತ್ತದೆ. ನಾಡಿನಲ್ಲಿ ಶಾಂತಿ, ನೆಮ್ಮದಿ, ಸುಭಿಕ್ಷೆ ತುಂಬಿರಲಿ ಇದೇ ಸಂದರ್ಭದಲ್ಲಿ ಮನಸಾರೆ ಪ್ರಾರ್ಥಿಸಿದ್ದೇನೆ ಎಂದು ಯದುವೀರ್ ಒಡೆಯರ್ ಹೇಳಿದ್ದಾರೆ.

ಕೊಡಗು ಬಿಜೆಪಿ ಅಧ್ಯಕ್ಷ ರವಿ ಕಾಳಪ್ಪ, ಮಡಿಕೇರಿ ನಗರಸಭಾ ಉಪಾಧ್ಯಕ್ಷರು, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಜಿಲ್ಲಾ ವಕ್ತಾರ ತಲೂರ್ ಕಿಶೋರ್ ಕುಮಾರ್, ಸತೀಶ್ ಜೋಯಪ್ಪ, ಯಮುನಾ ಚಂಗಪ್ಪ, ಪಂಚಾಯತ್ ಅಧ್ಯಕ್ಷ ಕಾಳನ ರವಿ, ರಾಕೇಶ್ ಶರತ್ ಸೇರಿದಂತೆ ಪಕ್ಷದ ಕಾರ್ಯಕರ್ತರು, ಸಾವಿರಾರು ಭಕ್ತರು ಸಂಸದರ ಜೊತೆಯಲ್ಲಿ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.

ಹುಲಿ ಹೆಜ್ಜೆ ಗುರುತು ಪತ್ತೆ ಗ್ರಾಮಸ್ಥರಲ್ಲಿ ಆತಂಕ



ನರಿಯಂದಡ ಗ್ರಾಮದ ತೋಟಗಳಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ.

ನಾಪೋಕ್ಲು: ಇಲ್ಲಿಗೆ ಸಮೀಪದ ನರಿಯಂದಡ ಗ್ರಾಮದ ತೋಟಗಳಲ್ಲಿ ಹುಲಿಯ ಹೆಜ್ಜೆ ಗುರುತು ಪತ್ತೆಯಾಗಿದ್ದು ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದೆ.

ನರಿಯಂದಡ ಗ್ರಾಮ ಪಂಚಾಯಿತಿಗೆ ಒಳಪಟ್ಟ ನರಿಯಂದಡ ಗ್ರಾಮದ ಪೊಕ್ಕೋಳಂಡ್ರ, ಮಕ್ಕಿಮನೆ, ಮಂಞಪುರ ಕುಟುಂಬಸ್ಥರ ತೋಟಗಳಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಗ್ರಾಮ ವ್ಯಾಪ್ತಿಯಲ್ಲಿ ಹುಲಿ ಚಲನ ವಲನ ಕಂಡುಬಂದಲ್ಲಿ ಕೂಡಲೇ ಅರಣ್ಯ ಇಲಾಖೆಯನ್ನು ಸಂಪರ್ಕಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಸೂಚಿಸಿದ್ದಾರೆ.

ನೆಲಜಿಯಲ್ಲಿ ಕಾಡಾನೆಗಳ ದಾಂದಲೆ ಪೈರು ನಾಶ



ಕಾಡಾನೆಗಳು ಬತ್ತದ ಪೈರನ್ನು ತುಳಿದು ನಾಶಮಾಡಿರುವುದು.

ನಾಪೋಕ್ಲು: ಸಮೀಪದ ಬಲ್ಲಮಾವಟಿ ಗ್ರಾಮ ಪಂಚಾಯಿತಿಯ ನೆಲಜಿ ಗ್ರಾಮದ ಅಪ್ಪು ಮಣಿಯಂಡ ರಘುಸುಬ್ಬಯ್ಯ ಅವರ ಬತ್ತದ ಗದ್ದೆಗಳಲ್ಲಿ ಬುಧವಾರ ರಾತ್ರಿ ಕಾಡಾನೆಗಳು ಪೈರನ್ನು ತುಳಿದು ನಾಶ ಮಾಡಿವೆ.

ಇದೀಗ ಗದ್ದೆಗಳಲ್ಲಿ ಪೈರು ತೆನೆ ಬಿಡುವ ಹಂತದಲ್ಲಿದ್ದು ಕಾಡಾನೆಗಳ ದಾಂದಲೆಯಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕಾಡಾನೆಗಳು ತೋಟಗಳಲ್ಲೂ ಅಡ್ಡಾಡಿದ್ದು ಕೃಷಿ ಫಸಲು ಹಾನಿಗೊಳಗಾಗಿದೆ. ನೆಲಜಿ, ಬಲ್ಲಮಾವಟಿ, ಪೇರೂರು ವ್ಯಾಪ್ತಿಗಳಲ್ಲಿ ಕಾಡಾನೆಗಳು ನಿರಂತರ ದಾಳಿ ಮಾಡುತ್ತಿದ್ದು ಅಧಿಕಾರಿವರ್ಗ ಇತ್ತ ಗಮನ ಹರಿಸುತ್ತಿಲ್ಲ. ಇಲಾಖೆಗಳು ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ ಎಂದು ರಘು ಸುಬ್ಬಯ್ಯ ಆರೋಪಿಸಿದ್ದಾರೆ.

ಬಾವಿಗೆ ಬಿದ್ದ ಹಸು; ಅಗ್ನಿ ಶಾಮಕ ದಳದಿಂದ ರಕ್ಷಣೆ

ಮಡಿಕೇರಿ, ಅ.17: ಬಾವಿಗೆ ಆಕಸ್ಮಿಕವಾಗಿ ಬಿದ್ದು ನರಳಾಡುತ್ತಿದ್ದ 6 ವರ್ಷ ಪ್ರಾಯದ ಗರ್ಭಿಣಿ ಹಸುವನ್ನು ಅಗ್ನಿ ಶಾಮಕ ದಳದ ಸಿಬ್ಬಂದಿ ಮತ್ತು ಗ್ರಾಮಸ್ಥರು ಸುರಕ್ಷಿತವಾಗಿ ಮೇಲಕ್ಕೆತ್ತಿದ ಘಟನೆ ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೈಸ್ಕೂಲ್ ಪೈಸಾರಿ ಗ್ರಾಮದ ಕುಸುಮ ಎಸ್ಟೇಟ್‌ನಲ್ಲಿ ನಡೆದಿದೆ.

ತೆರೆದ ಬಾವಿಗೆ 6 ತಿಂಗಳ ಗರ್ಭಿಣಿ ಹಸುವೊಂದು ಕಾಲು ಜಾರಿ ಬಿದ್ದಿತ್ತು. ಸುಮಾರು 20 ಅಡಿಗೂ ಹೆಚ್ಚು ಆಳದ ಬಾವಿಗೆ ಹಸು ಬಿದ್ದಿದ್ದರಿಂದ ಸ್ಥಳೀಯ ನಿವಾಸಿ ಮತ್ತು ಹಸುವಿನ ಮಾಲೀಕ ಸೂರಿ ಗೋಣಿಕೊಪ್ಪ ಅಗ್ನಿ ಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ಬಂದ ಅಗ್ನಿ ಶಾಮಕ ಸಿಬ್ಬಂದಿಗಳು ಮತ್ತು ಸ್ಥಳೀಯರು ಬಾವಿಯಿಂದ ನಿರಂತರ 3 ಗಂಟೆ ಕಾರ್ಯಾಚರಣೆ ಬಳಿಕ ಹಸುವನ್ನು ಹಗ್ಗದ ಸಹಾಯದಿಂದ ಸುರಕ್ಷಿತವಾಗಿ ಮೇಲಕ್ಕೆತ್ತಿದ್ದರು. ಈ ವೇಳೆ ಗೋಣಿಕೊಪ್ಪ ಅಗ್ನಿ ಶಾಮಕ ಠಾಣಾಧಿಕಾರಿ ಡಿ.ಜೆ. ಮಂಜೇಗೌಡ, ಸಿಬ್ಬಂದಿ ಗಳಾದ ದೇವಿಂದ್ರಪ್ಪ, ಸುನೀಲ್ ಕುಮಾರ್, ಅರುಣ್, ಸಂತೋಷ್ ಕುಮಾರ್, ಸದಾಶಿವ, ಗಿರಿಸಾಗರ, ಭೀಮೇಶ್, ಗ್ರಾಮಸ್ಥರಾದ ವಿನೋದ್, ರವಿ, ದೊರೆ, ಸುಗುಣ, ವಿಜು, ಕೃಷ್ಣ, ರವಿ, ಈಶ್ವರ, ಜಾಫರ್, ಗಾಂಧಿ ಸೇರಿದಂತೆ ಹಲವರು ಸಾರ್ವಜನಿಕರು ಹಾಜರಿದ್ದರು.

ಬಿ.ಸಿ. ಲೀಲಾವತಿ ನಿಧನ

ನಾಪೋಕ್ಲು, ಅ.17–ಇಲ್ಲಿಗೆ ಸಮೀಪದ ಬಲ್ಲಮ್ಮಾವಟ್ಟಿ ಗ್ರಾಮದ ನಿವಾಸಿ ಹೆಡಿಕೇರಿ ನಾಣಯ್ಯರ ಧರ್ಮಪತ್ನಿ ಬಿ.ಸಿ. ಲೀಲಾವತಿ (63) ಗುರುವಾರ ಅನಾರೋಗ್ಯದಿಂದ ಸ್ವರ್ಗಸ್ಥರಾದರು. ಮೃತರ ಅಂತ್ಯಕ್ರಿಯೆ ಅಂದೇ ಹೆಡಿಕೇರಿ ಕುಟುಂಬಸ್ಥರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪತಿ ನಾಣಯ್ಯ, ಓರ್ವ ಪುತ್ರ ಮತ್ತು ಪುತ್ರಿ ಸೇರಿದಂತೆ ಬಂಧುಮಿತ್ರರನ್ನು ಅಗಲಿದ್ದಾರೆ.

ಸ್ವಚ್ಛತಾ ಅಭಿಯಾನದಲ್ಲಿ 200 ಟನ್ ತ್ಯಾಜ್ಯ ಸಂಗ್ರಹ



ಸ್ವಚ್ಛಕೊಡಗು–ಸುಂದರ ಕೊಡಗು ಸ್ವಚ್ಛತಾ ಅಭಿಯಾನದಲ್ಲಿ 200 ಟನ್ ತ್ಯಾಜ್ಯ ಸಂಗ್ರಹವಾಗಿದೆ.


ಮಡಿಕೇರಿ: ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಕೈಗೊಳ್ಳಲಾಗಿದ್ದ ಸ್ವಚ್ಛಕೊಡಗು–ಸುಂದರ ಕೊಡಗು ಸ್ವಚ್ಛತಾ ಅಭಿಯಾನದಲ್ಲಿ ಜಿಲ್ಲೆಯಾದ್ಯಂತ 200 ಟನ್ ತ್ಯಾಜ್ಯ ಸಂಗ್ರಹವಾಗಿದೆ. ಮೈಸೂರಿನ ತ್ಯಾಜ್ಯ ವಿಲೇವಾರಿ ಸಂಗ್ರಹಾಗಾರ ಸೇರಿದಂತೆ ಕೊಡಗು ಜಿಲ್ಲೆಯ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಇವುಗಳನ್ನು ರವಾನಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ತಿಳಿಸಿದ್ದಾರೆ.

ಸ್ವಚ್ಛಕೊಡಗು–ಸುಂದರ ಕೊಡಗು ಅಭಿಯಾನದಲ್ಲಿ ಜಿಲ್ಲೆಯ 30 ಸಾವಿರದಷ್ಟು ಸ್ವಚ್ಛತಾ ಕಾರ್ಯಕರ್ತರಿಗೆ 33,800 ಕೈಕವಚ ಮತ್ತು 9,200 ತ್ಯಾಜ್ಯ ಸಂಗ್ರಹಣಾ ಬ್ಯಾಗ್‌ಗಳನ್ನು ವಿತರಿಸಲಾಗಿದೆ. ಜಿಲ್ಲೆಯ 178 ಸ್ಥಳಗಳಲ್ಲಿ 330ಕ್ಕೂ ಅಧಿಕ ಸಂಘ ಸಂಸ್ಥೆಗಳಿಗೆ ಸೇರಿದ ಅಂದಾಜು 30 ಸಾವಿರದಷ್ಟು ಜನರು ಸ್ವಯಂ ಪ್ರೇರಣೆಯಿಂದ ಸ್ವಚ್ಛತಾ ರಾಯಭಾರಿಗಳಾಗಿ ಜಿಲ್ಲೆಯಾದ್ಯಂತ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಪ್ರಯತ್ನದಿಂದ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಸಹಕಾರ ಪಡೆದು 17 ಸಂಗ್ರಹಣ ಕೇಂದ್ರಗಳಿಂದ ಪಡೆದುಕೊಂಡ ತ್ಯಾಜ್ಯವನ್ನು ಜಿಲ್ಲೆಯ 145 ತ್ಯಾಜ್ಯ ಸಂಗ್ರಹಣಾ ಮಾರ್ಗಗಳಿಂದ ಟ್ರಕ್ ಮೂಲಕ ಪಡೆದು ಶಾಸಕ ಎ.ಎಸ್. ಪೊನ್ನಣ್ಣ, ಡಾ.ಮಂತರ್ ಗೌಡರ ಸಹಕಾರದೊಂದಿಗೆ ಮೈಸೂರಿಗೆ ಕಳುಹಿಸಲಾಗಿದೆ ಎಂದು ಅವರು ಹೇಳಿದರು.

ಇದು ಕೇವಲ 1 ದಿನಕ್ಕೆ ಸೀಮಿತವಾದ ಅಭಿಯಾನ ಆಗಬಾರದು. ಸ್ವಚ್ಛ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿಯೂ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವಿವಿಧ ಕಾರ್ಯ ಯೋಜನೆ ಹಮ್ಮಿಕೊಳ್ಳಲಿದೆ. ಸ್ವಚ್ಛ ಕೊಡಗು ಸುಂದರ ಕೊಡಗು ಅಭಿಯಾನಕ್ಕೆ ಜಿಲ್ಲೆಯಾದ್ಯಂತ ನಿರೀಕ್ಷೆಗೂ ಮೀರಿದ ಸ್ಪಂದನ ದೊರಕಿದ್ದು ಸಮಾಧಾನ ತಂದಿದೆ ಎಂದರು. ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಈ ಅಭಿಯಾನದ ಮೂಲಕ ಕೊಡಗಿನಲ್ಲಿ ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಮತ್ತಷ್ಟು ಒತ್ತು ನೀಡಿದೆ ಎಂದೂ ಹೇಳಿದರು.

ಜಿಲ್ಲಾಧಿಕಾರಿ ಶ್ಲಾಘನೆ: ಸ್ವಚ್ಛ ಕೊಡಗು–ಸುಂದರ ಕೊಡಗು ಅಭಿಯಾನ ಯಶಸ್ವಿಯಾದ ಸಂಬಂಧಿತ ಜಿಲ್ಲಾಧಿಕಾರಿ ವೆಂಕಟರಾಜ ಅವರು ಈ ಯಶಸ್ವಿಗೆ ಕಾರಣರಾದ ಕೊಡಗಿನ ಸರ್ವ ಜನತೆಯನ್ನು ಶ್ಲಾಘಿಸಿದ್ದಾರೆ. ಇಂತಹ ಅಭಿಯಾನವನ್ನು ಕೆಲವೇ ದಿನಗಳಲ್ಲಿ ಆಯೋಜಿಸಿ ಜಿಲ್ಲೆಯಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್‌ನ ಸರ್ವ ಸದಸ್ಯರ ಶ್ರಮವನ್ನೂ ಜಿಲ್ಲಾಧಿಕಾರಿ ಅಭಿನಂದಿಸಿದ್ದಾರೆ.

ಗ್ರಾಪಂ ಕಚೇರಿ ಮುಂಭಾಗ ವಾಟರ್‌ಮ್ಯಾನ್ ಆತ್ಮಹತ್ಯೆ




ಚಿಕ್ಕೂಸನಾಯಕ

ಚಾಮರಾಜನಗರ, ಅ.17–ಗ್ರಾಮ ಪಂಚಾಯಿತಿ ಕಚೇರಿಯ ಮುಂಭಾಗ ವಾಟರ್‌ಮ್ಯಾನ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೊಂಗನೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿಯಾದ ಚಿಕ್ಕೂಸನಾಯಕ ಆತ್ಮಹತ್ಯೆ ಮಾಡಿಕೊಂಡಿರುವ ವಾಟರ್‌ಮ್ಯಾನ್. ಹೊಂಗನೂರು ಗ್ರಾಮ ಪಂಚಾಯಿತಿಯಲ್ಲಿ 9 ವರ್ಷಗಳಿಂದ ವಾಟರ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ ಚಿಕ್ಕೂಸನಾಯಕ ಶುಕ್ರವಾರ ಬೆಳಗ್ಗೆ ಗ್ರಾಪಂ ಕಚೇರಿ ಮುಂಭಾಗದ ಕಿಟಕಿಯ ಕಬ್ಬಿಣದ ಸರಳಿಗೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಶವದ ಪಕ್ಕದ ಗೋಡೆಯಲ್ಲಿ ಡೆತ್‌ನೋಟ್ ಅಂಟಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಪೂರ್ವ ಪೊಲೀಸ್ ಠಾಣೆಯ ಅಧಿಕಾರಿಗಳು, ಸಿಬ್ಬಂದಿ ಭೇಟಿ ನೀಡಿ, ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೆತ್ ನೋಟ್‌ನಲ್ಲೇನಿದೆ: ಹೊಂಗನೂರು ಗ್ರಾಮ ಪಂಚಾಯಿತಿಯಲ್ಲಿ 2016ರಿಂದ ವಾಟರ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದು ಈಚೆಗೆ ಆರೋಗ್ಯ ಸರಿ ಇಲ್ಲದ ಕಾರಣ ರಾಜೀನಾಮೆ ನೀಡುವುದಾಗಿ ಹೇಳಿ ಬಾಕಿ ಬರಬೇಕಿರುವ 27 ತಿಂಗಳ ವೇತನ ಪಾವತಿಸುವಂತೆ ಪಿಡಿಓ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಮಾಡಿದ್ದೆ. ಆದರೆ ಇಬ್ಬರೂ ಸ್ಪಂದಿಸಲಿಲ್ಲ. ಬಾಕಿ ವೇತನಕ್ಕಾಗಿ ಜಿಲ್ಲಾ ಪಂಚಾಯಿತಿ ಸಿಇಓ ಅವರಿಗೆ ಮನವಿ ನೀಡಿದರೂ ಸಂಬಳ ಕೊಡಿಸಲಿಲ್ಲ. ರಜೆ ಕೇಳಿದರೆ ಬೇರೊಬ್ಬರನ್ನು ಕೆಲಸಕ್ಕೆ ನಿಯೋಜಿಸಿ ಹೋಗು ಎಂದು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು. ಬೆಳಗ್ಗೆ 8ರಿಂದ ಸಂಜೆ 6ಗಂಟೆಯವರೆಗೂ ಕಚೇರಿಯಲ್ಲಿ ಇರಬೇಕು ಎಂದು ತೊಂದರೆ ಕೊಡುತ್ತಿದ್ದರು. ಇವರ ಕಿರುಕುಳಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಚಿಕ್ಕೂಸನಾಯಕ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.



ಚಿಕ್ಕೂಸನಾಯಕ ಬರೆದಿರುವ ಡೆತ್‌ನೋಟ್

ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ತಿಳಿದು ಗ್ರಾ.ಪಂ. ಅಧ್ಯಕ್ಷೆ ಪತಿ ಮೋಹನಕುಮಾರ್ ಹಾಗೂ ಪಿಡಿಓ ರಾಮೇಗೌಡ ತಲೆ ಮರೆಸಿಕೊಂಡಿದ್ದಾರೆ. ಇವರ ವಿರುದ್ಧ ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಡಿಓ ಅಮಾನತು: ವಾಟರ್‌ಮ್ಯಾನ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯ ಸಂಬಂಧ ಹೊಂಗನೂರು ಪಿಡಿಓ ಕೆ.ಎನ್. ರಾಮೇಗೌಡ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಸಿಇಓ ಮೋನಾರೋತ್ ಆದೇಶ ಹೊರಡಿಸಿದ್ದಾರೆ.

ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ತೋರಿರುವುದರಿಂದ ಈ ರೀತಿ ಪ್ರಕರಣ ಉದ್ಭವವಾಗಲು ಮೇಲ್ನೋಟಕ್ಕೆ ಪಿಡಿಓ ರಾಮೇಗೌಡ ಕಾರಣರಾಗಿದ್ದು, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಮುಂದಿನ ಆದೇಶದವರೆಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿಟ್ಟು ಆದೇಶಿಸಿದ್ದಾರೆ.

ನೀರುಗಂಟಿ ಆತ್ಮಹತ್ಯೆಗೆ ಕಾರಣರಾದವರ ಮೇಲೆ ಎಫ್‌ಐಆರ್ ದಾಖಲಿಸಲು ಒತ್ತಾಯಿಸಿ ಪ್ರತಿಭಟನೆ



ಪ್ರತಿಭಟನಾನಿರತರನ್ನು ಭೇಟಿ ಮಾಡಿದ ಜಿಲ್ಲಾ ಎಸ್ಪಿ ಡಾ.ಬಿ.ಟಿ.ಕವಿತಾ, ಜಿ.ಪಂ. ಸಿಇಓ ಮೋನಾರೋತ್ ಅಹವಾಲು ಆಲಿಸಿದರು.

ಚಾಮರಾಜನಗರ, ಅ.17–ತಾಲೂಕಿನ ಹೊಂಗನೂರು ಗ್ರಾ. ಪಂ.ನ ನೀರುಗಂಟಿ ಆತ್ಮಹತ್ಯೆಗೆ ಕಾರಣರಾದವರ ಮೇಲೆ ಎಫ್‌ಐಆರ್ ಹಾಕಿ ಬಂಧಿಸಬೇಕು ಹಾಗೂ ಮೃತರ ಕುಟುಂಬಕ್ಕೆ ಸರ್ಕಾರಿ ನೌಕರಿ, 50 ಲಕ್ಷ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ನಾಯಕ ಜನಾಂಗದ ಮುಖಂಡರು ಮೃತರ ಕುಟುಂಬದೊಂದಿಗೆ ನಗರದ ಜಿಲ್ಲಾಡಳಿತ ಭವನದ ಎದುರು ದಿಢೀರ್ ಪ್ರತಿಭಟನೆ ನಡೆಸಿದರು.

ಗ್ರಾ.ಪಂ.ಅಧ್ಯಕ್ಷರ ಪತಿ, ಪಿಡಿಓ ವಿರುದ್ಧ ಮಾತ್ರ ಎಫ್‌ಐಆರ್ ದಾಖಲು ಮಾಡಿ ಅಧ್ಯಕ್ಷರನ್ನು ಪೊಲೀಸರು ಎಫ್‌ಐಆರ್‌ನಿಂದ ಕೈಬಿಟ್ಟಿದ್ದಾರೆ. ಗ್ರಾಪಂ ಅಧ್ಯಕ್ಷರ ವಿರುದ್ಧ ಎಫ್‌ಐಆರ್ ದಾಖಲು ಮಾಡದಿದ್ದರೆ ಶವವನ್ನು ತೆಗೆದುಕೊಳ್ಳುವುದಿಲ್ಲ ಎಂದು ಪ್ರತಿಭಟನಾನಿರತರು ಪಟ್ಟು ಹಿಡಿದಾಗ ಸ್ಥಳದಲ್ಲೇ ಹಾಜರಿದ್ದ ಎಸ್ಪಿ ಕವಿತಾ ಲಿಖಿತ ದೂರು ನೀಡಿದರೆ ಎಫ್‌ಐಆರ್ ಮಾಡುವುದಾಗಿ ತಿಳಿಸಿದಾಗ ಸ್ಥಳದಲ್ಲೇ ಪ್ರತಿಭಟನಾನಿರತರು ಲಿಖಿತ ದೂರು ನೀಡಿದರು.

ಇದೇ ವೇಳೆಯಲ್ಲಿ ಮೃತರ ಕುಟುಂಬಕ್ಕೆ ಸರ್ಕಾರಿ ನೌಕರಿ, 50 ಲಕ್ಷ ಪರಿಹಾರ ನೀಡುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಎಸ್‌ಪಿ ಡಾ.ಬಿ.ಟಿ.ಕವಿತಾ, ಜಿ.ಪಂ. ಸಿಇಓ ಮೋನಾರೋತ್‌ರಿಗೆ ಮನವಿ ಸಲ್ಲಿಸಿದರು. ಪಿಡಿಓ ಅಮಾನತ್ತು ಮಾಡುವುದಾಗಿ ಮೋನಾರೋತ್ ಭರವಸೆ ನೀಡಿದರು. ಪರಿಹಾರ ಕುರಿತು ಸರ್ಕಾರಕ್ಕೆ ವರದಿ ಮಾಡುವುದಾಗಿ ಜವರೇಗೌಡ ಆಶ್ವಾಸನೆ ಮೇರೆಗೆ ಪ್ರತಿ ಭಟನೆ ವಾಪಸ್ ಪಡೆದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಾಯಕ ಜನಾಂಗದ ಮುಖಂಡ ಪು.ಶ್ರೀನಿವಾಸ ನಾಯಕ ಮಾತನಾಡಿ, ತಾಲೂಕಿನ ಹೊಂಗನೂರು ಗ್ರಾಮ ಪಂಚಾಯಿತಿಯ ನೀರುಗಂಟಿ ಚಿಕ್ಕೂಸನಾಯಕ ಆತ್ಮಹತ್ಯೆಗೆ ಕಾರಣರಾದ ಗ್ರಾ.ಪಂ.ಅಧ್ಯಕ್ಷೆ ರೂಪ, ಅವರ ಪತಿ ಮೋಹನ್‌ಕುಮಾರ್, ಪಿಡಿಓ ರಾಮೇಗೌಡರ ಮೇಲೆ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು. ಮೃತರ ಕುಟುಂಬಕ್ಕೆ ಸರ್ಕಾರಿ ನೌಕರಿ, 50 ಲಕ್ಷ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ನಗರಸಭಾ ಸದಸ್ಯ ಶಿವರಾಜ್, ನಾಯಕ ಜನಾಂಗದ ಮುಖಂಡರಾದ ಕೃಷ್ಣನಾಯಕ, ನಾಗೇಂದ್ರ,ಅಗರರಾಜು, ಸಿಂಗನಪುರ ಮಾದೇಶ್, ಜ್ಯೋತಿಗೌಡನಪುರ ಬಸವಣ್ಣ, ಗ್ರಾ.ಪಂ ಸದಸ್ಯ ನಿಂಗನಾಯಕ, ರವಿ ಭಾಗವಹಿಸಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಖಂಡಿಸಿ ಇಂದು ಚಾ.ನಗರ ಬಂದ್

ಚಾಮರಾಜನಗರ: ಸುಪ್ರೀಂಕೋರ್ಟ್ ನ್ಯಾಯಾಧೀಶರ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ಶನಿವಾರ(ಅ.18) ಸ್ವಯಂಪ್ರೇರಿತ ಬಂದ್ ನಡೆಸಲು ನಿರ್ಧರಿಸಲಾಗಿದೆ

ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯ ತನಕ ಸ್ವಯಂಪ್ರೇರಿತ ಬಂದ್‌ಗೆ ಕರೆ ನೀಡಲಾಗಿದೆ. ಮಧ್ಯಾಹ್ನ 3 ಗಂಟೆಗೆ ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡು ಅಲ್ಲಿಂದ ಮೆರವಣಿಗೆ ಹೊರಟು ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಗುತ್ತದೆ.

ಬೆಂಬಲ : ಸ್ವಯಂಪ್ರೇರಿತ ಬಂದ್‌ಗೆ, ಪ್ರತಿಭಟನಾ ರ್‍ಯಾಲಿಗೆ ಎಲ್ಲಾ ಸಮಾಜದ ಸಂಘ, ಸಂಸ್ಥೆಗಳು, ಎಲ್ಲಾ ರಾಜಕೀಯ ಪಕ್ಷಗಳು, ವಿವಿಧ ಸಮಾಜದ ಸಂಘ, ಸಂಸ್ಥೆಗಳು, ವರ್ತಕರ ಸಂಘ, ಹೋಟಲ್ ಮತ್ತು ಚಿತ್ರಮಂದಿರ ಮಾಲೀಕರು, ಖಾಸಗಿ ಬಸ್ಸು, ಆಟೋ, ಲಾರಿ, ಗೂಡ್ಸ್, ಟೆಂಪೋ, ಕಾರುಗಳು, ಎತ್ತಿನಗಾಡಿಗಳು, ಹಣ್ಣು, ತರಕಾರಿ, ಹೂವು, ಮಾರಾಟಗಾರರು, ರಸ್ತೆ ಸಾರಿಗೆ ನಿಗಮ, ಕನ್ನಡಪರ ಸಂಘಟನೆಗಳು, ರೈತ ಪರ ಹೋರಾಟಗಾರರು, ದಲಿತ ಪರ ಮತ್ತು ಪ್ರಗತಿಪರ ಸಂಘಟನೆಗಳ ಹೋರಾಟಗಾರರು ಬೆಂಬಲ ನೀಡಿದ್ದಾರೆ.

ಮ.ಬೆಟ್ಟ ಜಾತ್ರೆ : ಅಗತ್ಯ ಕ್ರಮ ಕೈಗೊಳ್ಳಲು ಆದೇಶ



ಮಲೆ ಮಹದೇಶ್ವರ ಬೆಟ್ಟ ಜಾತ್ರೆಯ ಹಿನ್ನೆಲೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ರಘು ಅಧಿಕಾರಿಗಳ ತುರ್ತು ಸಭೆ ನಡೆಸಿದರು

ಹನೂರು, ಅ.17– ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ದೀಪಾವಳಿ ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಿ ಜಾತ್ರೆ ಯಶಸ್ವಿಗೆ ಸಹಕರಿಸಬೇಕು ಎಂದು ಪ್ರಾಧಿಕಾರದ ಕಾರ್ಯದರ್ಶಿ ಎಇ ರಘು ತಿಳಿಸಿದರು.

ತಾಲೂಕಿನ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವ ಸಂಬಂಧ ಕರೆಯಲಾಗಿದ್ದ ತುರ್ತು ಸಭೆಯಲ್ಲಿ ಮಾತನಾಡಿ, ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಸ್ಥಳ ಮಲೆ ಮಹದೇಶ್ವರ ಬೆಟ್ಟದಲ್ಲಿ 5 ದಿನಗಳ ಕಾಲ ದೀಪಾವಳಿ ಜಾತ್ರಾ ಮಹೋತ್ಸವ ಜರುಗಲಿದೆ. ಈ ಸಂದರ್ಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ತಮಿಳುನಾಡಿನಿಂದ ಲಕ್ಷಾಂತರ ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ನೌಕರರು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಯಾವುದೇ ತೊಂದರೆಯಾಗದಂತೆ ಜಾತ್ರೆ ಯಶಸ್ವಿಯಾಗಲು ಪ್ರತಿಯೊಬ್ಬರು ಹಗಲಿರುಳು ಶ್ರಮಿಸಬೇಕು, ಯಾವುದಾದರೂ ಸಮಸ್ಯೆಗಳಿದ್ದರೆ ನೇರವಾಗಿ ಗಮನಕ್ಕೆ ತಂದರೆ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಸಲಹೆ ನೀಡಿದರು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರು, ನೆರಳಿನ ವ್ಯವಸ್ಥೆ , ಮೊಬೈಲ್ ಶೌಚಾಲಯ ಹಾಗೂ ವಿಶೇಷ ದಾಸೋಹದಲ್ಲಿ ಯಾವುದೇ ತೊಂದರೆ ಆಗದಂತೆ ಪ್ರತಿಯೊಬ್ಬರು ಕ್ರಮ ವಹಿಸಬೇಕು, ಪ್ರತಿಯೊಬ್ಬ ಭಕ್ತಾದಿಗಳ ಸುರಕ್ಷತೆ ನಮ್ಮ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಾಧಿಕಾರದ ಸಿಬ್ಬಂದಿ ವರ್ಗದವರು ಮುನ್ನೆಚ್ಚರಿಕೆ ಕ್ರಮ ವಹಿಸಬೇಕು 250, 500 ರೂ ನೀಡಿ ಟಿಕೆಟ್ ಪಡೆದುಕೊಳ್ಳುವ ಮಧುಮೇಹಿಗಳಿಗೆ ವಿಶೇಷವಾಗಿ ಕುಡಿಯುವ ನೀರಿನ ವ್ಯವಸ್ಥೆ ಚಾಕ್ಲೇಟ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ದರ್ಶನದ ವೇಳೆ ಭಕ್ತಾದಿಗಳಿಗೆ ಯಾವುದಾದರೂ ತೊಂದರೆಯಾದರೆ ಎಕ್ಸಿಟ್ ಗೇಟ್‌ಗಳ ಮೂಲಕ ಕರೆದೊಯ್ಯಲು ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಭಕ್ತಾದಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಜಾತ್ರಾ ಸಂದರ್ಭದಲ್ಲಿ ವಿಶೇಷವಾಗಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇನ್ನಿತರರು ಆಗಮಿಸುವ ನಿರೀಕ್ಷೆ ಇದೆ. ಈ ವೇಳೆ ಸಂಬಂಧಪಟ್ಟ ಶಿಷ್ಟಾಚಾರ ಪಾಲನೆ ಮಾಡುವ ಅಧಿಕಾರಿಗಳು ಅತಿಥಿಗಣ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ ದರ್ಶನ ಮಾಡಿಸಿ ಕಳುಹಿಸಿ ಕೊಡಬೇಕು ಎಂದರು.

ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವ ಪ್ರಯುಕ್ತ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡ ಲಾಗಿದೆ. ಭಕ್ತಾದಿಗಳು ಯಾವುದೇ ತರಹದ ತೇವದ ಬಟ್ಟೆಗಳನ್ನು ವೈರ್ ಬಳಿ ಹಾಕಬಾರದು. ಒಂದೊಮ್ಮೆ ಅಗ್ನಿ ಅವಘಡಗಳು ಸಂಭವಿಸಿದರೆ ಇತರೆ ಭಕ್ತಾದಿಗಳಿಗೆ ತೊಂದರೆಯಾಗಲಿದೆ. ಎಲ್ಲಾ ಭಕ್ತಾದಿಗಳು ಪ್ರಾಧಿಕಾರಕ್ಕೆ ಕೈಜೋಡಿಸಬೇಕು ಎಂದರು.

ಉಪಕಾರ್ಯದರ್ಶಿ ಚಂದ್ರಶೇಖರ್, ಲೆಕ್ಕ ಅಧೀಕ್ಷಕ ಮಲ್ಲಯ್ಯ ದ್ವಿತೀಯ ದರ್ಜೆ ಸಹಾಯಕ ಸರಗೂರು ಮಹದೇವಸ್ವಾಮಿ, ನಾಗರಾಜು ಮಹೇಶ್ ಮಲ್ಲಿಕಾರ್ಜುನ ಶಾಸ್ತ್ರಿ ಜನಾರ್ಧನ್ ಪಾರುಪತ್ತೆದಾರ ಮಹದೇವಸ್ವಾಮಿ, ರಮೇಶ್ ಇದ್ದರು

ಮಹದೇವಪ್ಪ ವಿರುದ್ಧ ಭಾಸ್ಕರ್ ಪ್ರಸಾದ್ ಆರೋಪ ಸಲ್ಲದು

ಕೊಳ್ಳೇಗಾಲ: ಸಚಿವ ಎಚ್.ಸಿ.ಮಹದೇವಪ್ಪ ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿರುವ ಒಳ ಮೀಸಲಾತಿ ಹೋರಾಟಗಾರ ಭಾಸ್ಕರ್ ಪ್ರಸಾದ್ ಮೊದಲು ಇಂತಹ ಆರೋಪಗಳನ್ನು ಮಾಡುವುದು ನಿಲ್ಲಿಸಿ ವಾಸ್ತವ ಅರಿಯಬೇಕು ಎಂದು ನಗರಸಭೆ ಅಧ್ಯಕ್ಷೆ ರೇಖಾ ಹೇಳಿದರು.

ಸಚಿವ ಮಹದೇವಪ್ಪ ಅವರು ಒಬ್ಬ ಶ್ರೇಷ್ಠ ನಾಯಕರಾಗಿದ್ದು ಬಹಳ ಜವಾಬ್ದಾರಿಯುತ ಸ್ಥಾನವನ್ನು ಗಳಿಸಿದ್ದಾರೆ. ಸಮುದಾಯಕ್ಕಾಗಿ ಹಗಲಿರುಳು ಶ್ರಮಿಸಿದ ಮಹಾನ್ ವ್ಯಕ್ತಿ. ಹಾಗಾಗಿ ಇವರ ಮೇಲೆ ಖಂಡನೆ ಮಾಡುವುದು ಹಾಗೂ ಕೀಳು ಮಟ್ಟಕ್ಕೆ ಇಳಿಯುವುದು ಸರಿಯಲ್ಲ ನಿಮ್ಮ ಹೋರಾಟವಿದ್ದರೆ ಸರ್ಕಾರಕ್ಕೆ ಮನವಿ ಮಾಡಬೇಕು. ಅದನ್ನು ಬಿಟ್ಟು ಎಲ್ಲಾ ಗ್ರಾಮಗಳಿಗೂ ಹಾಗೂ ಎಲ್ಲಾ ತಾಲೂಕುಗಳಿಗೂ ಹೋಗಿ ಸಚಿವರ ವಿರುದ್ಧ ಮಾತನಾಡುವುದು, ಇಲ್ಲಸಲ್ಲದ ಹೇಳಿಕೆ ನೀಡುವುದು ಸರಿಯಲ್ಲ, ಇನ್ನಾದರೂ ಸರಿಯಾಗಿ ನಡೆದುಕೊಳ್ಳಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು

ಒಳ ಮೀಸಲಾತಿ ಸಮೀಕ್ಷೆಯನ್ನು ಇಡೀ ರಾಜ್ಯದ ಜನರು ಹಾಗೂ ಸರ್ಕಾರವೇ ಮೆಚ್ಚಿದೆ. ಅದನ್ನು ಬಿಟ್ಟು ಇವರು ವಿರೋಧ ಮಾಡುವುದು ಸರಿಯಲ್ಲ. ಬಲಗೈ ಸಮುದಾಯದವರು ಹಾಗೂ ಎಡಗೈ ಸಮುದಾಯದವರು ಎಲ್ಲಾ ಗ್ರಾಮಗಳಲ್ಲಿಯೂ ಅಣ್ಣ ತಮ್ಮಂದಿರಂತೆ ಅಕ್ಕ ತಂಗಿಯರಂತೆ ಇದ್ದಾರೆ ಆದರೆ ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಭಾಸ್ಕರ್ ಪ್ರಸಾದ್ ಅವರು ಅಪಪ್ರಚಾರಗಳನ್ನು ಮಾಡುತ್ತಿದ್ದಾರೆ. ಇದು ಸರಿಯಲ್ಲ ಇನ್ನಾದರೂ ಒಳ ಮೀಸಲಾತಿ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕು. ಭಾಸ್ಕರ್ ಪ್ರಸಾದ್ ಅವರು ಇದೇ ರೀತಿ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸಭೆಗಳಲ್ಲಿ ಸಚಿವರ ವಿರುದ್ಧ ಹಾಗೂ ಒಳ ಮೀಸಲಾತಿ ವಿರುದ್ಧ ಮಾತನಾಡುವುದನ್ನು ಬಿಟ್ಟು ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗಬೇಕು ಎಂದರು.


ಪತ್ರಿಕಾಗೋಷ್ಠಿಯಲ್ಲಿ ನಗರಸಭೆ ಸದಸ್ಯ ಶಾಂತರಾಜು, ರಾಘವೇಂದ್ರ, ಪ್ರಕಾಶ್ ಇದ್ದರು.

ಅ.20ರಂದು ಮ.ಬೆಟ್ಟದಲ್ಲಿ ಪೌರಕಾರ್ಮಿಕರ ಪ್ರತಿಭಟನೆ

ಚಾಮರಾಜನಗರ, ಅ.17–ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಹೊರಗುತ್ತಿಗೆಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಆಗ್ರಹಿಸಿ ಅ.20 ರಂದು ಮಹದೇಶ್ವರಬೆಟ್ಟದಲ್ಲಿ ಪೌರಕಾರ್ಮಿಕ ರಿಂದ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಡಿ.ಆರ್.ರಾಜು ಹೇಳಿದರು

15 ವರ್ಷಗಳಿಂದಲೂ ಪ್ರಾಧಿಕಾರದಲ್ಲಿ 87ಕ್ಕೂ ಹೆಚ್ಚು ಪೌರಕಾರ್ಮಿಕರು ಹೊರಗುತ್ತಿಗೆಯಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದಾರೆ. ಆದರೆ, ಇವರನ್ನು ಇಲ್ಲಿಯ ತನಕ ಖಾಯಂಗೊಳಿಸಿಲ್ಲ. ಆದ್ದರಿಂದ ಅ.20 ರಂದು ಮಹದೇಶ್ವರಬೆಟ್ಟದ ರಾಜಗೋಪುರದ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರತ್ನಮ್ಮ ನಿಧನ



ಚಾಮರಾಜನಗರ: ನಗರದ ರಾಮಸಮುದ್ರದ ನಿವಾಸಿ ರತ್ನಮ್ಮ(76) ಶುಕ್ರವಾರ ಬೆಳಗಿನ ಜಾವ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಪತ್ರಿಕಾ ವಿತರಕ ಬಿ.ಕೆ.ಮಂಜುನಾಥ ಆರಾಧ್ಯ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ಮೃತರ ಅಂತ್ಯಕ್ರಿಯೆ ರಾಮಸಮುದ್ರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು.

ಶಕ್ತಿ ಯೋಜನೆ: ಫೇಕ್ ಸರ್ಟಿಫಿಕೇಟ್

ಸರ್ಕಾರಕ್ಕೆ ಮುಜುಗರ

ಬೆಂಗಳೂರು, ಅ.17– ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವದ 5 ಗ್ಯಾರಂಟಿಗಳಲ್ಲಿ ಬಸ್‌ಗಳಲ್ಲಿ ಮಹಿಳೆಯರಿಗೆ ಫ್ರೀಯಾಗಿ ಓಡಾಡಲು ಅವಕಾಶ ನೀಡುವ ಶಕ್ತಿ ಯೋಜನೆ ಕೂಡ ಒಂದು. ಶಕ್ತಿ ಯೋಜನೆ ಹಲವು ರೆಕಾರ್ಡ್ ಮಾಡಿದೆಯಂತೆ. ಇತ್ತೀಚಿ ಗಷ್ಟೇ ಶಕ್ತಿ ಯೋಜನೆ ವಿಶ್ವ ಮಟ್ಟದಲ್ಲಿ ಪ್ರಶಂಸೆ ಗಳಿಸಿದೆ. 'ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ನಲ್ಲಿ ಶಕ್ತಿ ಯೋಜನೆ ಸ್ಥಾನ ಪಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಟ್ವೀಟ್ ಮಾಡಿ, ಸರ್ಟಿಫಿಕೇಟ್ ಹಂಚಿ ಕೊಂಡಿದ್ದರು. ಆದರೆ ಈ ಸರ್ಟಿಫಿಕೇಟ್ ನಕಲಿ ಎನ್ನಲಾಗಿದೆ. ಇದರಿಂದಾಗಿ ಸರ್ಕಾರ ನಗೆಪಾಟಲಿಗೀಡಾ ಗಿದ್ದು ಇದೀಗ ಸಿಎಂ ಟ್ವೀಟ್ ಡಿಲೀಟ್ ಆಗಿದ್ದು, ಸಿಎಂ ವಿರುದ್ಧ ಬಿಜೆಪಿ, ಜೆಡಿಎಸ್ ವ್ಯಂಗ್ಯವಾಡಿದೆ



ಮೂರು ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ವಾಸಿಸುವ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ಸುಗಮಗೊಳಿಸುವ ತಮ್ಮ ಸರ್ಕಾರದ 'ಶಕ್ತಿ' ಯೋಜನೆಯನ್ನು ಮಹಿಳೆಯರು ಅತಿ ಹೆಚ್ಚು ಉಚಿತ ಬಸ್ ಪ್ರಯಾಣವನ್ನು ಪಡೆದಿದ್ದಕ್ಕಾಗಿ 'ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ಪ್ರಮಾಣೀಕರಿಸಿದೆ ಎಂದು ಹೇಳಿದ್ದರು. ಸರ್ಟಿಫಿಕೇಟ್ ಅನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಶೇರ್ ಮಾಡಿದ್ದರು.

ಆದರೆ, ಇದು ಫೇಕ್ ಸರ್ಟಿಫಿಕೇಟ್ ಎಂದು ಹೇಳಲಾಗ್ತಿದ್ದು, ಬಿಜೆಪಿ, ಜೆಡಿಎಸ್ ನಾಯಕರು ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಬಿಜೆಪಿ ಎಂಎಲ್‌ಸಿ ಸಿಟಿ ರವಿ ಈ ಬಗ್ಗೆ ಟ್ವೀಟ್ ಮಾಡಿ, ಪ್ರಮಾಣಪತ್ರ ನಕಲಿ ಮಾತ್ರವಲ್ಲ. ಅದರಲ್ಲಿ ದರಪಟ್ಟಿಯೂ ಇದೆ. ಜನರನ್ನು ಮರುಳು ಮಾಡಲು ನೀವು ಎಷ್ಟು ಕೀಳುಮಟ್ಟಕ್ಕೆ ಹೋಗಿ ಇಷ್ಟೆಲ್ಲಾ ಅಗ್ಗದ ತಂತ್ರಗಳನ್ನು ತೋರಿಸಬಹುದು ಎಂದು ಟೀಕಿಸಿದ್ದಾರೆ.

ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು: ಕಾಂಗ್ರೆಸ್ ಸರ್ಕಾರದ ಪೇಮೆಂಟ್ ಸರ್ಟಿಫಿಕೇಟ್ ಬಂಡವಾಳ ಬಯಲಾದ ಬಳಿಕ ಟ್ವೀಟ್ ಡಿಲೀಟ್. ಸಿದ್ದರಾಮಯ್ಯ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಅಂತ ಜೆಡಿಎಸ್ ಟ್ವೀಟ್ ಮಾಡಿದೆ. ಈ ಪ್ರಮಾಣ ಪತ್ರವು ಹಣಕ್ಕೆ ಸಿಗುತ್ತದೆ ಎಂದು ಈಗ ತಿಳಿದು ಬಂದಿದೆ. ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಲಿಮಿಟೆಡ್ ಅನ್ನು ಜುಲೈ 15, 2025 ರಂದು ವಿಸರ್ಜಿಸಲಾಯಿತು ಎಂದು ಜೆಡಿಎಸ್ ಹೇಳಿಕೊಂಡಿದೆ

ಇದು ಕಾಂಗ್ರೆಸ್‌ಗೆ ದೊಡ್ಡ ಮುಜುಗರ: ಕಾಂಗ್ರೆಸ್‌ಗೆ ದೊಡ್ಡ ಮುಜುಗರ ಎಂದು ಬಿಜೆಪಿ ಐಟಿ ವಿಭಾಗದ ಉಸ್ತುವಾರಿ ಅಮಿತ್ ಮಾಳವಿಯಾ ಹೇಳಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ನಿನ್ನೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡು ರಾಜ್ಯ ಯೋಜನೆಗಳನ್ನು ಲಂಡನ್ ಬುಕ್ ಆಫ್ ರೆಕಾರ್ಡ್ಸ್ ಗುರುತಿಸಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಆದರೆ ಅದು ನಕಲಿ. ಯಾರೋ ಅಕ್ಷರಶಃ ಕಾಂಗ್ರೆಸ್ ಅನ್ನು ಮೋಸಗೊಳಿಸಿದ್ದಾರೆ. ಪ್ರಮಾಣಪತ್ರ ಎಂದು ಕರೆಯಲ್ಪಡುವ ಈ ಪತ್ರವು ಕಾಗುಣಿತ ಮತ್ತು ವ್ಯಾಕರಣ ದೋಷಗಳಿಂದ ತುಂಬಿದೆ.

ಈ ಕಂಪನಿಯನ್ನು ಜುಲೈ 2025ರಲ್ಲಿ ವಿಸರ್ಜಿಸಲಾಯಿತು ಮತ್ತು ಪುಟವನ್ನು ಈಗ ದೆಹಲಿಯ ಪಹರ್‌ಗಂಜ್‌ನ ಚುನಾ ಮಂಡಿಯಿಂದ ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಹೆಸರಿನಲ್ಲಿ ನಡೆಸಲಾಗುತ್ತಿದೆ ಎಂದು ತೋರುತ್ತದೆ ಹಗರಣದೊಳಗೆ ಕಾಂಗ್ರೆಸ್ ಮಾತ್ರ ಈ ಮಟ್ಟದ ಹಗರಣಕ್ಕೆ ಬಲಿಯಾಗಬಹುದು ಅಂತ ಅಮಿತ್ ಮಾಳವೀಯ ವ್ಯಂಗ್ಯವಾಡಿದ್ದಾರೆ

ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಗೆ ಇಂದು ತೆರೆ

ಮೈಸೂರು, ಅ.17(ಎಸ್‌ಪಿಎನ್)–ರಾಜ್ಯ ಸರಕಾರವು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಲು ಅ.18ರ ವರೆಗೆ ಅವಕಾಶ ನೀಡಲಾಗಿದ್ದು, ಶನಿವಾರ(ಅ.18) ಕೊನೆಯ ದಿನವಾಗಿದೆ. ಆದರೆ ರಾಜ್ಯದಲ್ಲಿ ಇನ್ನು ಶೇ.5ರಷ್ಟು ಮತ್ತು ಬೆಂಗಳೂರಿನಲ್ಲಿ ಶೇ.62ರಷ್ಟು ಸಮೀಕ್ಷೆ ಪೂರ್ಣವಾಗಬೇಕಿದೆ.

ರಾಜ್ಯದಲ್ಲಿ ಸಮೀಕ್ಷೆಯ ಮನೆಗಳ ಗುರಿ ಒಟ್ಟು 1,48,14,286 ಆಗಿದ್ದು, ಈವರೆಗೆ ಒಟ್ಟು 1,41,04,331 ಮನೆಗಳ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ. ಇನ್ನು ಏಳು ಲಕ್ಷಕ್ಕೂ ಅಧಿಕ ಕುಟುಂಬಗಳ ಸಮೀಕ್ಷೆ ನಡೆಯಬೇಕಾಗಿದೆ. ಬೆಂಗಳೂರು ಹೊರತುಪಡಿಸಿ ರಾಜ್ಯದಲ್ಲಿ ಶೇ.95.20ರಷ್ಟು ಸಮೀಕ್ಷೆ ಮುಗಿದಿದ್ದು, ಒಟ್ಟು 5,22,64,067 ಜನರ ಸಮೀಕ್ಷೆ ಪೂರ್ಣಗೊಂಡಿದೆ. ಇನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ 17,20,560 ಮನೆಗಳ ಸಮೀಕ್ಷೆ ಮುಗಿದಿದ್ದು, ಶೇ.38.34 ಪ್ರತಿ ಕಂಡಿದೆ. ಬೆಂಗಳೂರಿನಲ್ಲಿ ಒಟ್ಟು 53,41,343 ಜನರ ಸಮೀಕ್ಷೆಯಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗವು ಮಾಹಿತಿ ನೀಡಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕೊಡಗು ಜಿಲ್ಲೆಯ ಹೋಟೆಲ್‌ವೊಂದಕ್ಕೆ ಸಪ್ಲೈಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
9986669892, 6362610799

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. (ಟೆಲಿಕಾಲರ್ ಬೇಕಾಗಿದ್ದಾರೆ)
ಒಂದು ಗ್ರಾಂ. ಚಿನ್ನಕ್ಕೆ 11,500 (24 CT.)
Mob: 9108146123

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

Teacher Vacancy
Our Growing Academy located at Siddhartha Nagar, Mysuru, requires a part-time teacher to teach classes V to VII (ALL CORE SUBJECTS) Passionate, energetic & committed educators preferred.
WHATSAPP YOUR RESUME TO:
Mob: 8105025999

SITE FOR SALE
40x50 'A' Khatha, Kergalli (4500/- per sq.ft.)
30x40 MUDA (Attached to Udburu Village) (2500/- per sq.ft.). Loan facility available at Bank. Contact:
Mob: 8553050040

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ವಾಣಿಜ್ಯ ಸ್ಥಳ ಬಾಡಿಗೆಗಿದೆ
ವಾಸ್ತುಶಿಲ್ಪಿ ವಿನ್ಯಾಸಗೊಳಿಸಿದ ಕಟ್ಟಡ ವಿಸ್ತೀರ್ಣ: 1600 ಚದರ ಅಡಿ, 80 ಅಡಿ ಮುಖ್ಯ ರಸ್ತೆ, ಐಶ್ವರ್ಯ ಆಸ್ಪತ್ರೆ ಹತ್ತಿರ ವಿಜಯನಗರ 3ನೇ ಹಂತ
9141789977

RAI ESTATES RERA APPROVED MUDA APPROVED E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570001



SUNZONE SOLAR SYSTEM
VM Double Road, Kuvempunagar, Mysuru
9845175443

ಸೈಟು ಬೇಕಾಗಿದೆ
ತಕ್ಷಣದ ಖರೀದಿಗಾಗಿ ಸುಮಾರು 20x30 / 20x40 ಅಳತೆಯ ಸೈಟುಗಳು 1) ಜೆ.ಎಸ್‌ಎಸ್ 2ನೇ ಹಂತ, 2) IPS ನಗರ/ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ
9739120195, 7204710066

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SBIT ಟ್ರಾವೆಲ್ಸ್
05 ನವೆಂಬರ್
4 ದಿನಗಳ ಪ್ರವಾಸ
9343524127
(ಸರಸ್ವತಿಪುರಂ, ಮೈಸೂರು)

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

Atharva's Security Serviices
ಮೈಸೂರಿನಾದ್ಯಂತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಗಳು ಬೇಕಾಗಿದ್ದಾರೆ. ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸಿ.
ದೂರವಾಣಿ: +91 95131 12155
+91 95139 26655
ಎಂ ಪ್ರೋ ಪ್ಯಾಲೇಸ್ ಹೋಟೆಲ್ ಹಿಂಭಾಗ, ಕೆ ಎಸ್ ಎಫ್ ಸಿ ಲೇಔಟ್, ಬನ್ನೂರ್ ರಿಂಗ್ ರೋಡ್, ಮೈಸೂರು–570029

ತುರ್ತಾಗಿ ಕೆಲಸಕ್ಕೆ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ಡಿಟಿಪಿ ಟೈಪಿಂಗ್ ಅನುಭವವುಳ್ಳ ಮಹಿಳೆಯರು ಕಂಪ್ಯೂಟರ್ ಸಂಪೂರ್ಣ ಜ್ಞಾನವುಳ್ಳವರು ನೋಟರಿ ಕಛೇರಿ ಕೆಲಸಕ್ಕೆ ಬೇಕಾಗಿರುತ್ತಾರೆ. ಮೊ.ಸಂಖ್ಯೆ:
9901369901, 0821-3501513

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

HOUSE FOR RENT
2 BHK Duplex independant House at Teacher's Layout Old Kasare, Mysuru Rent 15 k- Negotiable For Vegetarians only
Contact No
8275098727

COMMERCIAL SPACE FOR RENT
1500 Sq ft, G/F. Prime Location Siddarthanagar, Sangeetha Corner Junction, Suitable For Banks, Office, Showroom, Hotel etc.
9886524225, 8095740235

ಬೇಕಾಗಿದ್ದಾರೆ
01) ಅನುಭವವುಳ್ಳ ಇಬ್ಬರು ಅರ್ಚಕರುಗಳು ಬೇಕಾಗಿದ್ದಾರೆ. 02) ದೇವಸ್ಥಾನದ ಕಛೇರಿ ಕೆಲಸಕ್ಕೆ ಅನುಭವವುಳ್ಳ ಒಬ್ಬರು ಗುಮಾಸ್ತರು ಬೇಕಾಗಿರುತ್ತಾರೆ. 03) ದೇವಸ್ಥಾನದ ಆವರಣದಲ್ಲಿ ಶುದ್ದೀಕರಿಸಲು ಇಬ್ಬರು ಹೆಂಗಸರು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ ವಿಳಾಸ : ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು–8.
9448053321

ಕಳೆದಿದೆ
ಶಿವಪ್ರಸಾದ್.ಎನ್, ನಂ.315, 3ನೇ ಮಹಡಿ, 1ನೇ ಹಂತ, ಬೃಂದಾವನ ಬಡಾವಣೆ, ಮೈಸೂರು ಇಲ್ಲಿ ವಾಸವಿದ್ದು, ಇವರ ಬಾಬ್ತು ನಂ.315, 3ನೇ ಅಂತಸ್ತು, 1ನೇ ಹಂತ, ಬೃಂದಾವನ ಬಡಾವಣೆ ಮೈಸೂರು ಈ ಮನೆಯ ಮಂಜೂರಾತಿ ಮೂಲ ಪತ್ರ ಮತ್ತು ಲೀಸ್ ಹಾಗೂ ಶುದ್ಧ ಕ್ರಯಪತ್ರದ ಮೂಲ ಪತ್ರವು ದಿ: 11/9/25ರಂದು ಕಳೆದಿದ್ದು ಸಿಕ್ಕವರು ಸಂಪರ್ಕಿಸಿ
9448045337

ಕಳೆದಿದೆ
ಎ.ಎಲ್.ಜಯರಾಮು ವಿಜಯನಗರ, ಮೈಸೂರು ಬೆಳವಾಡಿ ಅಮೂಲ್ಯನಗರ, ನಿವೇಶನ ಕ್ರಯಪತ್ರ ದಾಸ್ತಾವೇಜು ಸಂಖ್ಯೆ ಎಂ.ವೈ.ಡಬ್ಲ್ಯು(MYW)-1-10079- 2019-20, CD No MSWD 364 ಕಳೆದುಹೋಗಿರುತ್ತದೆ. ಸಿಕ್ಕಿದವರು ದಯವಿಟ್ಟು ಸಂಪರ್ಕಿಸಿ, ಬಹುಮಾನ ನೀಡಲಾಗುವುದು.
9844373184

ನಿವೇಶನ ಮಾರಾಟಕ್ಕಿದೆ
50x38 S/F, ಪಾರ್ಕ್ ಹತ್ತಿರ, TSK ಸೆರೆನಿಟಿ, ಬೆಳವಾಡಿ
8971192531, 9242901974

SITES FOR SALE
30x40, 30x50 MUDA Approved Bank Loan Available Near Srirampura Ring Road, Attach to RT Nagar
9035444602

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 20 x 30 3 BHK ಡ್ಯೂಪ್ಲೆಕ್ಸ್ 80 ಲಕ್ಷ (Nego) Direct Owner
8296777331

ಮನೆ ಮಾರಾಟಕ್ಕಿದೆ
#12, ವಾಸವಿ ಶಾಂತಿಧಾಮ ಆಶ್ರಮ ಹಿಂಭಾಗ, ಆಲನಹಳ್ಳಿ, ಮೈಸೂರು
9845631863
9741662322
Brokers Excuse
20x40

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3 BHK ಡ್ಯೂಪ್ಲೆಕ್ಸ್ ಫುಲ್ ಫರ್ನಿಶ್ಡ್ ಓನ್ ಬೋರ್‌ವೇಲ್ MUDA Approved ಮನೆ ಮಾರಾಟಕ್ಕಿದೆ. ಬೆಲೆ 69 ಲಕ್ಷ, ನಂಜುಂಡಸ್ವಾಮಿ ಹೆಚ್.ಎಸ್, ಮಾಜಿ ಸೈನಿಕರು
9483862050, 8660625801

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು, ಸ್ಥಳ : ಮೊಗರಹಳ್ಳಿ(ಮಂಟಿ), ಪಾಲಹಳ್ಳಿ, ಪಡುವಾರಹಳ್ಳಿ, 2) ಸೆಕ್ಯೂರಿಟಿ ಫೀಲ್ಡ್ ಆಫೀಸರ್, (ದ್ವಿಚಕ್ರ ಹಾಗೂ ಫೀಲ್ಡ್ ಅನುಭವವಿರಬೇಕು)
9686566261, 7259526261

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಮಹಿಳೆಯರು ಮತ್ತು ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್‌ಗಳು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಜನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
9739816440

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿಯಲ್ಲಿ 45 ವರ್ಷ ವಯಸ್ಸು ಒಳಗಿನ 8 ಗಂಟೆ ಶಿಫ್ಟ್‌ನಲ್ಲಿ(Shift) ಕೆಲಸ ಮಾಡಲು ಪುರುಷ ಸೆಕ್ಯೂರಿಟಿಗಾರ್ಡ್ ಬೇಕಾಗಿದ್ದಾರೆ. ವೇತನ, ತಿಂಗಳಿಗೆ 18200/– ರೂ ಮತ್ತು ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ 12 ಗಂಟೆ ಕೆಲಸ (7 To 7) ರೆಗ್ಯೂಲರ್ Night ಪುರುಷ ಗಾರ್ಡ್ ಬೇಕಾಗಿದ್ದಾರೆ. ವೇತನ 12000/–ರೂ. ಸಂಪರ್ಕಿಸಿ
9731976148

WANTED RECEPTIONIST
JP Nagar Service Apartment ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
Education-Degree, Ladies Only Language: Kannada, English, Hindi, Fluency, Computer knowledge must
Mob: 9686225522

ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್ ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. (18k -38k), SSLC, PUC, DEGREE. Contact:
63667 18368

S.K. CONSTRUCTION
ನಿಮ್ಮ ಕನಸಿನ ಮನೆ ಬೇಕೆ ಅಥವಾ ನಿವೇಶನ 30x40- Site R.T. ನಗರದಲ್ಲಿ ಮುಡಾ Approved - Just- 4999/- Pr Sqft with Bank Loan ಮಾಡಿಕೊಡುತ್ತೇವೆ.
Ph : 8904202804

OLD AGE HOME
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.
9607172737

ಸೈಟು ಮಾರಾಟಕ್ಕಿದೆ
30x32 N/F, 46 ಲಕ್ಷ ವಿಜಯನಗರ 4ನೇ ಹಂತ ಪಕ್ಕ, 30x40 W/F, 86 ಲಕ್ಷ ರಾಜರಾಜೇಶ್ವರಿನಗರ, ದಟ್ಟಗಳ್ಳಿ ಪಕ್ಕ 30x40 E/F, 34 ಲಕ್ಷ ಸುವರ್ಣ ನಗರ.
9845765573

SITE FOR SALE
30x40 Site at Siddartha Layout Ramakrishna Nagar, Dattagalli, 40x60 at Rajeev Nagar, Dattagalli, Saraswathipuram, Kuvempunagar
7353430309

HOUSE FOR LEASE
2 BHK House for LEASE in PRAGATHI DREAMS Layout. near KBL SILICON CITY, MMG grand City
9742561172
9901883042

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಗಂಡಸರು/ಹೆಂಗಸರು ಕೌಂಟರ್, ದೋಸೆ, ಸಸ್ಯಹಾರಿ ಭಟ್ರು, ಪಾರ್ಸೆಲ್ ಕೌಂಟರ್
9986998606 / 9606238790

ಸೈಟು ಮಾರಾಟಕ್ಕಿದೆ
30X40 ಪೂರ್ವಕ್ಕೆ ಇದೆ ಸುವರ್ಣ ನಗರ 38 ಲಕ್ಷ, ನೆಗೋ ಮತ್ತು 20X30 ಉತ್ತರಕ್ಕೆ ಇದೆ 22 ಲಕ್ಷ ಬೋಗಾದಿ ರೋಡ್, ಸಂಪರ್ಕಿಸಿ
9341624462

ನಮ್ಮ ನಾಟಿ ನಾನ್‌ವೆಜ್ ಸ್ಟೈಲ್ ಫುಡ್ ಟ್ರಕ್‌ಗೆ ಕೆಲಸದ ಖಾಲಿ ಹುದ್ದೆಗಳು ಇವೆ. ಈ ಫುಡ್ ಟ್ರಕ್ ಮೈಸೂರಿನಲ್ಲಿ ಪ್ರಾರಂಭವಾಗುತ್ತಿದೆ. ಶಿಫ್ಟ್ ವೈಸ್ ಕೆಲಸ ಇರುತ್ತದೆ. ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:30ರವರೆಗೆ ಮತ್ತು ಸಂಜೆ 6:00 ರಿಂದ ರಾತ್ರಿ 10:30ರವರೆಗೆ. ಸ್ತ್ರೀ ಹಾಗೂ ಪುರುಷರು ಇಬ್ಬರೂ ಅರ್ಜಿ ಹಾಕಬಹುದು. ಉತ್ತಮ ವೇತನ ನೀಡಲಾಗುತ್ತದೆ. ಆಸಕ್ತ ವ್ಯಕ್ತಿಗಳು ದಯವಿಟ್ಟು ಸಂಪರ್ಕಿಸಿ
7019600596

ಬೇಕಾಗಿದ್ದಾರೆ
ಹುದ್ದೆ 1) ಡ್ರೈವರ್ ಪುರುಷ (ಲಘು ವಾಹನ) 2) ಅಕೌಂಟ್ಸ್, ಪುರುಷ/ ಮಹಿಳೆ (ಅನುಭವಿ ಅವಶ್ಯ) ಸ್ಥಳ : ಮೈಸೂರು, ಅನುಭವದ ಮೇಲೆ ಆಕರ್ಷಕ ಸಂಬಳ
9845700612, 7829668666

ಸೈಟು ಬೇಕಾಗಿದೆ
30x40 or 30x50 ಕನಕನಗರ, ಪಂಚಾಚಾರ್ಯನಗರ, ಬೈರವೇಶ್ವರ ನಗರದಲ್ಲಿ ಪೂರ್ವ ಅಥವಾ ಉತ್ತರ ದಿಕ್ಕು
Direct Owner Contact
7349342492

SVS ROYAL EMBER RESTOURANT
ಅಡುಗೆಗಾರ(ನಾಟಿ ಸ್ಟೈಲ್) ಅಡುಗೆ ಸಹಾಯಕರು ಸಹಾಯಕರು ಹಾಗೂ ಸಹಾಯಕ ಸಿಬ್ಬಂದಿ ಕೌಂಟರ್ ಸಿಬ್ಬಂದಿ (ಪುರುಷರು ಹಾಗೂ ಮಹಿಳೆ ಇಬ್ಬರು)
9986630173

ಸಂಪು ಮತ್ತು ಟ್ಯಾಂಕ್ ಹಾಗೂ ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
9449990513

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್‌ನಗರ ಹಾಗೂ ಸುತ್ತ ಮುತ್ತ ಇರುವ ಲೇಔಟ್‌ಗಳಲ್ಲಿ
9844436672

SITE FOR SALE
Silver Spring Layout 30x40, Bogadi Road
8050821108

ಸೋಲಾರ್ ಸರ್ವೀಸ್ ಅನ್ನು ಕಂಪನಿ ಕಡೆಯಿಂದ 700 ರೂ.ಗೆ 17–10–2025 ರಿಂದ 30–10–2025 ರವರೆಗೆ ಮಾಡಿಕೊಡಲಾಗುತ್ತದೆ.
Mob: 8197383645

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

WANTED
Sleepwave Mattress Pvt. Ltd.,
Accountant (Experience in Tally)
Sales Executive (Experience/Freshers)
Salary Range: 12000 to 20000
Location: Mysore
Ph : 9036824741

INTERIOR
ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ: 12 ಸಾವಿರದಿಂದ 18 ಸಾವಿರ
ಸಮಯ: ಬೆ.10 ರಿಂದ 8ರವರೆಗೆ
ಅಕ್ಬರ್ ರಸ್ತೆ, ಮೈಸೂರು
8050744784

ಗುರೂಜಿ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಪ್ರತಿ ದಿನ ವಧುವರರ ನೇರ ಸಂದರ್ಶನ ಇರುತ್ತದೆ
9448229184 / 7899625268

30x50, N/F 11 'A' ಖಾತೆ ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ 23 ಲಕ್ಷಗಳು (Opp Park) ಅಮೃತ್ ಕೊಕೋ ಶೆಲ್ಟರ್ GSS ಲೇಔಟ್, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

REQUIRED IMMEDIATELY
We are Looking for Ofice Work & Telecallers (Female)
Good Communication skills, Computer Skills
Mob: 9035123466

ಕೂಡಲೇ ಬೇಕಾಗಿದ್ದಾರೆ
ನಮ್ಮ ಸಂಸ್ಥೆಗೆ ಕೆಲಸ ಮಾಡಲು ಸಮಾಜ ಸೇವಾ ಮನೋಭಾವದ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
6361740552 / 9449408551

SITES FOR SALE
1. Suvarna Nagar layout 9 x 15 Mtrs, South Facing 39 Lakhs
2. Jnanbharathi Layout Near Airport, 8.7 Mtrs x 12 Mtrs, East Facing Corner Site, 40 ft Road, 42 Lakhs

Contact : 93421 23373

ಕೆಲಸ ಖಾಲಿ ಇದೆ.
ಮೈಸೂರಿನಲ್ಲಿರುವ ಕಂಪನಿ & ಆಫೀಸ್ ಗಳಿಗೆ ವರ್ಕಿಂಗ್ ನೇರ ಆಯ್ಕೆ 7ನೇ. 10 ನೇ, ಪಿಯುಸಿ ಡಿಗ್ರಿ ಪಾಸ್ / ಫೇಲ್ ಆದಂತಹ ಯುವಕ ಯುವತಿಯರಿಗೆ ವಯಸ್ಕರ ನೇರ ಆಯ್ಕೆ ಮೊದಲು ಬಂದವರಿಗೆ ನೇರ ಆಯ್ಕೆ ಸಂಬಳ 20000 ದಿಂದ 25000
ಸಂಪರ್ಕಿಸಿ: 8095133188

ಮೈಸೂರು ಮತ್ತು ಬೆಂಗಳೂರಿನಲ್ಲಿ ಕಂಪನಿ/ ಆಫೀಸ್ ಗಳಿಗೆ 7, 10, ಪಿಯುಸಿ, ಡಿಗ್ರಿ ಪಾಸ್/ಫೇಲ್ ಆದಂತಹ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ: 18000–25000+ ಓಟಿ
ಸಂಪರ್ಕಿಸಿ ಸ್ನೇಹ: 9916744622

SITE FOR SALE
MUDA Approved Site 40x65 facing 80 Feet Road for sale at Manasi Nagar, 400 Meters from Ring Road.
Brokers Excuse
Ph: 7406085047

DOCUMENTS LOST
I Shashank N Lost my Original House Documents bearing Hakku Patra, Swadheena Patra, Allotment Copy No.DCB.33/66-67 and LP.151/A-66-67 given by City Improvement Trust Board (CITB/MUDA) and Registered Documents of Door No.F80, 4th Cross, Khille Mohalla, Sewage Farm Road, Vidyaranyapuram, Mysuru-570008 Near Sandesh the Prince Hotel, Nazarbad, Mysuru on 16-10-2025 at 12-30 PM. Finders please contact.
9738015062

ಸೈಟು ಮಾರಾಟಕ್ಕಿದೆ
30x50, N/F, KBL Siliocon City, Phase 2, BEML ಹತ್ತಿರ, KRS Road. Contact:
9243536373

ಮನೆ ಮಾರಾಟಕ್ಕೆ ಇದೆ
ವಸಂತನಗರ, ಮೈಸೂರು North facing G+2 ಡುಪ್ಲೆಕ್ಸ್ ಮನೆ 20x30 । 1800 ಚ.ಅಡಿ ನಿರ್ಮಾಣ, ಸಂಪರ್ಕಿಸಿ:
9986621579 / 7624987329

ತಕ್ಷಣ ಬೇಕಾಗಿದ್ದಾರೆ
ಲಾರಿ ಡ್ರೈವರ್ಸ್
ಕ್ಯಾಂಟೀನ್, ಪಿ ಎಫ್ ಮತ್ತು ಇ ಎಸ್ ಐ ಸೌಲಭ್ಯವಿದೆ. ಸಂಪರ್ಕಿಸಿ:
9341623350

FOR SALE
1. 20x30 Properties @ Kuvempunagar, RK Nagar
2. 40x50 Corner Property Near Iskcon, Jayanagar
3. 20x30 Nw Duplex@ Utthanahalli & Sites @ Dattagalli
4. 40x62 New House Near Hari Vidyalaya, Bogadi

Sites 20x30, 30x40 Starting@ 22L
Apartments @ Ramkrishna Ngr
Commercial Properties Available
PRAKRUTHI PROPERTIES
95386 90359, 90359 90359

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಶಾಲೆ ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ



ಶಾಲೆ ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಅ.17– ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ಓಸಾಟ್ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್ ಮತ್ತು ಹಾಗೂ ದಾನಿಗಳ ವತಿಯಿಂದ 1.10 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುವ ಕೆಪಿಎಸ್‌ಸಿ ಶಾಲೆ ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸಲು ಓಸಾಟ್ ಸಂಸ್ಥೆ ಕಳೆದ 20 ವರ್ಷಗಳಿಂದ ಶ್ರಮಿಸುತ್ತಿದೆ. ಆ ಮೂಲಕ ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ನಿರ್ಮಿಸಿ ಶಿಕ್ಷಣ ನೀಡುವ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ. ಓಸಾಟ್ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್ ಮೂಲಕ ದಾನಿಗಳಾದ ರಾಜಲಕ್ಷ್ಮಿ ಅವರು ತಮ್ಮ ತಾಯಿ ನೆನಪಿಗಾಗಿ 1.10 ಕೋಟಿ ರೂ. ವೆಚ್ಚದಲ್ಲಿ 6 ಶಾಲಾ ಕೊಠಡಿ ಮತ್ತು ಶೌಚಾಲಯವನ್ನು ನಿರ್ಮಿಸಿ ಕೊಡಲಿದ್ದಾರೆ. ಈ ಕಟ್ಟಡವನ್ನು ಸಂರಕ್ಷಿಸಿ ಎಲ್ಲರೂ ಶಿಕ್ಷಣ ಪಡೆಯುವ ಮೂಲಕ ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಓಸಾಟ್ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್‌ನ ಬಾಲಕೃಷ್ಣರಾವ್ ಮಾತನಾಡಿ, ಓಸಾಟ್ ಸಂಸ್ಥೆ ಕಳೆದ 20 ವರ್ಷಗಳಿಂದ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸುತ್ತಾ ಬಂದಿದೆ. ಸುಮಾರು 10 ರಾಜ್ಯಗಳಲ್ಲಿ ಈಗಾಗಲೇ 126 ಶಾಲೆಗಳನ್ನು ನಿರ್ಮಿಸಿ ಕೊಡಲಾಗಿದೆ. ಈ ಪೈಕಿ ಕರ್ನಾಟಕದಲ್ಲಿ 80 ಶಾಲೆಗಳು ಮತ್ತು ಬೇರೆ ರಾಜ್ಯಗಳಲ್ಲಿ ಉಳಿದ ಶಾಲೆಗಳನ್ನು ನಿರ್ಮಿಸಿ ಕೊಡಲಾಗಿದೆ. ಅಲ್ಲದೇ ಶಾಲೆಗಳಿಗೆ ಡಿಜಿಟಲ್ ಸೌಲಭ್ಯ ಸೇರಿದಂತೆ ಅಗತ್ಯ ಎಲ್ಲಾ ಸೌಕರ್ಯ ಒದಗಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಿ ಶಿಕ್ಷಣಕ್ಕೆ ನೆರವು ನೀಡಲಾಗುತ್ತಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಮುಖಂಡರಾದ ದೊರೆಸ್ವಾಮಿ ನಾಯಕ, ಸಿದ್ಧಶೆಟ್ಟಿ, ನಾಗರಾಜು, ಮುದ್ದುಮಾದಶೆಟ್ಟಿ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಹೇಶ್, ಗ್ರಾಪಂ ಅಧ್ಯಕ್ಷ ಶ್ರೀಧರ್, ಎಸ್‌ಡಿಎಂಸಿ ಉಪಾಧ್ಯಕ್ಷ ಸಿದ್ದರಾಜು, ದಾನಿಗಳಾದ ರಾಜಲಕ್ಷ್ಮಿ, ಕೌಶಲ್, ಬಿಇಓ ಮಹೇಶ್, ಶಾಲೆ ಮುಖ್ಯೋಪಾಧ್ಯಾಯ ಮಹದೇವ ಪ್ರಸಾದ್ ಸೇರಿದಂತೆ ಹಲವರಿದ್ದರು.

ವಾಲ್ಮೀಕಿ ಜಯಂತಿ ಕೇವಲ ಕಾಂಗ್ರೆಸ್ ಕಾರ್ಯಕ್ರಮವಾಗಿತ್ತು

ಜೆಡಿಎಸ್ ಮುಖಂಡ ಸೋಗಹಳ್ಳಿ ಚಿಕ್ಕತಿಮ್ಮನಾಯಕ ಆರೋಪ



ಸಭೆಯಲ್ಲಿ ಜೆಡಿಎಸ್ ಮುಖಂಡ ಚಿಕ್ಕತಿಮ್ಮನಾಯಕ ಮಾತನಾಡಿದರು.

ಹೆಚ್.ಡಿ.ಕೋಟೆ, ಅ.17– ಇತ್ತೀಚೆಗೆ ಪಟ್ಟಣದಲ್ಲಿ ತಾಲೂಕು ಆಡಳಿತ ಹಾಗೂ ನಾಯಕ ಸಮಾಜದಿಂದ ನಡೆದ ವಾಲ್ಮೀಕಿ ಜಯಂತಿ ಕೇವಲ ಕಾಂಗ್ರೆಸ್ ಕಾರ್ಯಕ್ರಮವಾಗಿತ್ತು ಎಂದು ಜೆಡಿಎಸ್ ಮುಖಂಡ ಸೋಗಹಳ್ಳಿ ಚಿಕ್ಕತಿಮ್ಮನಾಯಕ ಆರೋಪಿಸಿದರು.

ತಾಲೂಕಿನ ಹೈರಿಗೆ ಸಮೀಪದಲ್ಲಿರುವ ಜೆಡಿಎಸ್ ಮುಖಂಡ ಕೃಷ್ಣನಾಯಕ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದೆ ನಮ್ಮ ನಾಯಕ ಮತ್ತು ಪರಿವಾರ ಸಮುದಾಯವನ್ನು ಎಸ್‌ಟಿಗೆ ಸೇರಿಸಿದ್ದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು. ಅದನ್ನು ಮರೆತು ಜೆಡಿಎಸ್‌ನ ಎಸ್‌ಟಿ ಮುಖಂಡರನ್ನು ವಾಲ್ಮೀಕಿ ಜಯಂತಿಗೆ ಆಹ್ವಾನಿಸದೇ ಸಮುದಾಯಕ್ಕೆ ದ್ರೋಹ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನಲ್ಲಿ ಜೆಡಿಎಸ್ ಕೃಷ್ಣ ನಾಯಕ ಅವರು ಸಾಕಷ್ಟು ಜನಪರ ಸೇವಾ ಕಾರ್ಯಗಳನ್ನು ಕೈಗೊಂಡಿದ್ದಾರೆ. ಲಾಕ್‌ಡೌನ್ ವೇಳೆ 2 ಆಂಬುಲೆನ್ಸ್‌ಗಳನ್ನು ಸರ್ಕಾರಿ ಆಸ್ಪತ್ರೆಗೆ ನೀಡಿದ್ದರು. ಅಲ್ಲದೇ 30 ಸಾವಿರ ಆಹಾರ ಕಿಟ್, 3 ಸಾವಿರ ಆರೋಗ್ಯ ಕಿಟ್ ವಿತರಿಸಿ ಜನಮನ್ನಣೆ ಗಳಿಸಿದ್ದಾರೆ ಎಂದರು.

ಮುಖಂಡ ಪುರದಕಟ್ಟೆ ಬೆಟ್ಟನಾಯಕ ಮಾತನಾಡಿ, ತಾಲೂಕಿನಲ್ಲಿ ನಾಯಕ ಸಮುದಾಯ ಹಿಂದಿನಿಂದಲೂ ಜೆಡಿಎಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದೆ. ಅಲ್ಲದೇ ಜೆಡಿಎಸ್ ಪಕ್ಷದಿಂದ ಚಿಕ್ಕಮಾದು ಸೇರಿದಂತೆ ಹಲವರನ್ನು ಗೆಲ್ಲಿಸಲಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣನಾಯಕ ಅವರನ್ನು ಜೆಡಿಎಸ್ ಅಭ್ಯರ್ಥಿಯಾಗಿ ನಿಲ್ಲಿಸಿ ಶಾಸಕರಾಗಿ ಆಯ್ಕೆ ಮಾಡುತ್ತೇವೆ ಎಂದರು.

ಜೆಡಿಎಸ್‌ನಲ್ಲಿ ಎಸ್‌ಟಿ ಸಮುದಾಯಕ್ಕೆ ಸೇರಿದ ನಿಷ್ಠಾವಂತ ನಾಯಕರು ಹಾಗೂ ಕಾರ್ಯಕರ್ತರಿದ್ದಾರೆ. ಅವರನ್ನೆಲ್ಲಾ ನಿರ್ಲಕ್ಷಿಸಿ ಕಾರ್ಯಕ್ರಮ ಮಾಡಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು ಕಾಂಗ್ರೆಸ್ ಬಲ ಪ್ರದರ್ಶಿಸಲು ಮಾತ್ರ ವಾಲ್ಮೀಕಿ ಜಯಂತಿ ನಡೆಸಲಾಗಿದೆ. ಆದರೆ ನಾಯಕ ಸಮುದಾಯದವರು ಒಗ್ಗೂಡಿ ಕಾಂಗ್ರೆಸ್ ವಿರೋಧಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ಕಿತ್ತೊಗೆಯಲಿದ್ದೇವೆ ಎಂದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ 2ನೇ ಸ್ಥಾನ ಪಡೆದ ಜೆಡಿಎಸ್ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಅವರನ್ನು ವಾಲ್ಮೀಕಿ ಜಯಂತಿ ಆಚರಣಾ ಸಮಿತಿ ನಿರ್ಲಕ್ಷಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸದೇ ಕೃಷ್ಣನಾಯಕರಿಗೆ ಮತ್ತು ಜೆಡಿಎಸ್ ಪಕ್ಷಕ್ಕೆ ಅವಮಾನ ಮಾಡಿದೆ ಎಂದರು.

ಸಭೆಯಲ್ಲಿ ನಂಜನಾಯಕ, ವೈಕುಂಠ ನಾಯಕ, ಶಂಕರ, ಗಣೇಶ್, ವೆಂಕಟೇಶ ನಾಯಕ, ನಾಗನಾಯಕ, ಬೆಟ್ಟನಾಯಕ, ರವಿ, ಸಣ್ಣಸ್ವಾಮಿ, ಕೃಷ್ಣ, ತಿಮ್ಮನಾಯಕ, ಜಯರಾಮ್, ಕೋಟೆ ದೇವನಾಯಕ, ವಿಜಯ ಕುಮಾರ್, ಪುಟ್ಟಣ್ಣಯ್ಯ, ಮಹದೇವ ನಾಯಕ, ಸತೀಶ್, ಮರಿನಾಯಕ, ಬೀರನಾಯಕ, ಗೋಪಾಲ್, ಪಾಂಡು, ಪ್ರಸಾದ್, ವಿಜಯಕುಮಾರ್, ಸೋಮ ನಾಯಕ, ಕಾಳಸ್ವಾಮಿ, ನಂಜನಾಯಕ, ಸ್ವಾಮಿ, ಗಣೇಶನಾಯಕ, ಬಟ್ಟನಾಯಕ, ರಾಜನಾಯಕ ಇದ್ದರು.

ಅ.23ಕ್ಕೆ ಅದ್ಧೂರಿ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ



ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಮಾತನಾಡಿದರು.

ನಂಜನಗೂಡು, ಅ.17– ನಗರದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಮತ್ತು ವಿವಿಧ ಸಂಘ ಸಂಸ್ಥೆಗಳು ಹಾಗೂ ನಂಜನಗೂಡು ನಾಗರಿಕರ ವತಿಯಿಂದ ಅ.23 ರಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರ 110ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕ ವಯಸ್ಸಿನಲ್ಲಿಯೇ ಮಠದ ಉತ್ತರಾಧಿಕಾರಿಯಾಗಿದ್ದ ರಾಜೇಂದ್ರ ಶ್ರೀಗಳು, ತಮ್ಮ ಜ್ಞಾನ, ತಪಶಕ್ತಿಯಿಂದಾಗಿ ಸುತ್ತೂರು ಮಠವನ್ನು ವಿಶ್ವ ವಿಖ್ಯಾತಿಗೊಳಿಸಿದರು. ಅಲ್ಲದೇ ಉಚಿತ ಪ್ರಸಾದ ನಿಲಯ ಮತ್ತು ಶಾಲಾ–ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮೀಣ ಜನತೆಗೆ ಅಕ್ಷರದ ಜೊತೆಗೆ ಅನ್ನ ದಾಸೋಹ ಒದಗಿಸಿದರು. ಅಲ್ಲದೇ ಧರ್ಮ, ಆಧ್ಯಾತ್ಮಿಕ ಸಾಹಿತ್ಯ, ಸಂಸ್ಕೃತಿ ಸಂರಕ್ಷಣೆಗಾಗಿ ಧಾರ್ಮಿಕ ದತ್ತಿ, ಶರಣ ಸಾಹಿತ್ಯ ಪರಿಷತ್ತು, ಜೆಎಸ್‌ಎಸ್ ಕಲಾಮಂಟಪ, ಜೆಎಸ್‌ಎಸ್ ಸಂಗೀತ ಸಭಾ ಭವನ ಸೇರಿದಂತೆ ಎಲ್ಲಾ ರೀತಿಯ ಸೇವಾ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕಿದರು ಎಂದರು.

ಅ.23 ರಂದು ಬೆಳಗ್ಗೆ 8.30ಕ್ಕೆ ಶ್ರೀಕಂಠೇಶ್ವರ ದೇವಾಲಯದಿಂದ ಶ್ರೀಶಿವರಾತ್ರಿ ರಾಜೇಂದ್ರ ಶ್ರೀಗಳ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಗುವುದು. ಮೆರವಣಿಗೆಯಲ್ಲಿ ನಂದಿಧ್ವಜ, ವೀರಗಾಸೆ, ಪೂಜಾ ಕುಣಿತ, ನಾದಸ್ವರ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಲಿದ್ದು, ಮೆರವಣಿಗೆಯು ರಾಷ್ಟ್ರಪತಿ ರಸ್ತೆ ಮೂಲಕ ಜೆಎಸ್‌ಎಸ್ ಮಂಗಳ ಮಂಟಪ ತಲುಪಲಿದೆ. ಬೆಳಗ್ಗೆ 10.30ಕ್ಕೆ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಶತೋತ್ತರ ದಶಮಾನೋತ್ಸವ ಅಂಗವಾಗಿ ಧಾರ್ಮಿಕ ಸಭೆ ನಡೆಯಲಿದ್ದು, ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಲ್ಲನಮೂಲೆ ಮಠದ ಚನ್ನಬಸವ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಸಂಸದ ಸುನಿಲ್ ಬೋಸ್ ಉದ್ಘಾಟಿಸಲಿದ್ದು, ಶಾಸಕ ದರ್ಶನ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ತಾಲೂಕಿನ ಪ್ರಗತಿಪರ ಕೃಷಿಕರು ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದತ್ತಿ ಬಹುಮಾನ ನೀಡಿ ಪುರಸ್ಕರಿಸಲಾಗುವುದು. ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ನಾಗರಿಕರು, ಭಕ್ತರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಿ ಗುರು ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಯು.ಎನ್.ಪದ್ಮನಾಭ್‌ರಾವ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಹದೇವಸ್ವಾಮಿ, ಸುಬ್ಬಣ್ಣ, ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲರಾದ ಶಿವಕುಮಾರ, ಹೊನ್ನೇಗೌಡ, ಪ್ರಭುಸ್ವಾಮಿ, ರವಿತೇಜ, ವಿದ್ಯಾಶಂಕರ್ ಸೇರಿದಂತೆ ಇತರರಿದ್ದರು.

ನೂತನ ಸಾರಿಗೆ ಬಸ್ ಸಂಚಾರಕ್ಕೆ ಚಾಲನೆ



ನೂತನ ಬಸ್ ಸಂಚಾರಕ್ಕೆ ಕುಕ್ಕೂರು ಗಣೇಶ್ ಚಾಲನೆ ನೀಡಿದರು.

ತಿ.ನರಸೀಪುರ, ಅ.17– ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗಾಗಿ ಶಕ್ತಿ ಯೋಜನೆ ಜಾರಿಗೊಳಿಸಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್ ತಿಳಿಸಿದರು.

ತಾಲೂಕಿನ ಕಾಳಬಸವನಹುಂಡಿ ಮಾರ್ಗವಾಗಿ ತಲಕಾಡು ಹಾಗೂ ಕೊಳ್ಳೇಗಾಲಕ್ಕೆ ತೆರಳುವ ಮಾರ್ಗದ ನೂತನ ಬಸ್ ಸಂಚಾರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿ, ಈಗಾಗಲೇ ಪ್ರತಿಯೊಂದು ಗ್ರಾಮಕ್ಕೂ ಕೆಎಸ್‌ಆರ್‌ಟಿಸಿ ಬಸ್ ಸಂಚರಿಸುತ್ತಿದ್ದವು. ಆದರೆ ಈ ಭಾಗದ ಜನರು ಬಸ್ ಸೌಲಭ್ಯವಿಲ್ಲದೇ ಪರಿತಪಿಸುತ್ತಿದ್ದರು. ಹೀಗಾಗಿ ಬಸ್ ಸೌಲಭ್ಯಕ್ಕಾಗಿ ಕಾಳಬಸವನಹುಂಡಿ ಸೇರಿದಂತೆ ಈ ಭಾಗದ ಗ್ರಾಮಸ್ಥರು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರಿಗೆ ಚುನಾವಣಾ ಸಮಯದಲ್ಲಿ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿದ್ದ ಸಚಿವರು, ಸಂಸದರು ನೂತನ ಬಸ್ ಸಂಚಾರಕ್ಕೆ ಸೂಚಿಸಿದ ಹಿನ್ನೆಲೆಯಲ್ಲಿ ಇಂದಿನಿಂದ ಬಸ್ ಸಂಚಾರ ಆರಂಭವಾಗಿದೆ ಎಂದರು.

ಬಸ್ ಸಂಚಾರದಿಂದ ಸಾರ್ವಜನಿಕರು, ಶಾಲಾ ಮಕ್ಕಳಿಗೆ ಅನುಕೂಲವಾಗಲಿದೆ. ಹೀಗಾಗಿ ಬಸ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ನಿರ್ವಾಹಕರು, ಚಾಲಕರು ಬಸ್ ಸಂಚಾರ ಸ್ಥಗಿತಗೊಳಿಸದೇ ಸೇವೆ ನೀಡಬೇಕು ಎಂದು ಮಾನವಿ ಮಾಡಿದರು. ನೂತನ ಬಸ್ ಕಾವೇರಿಪುರ ಮುಖ್ಯ ರಸ್ತೆಯಿಂದ ಕಾಳಿಹುಂಡಿ, ಕಾಳಬಸವನಹುಂಡಿ, ಟಿ.ಮೇಗಡಹಳ್ಳಿ ಹಾಗೂ ತಲಕಾಡು ಮುಖ್ಯರಸ್ತೆ ಮೂಲಕ ಕೊಳ್ಳೇಗಾಲಕ್ಕೆ ತೆರಳಲಿದೆ ಎಂದರು.

ಈ ವೇಳೆ ತಲಕಾಡು ವೈದ್ಯನಾಥೇಶ್ವರ ಸಮೂಹ ದೇವಾಲಯದ ಅಧ್ಯಕ್ಷ ಬೆಟ್ಟಳ್ಳಿ ನಾಗರಾಜು, ಆಪ್ತ ಸಹಾಯಕ ಬಸವರಾಜು, ಕಾಳಬಸವನಹುಂಡಿ ಗ್ರಾಮದ ಬಸವರಾಜ್, ಬಸವನಾಯಕ, ಪ್ರಕಾಶ್, ವಾಟರ್‌ಮನ್ ಮಾದೇವ, ಮಾದೇಶ, ಶಿವು, ಅಂಗಡಿ ವಸಂತ ನಿಂಗೇಗೌಡ, ಆಚಾರ್, ಅಂಗನವಾಡಿ ಕಾರ್ಯಕರ್ತರು ಮತ್ತು ಗ್ರಾಮಸ್ಥರು, ಮಹಿಳಾ ಮುಖಂಡರು ಹಾಜರಿದ್ದರು.

ಗಾಯಾಳುಗಳ ಆರೋಗ್ಯ ವಿಚಾರಿಸಿದ ಕೃಷ್ಣನಾಯಕ

ಸರಗೂರು, ಅ.17– ಗೂಡ್ಸ್ ವಾಹನ ಪಲ್ಟಿಯಾಗಿ ಗಾಯಗೊಂಡಿದ್ದ ಗಾಯಾಳುಗಳ ಆರೋಗ್ಯವನ್ನು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣ ನಾಯಕ ವಿಚಾರಿಸಿದರು.

ಗುರುವಾರ ಪಟ್ಟಣದ ಕಬಿನಿ ಬಲದಂಡೆ ಸೇತುವೆ ಮೇಲೆ ಗೂಡ್ಸ್ ವಾಹನ ಪಲ್ಟಿಯಾಗಿ ಗಾಯಗೊಂಡಿದ್ದ ಗೊಂತಗಾಲದಹುಂಡಿ ಗ್ರಾಮದ ನಿವಾಸಿಗಳಾದ ಪುಟ್ಟಿ, ಪುಟ್ಟಮ್ಮ, ಭಾಗ್ಯ, ಚೌಡಮ್ಮ, ಶೃತಿ, ಮಹದೇವಮ್ಮ, ನಾಗಮ್ಮ, ಕಾಳಮ್ಮ, ಅಶ್ವಿನಿ, ಮಾದಮ್ಮ, ಸಿದ್ದಶೆಟ್ಟಿ, ಮಾದಮ್ಮ ಅವರು ಚಿಕಿತ್ಸೆಗಾಗಿ ಪಟ್ಟಣದ ಸ್ವಾಮಿ ವಿವೇಕಾನಂದ ಸ್ಮಾರಕ ಆಸ್ಪತ್ರೆಗೆ ದಾಖಲಾಗಿದ್ದರು. ಈ ವಿಷಯ ತಿಳಿದ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಶುಕ್ರವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಗಾಯಾಳುಗಳ ಕುಟುಂಬದವರಿಗೆ ಧೈರ್ಯ ತುಂಬಿ ಸಹಾಯಧನ ವಿತರಿಸಿದರು.

ನಂತರ ಮಾತನಾಡಿದ ಅವರು, ಇಂತಹ ಘಟನೆ ನಡೆಯಬಾರದಿತ್ತು. ಜೀವನ ನಿರ್ವಹಣೆಗೆ ಕೂಲಿ ಮಾಡಲು ಗೂಡ್ಸ್ ವಾಹನದಲ್ಲಿ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಕೂಲಿ ಕಾರ್ಮಿಕರನ್ನು ಕರೆದೊಯ್ಯುವ ಆಟೋಗಳ ಮಾಲೀಕರು ಹಾಗೂ ಚಾಲಕರು ಜಾಗರೂಕತೆಯಿಂದ ವಾಹನ ಚಾಲನೆ ಮಾಡಬೇಕು. ಅಪಘಾತವಾದ ಸಂದರ್ಭ ಜನಪ್ರತಿನಿಧಿಗಳು ಕೂಲಿ ಕಾರ್ಮಿಕರ ನೆರವಿಗೆ ಧಾವಿಸಬೇಕು ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ, ಮುಖಂಡರಾದ ಸುಧೀರ್, ಬೆಟ್ಟನಾಯಕ, ವೈಕುಂಠ ನಾಯಕ, ತಮ್ಮನಾಯಕ, ಶಂಕರ್, ವಿಜಯ್, ಮಹದೇವನಾಯಕ, ಸಿ.ಟಿ.ನಾಯಕ, ನಿಂಗಪ್ಪ, ಕೃಷ್ಣ, ರವಿ, ಲೇಖನ, ನರಸಿಂಹರಾಜು, ಚರಣ್, ವಕೀಲ ಪ್ರಶಾಂತ್ ಪಕ್ಷದ ಕಾರ್ಯಕರ್ತರು ಹಾಗೂ ಗಾಯಾಳುಗಳ ಕುಟುಂಬಸ್ಥರು ಇದ್ದರು.



ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಕೂಡ್ಲಾಪುರ ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೂಡ್ಲಾಪುರ ಪಿಎಸಿಎಸ್ ಅಧ್ಯಕ್ಷೆಯಾಗಿ ರತ್ನಮ್ಮ, ಉಪಾಧ್ಯಕ್ಷರಾಗಿ ಮಹದೇವಶೆಟ್ಟಿ ಆಯ್ಕೆಯಾಗಿದ್ದಾರೆ.

ಮಲ್ಲುಂಡಿ, ಅ.17– ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ರತ್ನಮ್ಮ, ಉಪಾಧ್ಯಕ್ಷರಾಗಿ ಮಹದೇವಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 12 ಸದಸ್ಯ ಬಲದ ಸಹಕಾರ ಸಂಘದ ಆವರಣದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರತ್ನಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಶೆಟ್ಟಿ ಅವರನ್ನು ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಸಿ.ರಘು ಘೋಷಿಸಿದರು.

ನೂತನ ಅಧ್ಯಕ್ಷೆ ರತ್ನಮ್ಮ ಮಾತನಾಡಿ, ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಅಲ್ಲದೇ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಈ ವೇಳೆ ನಿರ್ದೇಶಕರಾದ ಎಂ.ರಾಜು, ಮಾರಶೆಟ್ಟಿ, ಪುಟ್ಟಸ್ವಾಮಿ, ಚಿಕ್ಕಮಾದಶೆಟ್ಟಿ, ಬಸವಣ್ಣ, ಶಿವರಾಜು, ಸುಬ್ಬಣ್ಣ, ರಾಜು, ಸಿಇಓ ಮಹೇಶ್ ಸೇರಿದಂತೆ ಇತರರಿದ್ದರು.

ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ

ತಿ.ನರಸೀಪುರ,ಅ.17– ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುರಸಭೆ ಸ್ಥಾಯಿ ಸಮಿತಿ ಸದಸ್ಯ ತುಂಬಲ ಪ್ರಕಾಶ್, ಮಹಿಳೆಯರಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಯೋಜನೆಗೆ ಫಲಾನುಭವಿ ನೋಂದಣಿಯಾಗಿ ಕುಟುಂಬದ ಮುಖ್ಯ ನಿರ್ವಹಣೆ ಹೊಣೆ ಅವರ ಮೇಲಿರುತ್ತದೆ. ಮಕ್ಕಳ ಆರೋಗ್ಯ, ಏಳಿಗೆ ಹಾಗೂ ವೃದ್ಧರ ಆರೈಕೆ, ಕುಟುಂಬದ ಗುರುತರ ಜವಾಬ್ದಾರಿ ಮೂಲಕ ಸಶಕ್ತ ಪರಿವಾರಕ್ಕೆ ನಾಂದಿ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು ಮಾತನಾಡಿ, ರಾಷ್ಟ್ರೀಯ ಪೋಷಣಾ ಮಾಸಾಚರಣೆ ಕಾರ್ಯಕ್ರಮದ ನಿಮಿತ್ತ ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ ನಮ್ಮಗಳ ಜವಾಬ್ದಾರಿಯ ಅರಿವನ್ನು ತೋರಿಸುತ್ತದೆ. ಸರ್ಕಾರ ಹಲವಾರು ಯೋಜನೆ ಜಾರಿಗೆ ತಂದಿದ್ದು, ಗೃಹಲಕ್ಷ್ಮೀ, ಗೃಹಜ್ಯೋತಿ, ಸುಕನ್ಯಾ ಸಮೃದ್ಧಿ, ಮಾತೃ ವಂದನಾ, ಶಕ್ತಿ ಯೋಜನೆ, ಉದ್ಯೋಗಿನಿ, ಬೀದಿಬದಿ ವ್ಯಾಪಾರಸ್ಥರ ಪ್ರೋತ್ಸಾಹ ಧನ ಸಹಾಯ ಮೂಲಕ ಮಹಿಳೆಯರು ಸ್ವಂತ ಉದ್ಯೋಗಿಗಳಾಗಿ ಆದಾಯ ಚಟುವಟಿಕೆಯಲ್ಲಿ ತೊಡಗುವ ಮೂಲಕ ಕುಟುಂಬ ಸಬಲೀಕರಣಕ್ಕೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪಟ್ಟಣದ ವಿವಿಧ ಮಹಿಳಾ ಸಂಘದ ಮಹಿಳಾ ಸದಸ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನಿಸಿದ

ವಕೀಲನ ಗಡಿಪಾರಿಗೆ ಆಗ್ರಹಿಸಿ ಪಂಜಿನ ಮೆರವಣಿಗೆ

ಹುಣಸೂರು, ಅ.17– ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ಅವರನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ನಗರದಲ್ಲಿ ಪ್ರಗತಿಪರರು ಮತ್ತು ದಲಿತ ಸಂಘಟನೆಗಳ ಮುಖಂಡರು ಗುರುವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದರು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಜಮಾಯಿಸಿದ 300ಕ್ಕೂ ಹೆಚ್ಚು ಮಂದಿ ಅಲ್ಲಿಂದ ಕಲ್ಪತರು ಸರ್ಕಲ್‌ವರೆಗೆ ಪಂಜು ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ಅಲ್ಲದೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿದ ವಕೀಲ ರಾಕೇಶ್ ಕಿಶೋರ್‌ನನ್ನು ದೇಶದಿಂದ ಗಡಿಪಾರು ಮಾಡಬೇಕು. ಆತನ ಹಿಂದೆ ಬಿಜೆಪಿ, ಆರ್‌ಎಸ್‌ಎಸ್ ಕೈವಾಡವಿದೆ. ಆದ್ದರಿಂದ ರಾಷ್ಟ್ರಪತಿಗಳು ಸೂಕ್ತ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮೆರವಣಿಗೆಯಲ್ಲಿ ಹಿರಿಯ ಮುಖಂಡ ಆನಂದಸ್ವಾಮಿ, ಹುಣಸೂರು ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಮಂಜುನಾಥ್, ಕಾಂಗ್ರೆಸ್ ಮಾಜಿ ಕಾರ್ಯಾಧ್ಯಕ್ಷರೂ ಆದ ವಕೀಲ ಪುಟ್ಟರಾಜು, ಅಕ್ರಮ ಸಕ್ರಮ ಸಮಿತಿ ಮಾಜಿ ಸದಸ್ಯ ಚಿಕ್ಕಸ್ವಾಮಿ, ಸ್ವಾಮಿ, ರಾಮಕೃಷ್ಣ, ಸಿಪಿಎಂ ಮುಖಂಡ ವಿ.ಬಸವರಾಜು. ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ದಸಂಸ ಮುಖಂಡರಾದ ಶಿವರಾಜು, ರಾಜು, ಸಿದ್ದೇಶ್, ವೆಂಕಟೇಶ್, ರಾಜಪ್ಪ, ಕುಮಾರ, ಜೀವ ವಿಮಾ ಪ್ರತಿನಿಧಿ ಸಂಘದ ಮಾಜಿ ಅಧ್ಯಕ್ಷ ರಾಧಾಕೃಷ್ಣ, ವೀರಭದ್ರ ಎ, ಚಲುವರಾಜು, ಕೃಷ್ಣ, ಕಾಂತರಾಜು, ನಾರಾಯಣ, ಗಿರೀಶ, ಮಹೇಶ್, ಪ್ರಕಾಶ್, ನಿವೃತ್ತ ಬಿಇಓ ಶಿವಣ್ಣ, ಸಿಪಿಎಂನ ಹೆಚ್.ಡಿ.ಬೀರೇಶ್ವರ್, ಚಂದ್ರಶೇಖರ್, ಪುಟ್ಟರಾಜು, ಬಸವರಾಜು, ಅಭಿ, ಸಂಜು, ಮಧು, ಪ್ರಸನ್ನ, ಹರೀಶ ಸೇರಿದಂತೆ ಇತರರಿದ್ದರು.



ವಕೀಲನ ಗಡಿಪಾರಿಗೆ ಆಗ್ರಹಿಸಿ ಮುಖಂಡರು ಪಂಜಿನ ಮೆರವಣಿಗೆ ನಡೆಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಕಸಾಪ ವತಿಯಿಂದ

ನ.1ಕ್ಕೆ ತಿ.ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ

● ವಿದ್ಯಾರ್ಥಿಗಳಿಗೆ ಪುರಸ್ಕಾರ, ಸಾಧಕರಿಗೆ ಸನ್ಮಾನ ● ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ತಿ.ನರಸೀಪುರ, ಅ.17– ವಾಡಿಕೆಯಂತೆ ಸಾಂಪ್ರದಾಯಿಕವಾಗಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಭಾಗಿತ್ವದಲ್ಲಿ ನ.1ರಂದು ಪಟ್ಟಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲು ನಿರ್ಧರಿಸಲಾಯಿತು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತಾಲೂಕು ಕಚೇರಿ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಿ, ರಸಪ್ರಶ್ನೆ, ಪ್ರಬಂಧ ಸ್ಪರ್ಧೆ ಹಮ್ಮಿಕೊಂಡು ಕನ್ನಡದಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಸಾಧಕರನ್ನು ಸನ್ಮಾನಿಸಿ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ಜನಗಣತಿ ಸಮೀಕ್ಷೆ ಕಾರ್ಯ ನಿರ್ವಹಣೆ, ಉಸ್ತುವಾರಿಗೆ ಹಲವು ಅಧಿಕಾರಿಗಳು ನಿಯೋಜನೆ ಆಗಿರುವುದರಿಂದ ಸಭೆಗೆ ಗೈರು ಹಾಜರಾಗಿದ್ದಾರೆ. ರಾಜ್ಯೋತ್ಸವ ಆಚರಣೆಗೆ ಪೂರ್ವಭಾವಿಯಾಗಿ ತೀರ್ಮಾನಿಸೋಣ. ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿಗೆ ಸರ್ಕಾರ ಮೂವರನ್ನು ನಾಮ ನಿರ್ದೇಶನ ಮಾಡಿದ್ದು, ಇನ್ನುಳಿದ ಹೋರಾಟಗಾರರು ಹಾಗೂ ಮುಖಂಡರು ಆಯ್ಕೆ ಮಾಡಿಲ್ಲವಾದ್ದರಿಂದ ದಲಿತರ ಕುಂದು ಕೊರತೆ ಸಭೆ ನಡೆಸಿಲ್ಲ. ರಾಜ್ಯೋತ್ಸವ ಸಭೆಯಲ್ಲಿ ದಲಿತರ ಸಭೆ ವಿಚಾರದ ಪ್ರಸ್ತಾಪದ ಅಗತ್ಯವಿಲ್ಲ. ಸಾಧ್ಯವಾದರೆ ಮುಂದಿನ ವಾರ ಸಭೆ ಕರೆಯೋಣ ಎಂದರು.

ಇದಕ್ಕೆ ಆಕ್ಷೇಪಿಸಿದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಸರ್ಕಾರ ನಾಮ ನಿರ್ದೇಶಿಸಿರುವ ಮೂವರಿಂದ ತಾಲೂಕಿನ ದಲಿತರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಅಲ್ಲದೆ ಅವರಿಗೆ ಹಳ್ಳಿಗಾಡಿನ ನೈಜತೆಯ ಅರಿವಿಲ್ಲ. ತಾಲೂಕು ದಂಡಾಧಿಕಾರಿಯಾಗಿ ಸಭೆ ವಿಚಾರವನ್ನೇ ಕಿವಿಗೆ ಹಾಕಿಕೊಳ್ಳುವಷ್ಟು ತಾಳ್ಮೆ ನಿಮಗೆ ಇಲ್ಲವಾಗಿದೆ. ದಲಿತರ ಕುಂದು ಕೊರತೆಗಳ ಸಭೆಗೆ ಹೋಬಳಿವಾರು ಮುಖಂಡರು ಹಾಗೂ ಹೋರಾಟಗಾರರನ್ನು ಆಯ್ಕೆ ಮಾಡಿ ಸಭೆ ಆಯೋಜಿಸಿ, ತಾಲೂಕಿನ ದಲಿತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಒತ್ತಾಯಿಸಿದರು.


ಯುವ ಮುಖಂಡ ಕೇತುಪುರ ಶಿವಕುಮಾರ್ ಮಾತನಾಡಿ, ತಾಲೂಕಿನಲ್ಲಿ ಕಸಾಪ ಚಟುವಟಿಕೆಗಳು ನಿಷ್ಕ್ರಿಯಗೊಂಡಿವೆ. ಬನ್ನೂರು ಹೋಬಳಿ ಅಧ್ಯಕ್ಷರನ್ನಾಗಿ ಸರ್ಕಾರಿ ಶಿಕ್ಷಕಿಯೊಬ್ಬರನ್ನು ಆಯ್ಕೆ ಮಾಡಿರುವುದರಿಂದ ರಾಜ್ಯೋತ್ಸವ ಪೂರ್ವಭಾವಿ ಸಭೆಗೆ ಆಕೆ ಬಂದಿಲ್ಲ. ನಿಷ್ಕ್ರಿಯಗೊಂಡಿರುವ ಸಾಹಿತ್ಯ ಪರಿಷತ್‌ನಿಂದ ಅಚ್ಚುಕಟ್ಟಾದ ರಾಜ್ಯೋತ್ಸವ ಆಚರಣೆ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಅವರ ಕಾರ್ಯ ವೈಖರಿಯನ್ನು ಟೀಕಿಸಿದರು.

ಸಭೆಯಲ್ಲಿ ಜನಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಮಾತನಾಡಿದರು. ಯೋಜನಾಧಿಕಾರಿ ರಂಗಸ್ವಾಮಿ, ಪುರಸಭೆ ಮುಖ್ಯಾಧಿಕಾರಿಗಳಾದ ಕೆ.ಸಿ. ತ್ರಿವೇಣಿ, ಆರ್.ಹೇಮಂತ್‌ರಾಜ್, ಸಿಆರ್‌ಪಿ ನಾಗೇಶ್, ಎಇಇಗಳಾದ ಪಿ.ಎನ್.ಚರಿತ, ಕೆ.ಶಿವರಾಜು, ಹೆಚ್.ಸಿ.ರತೀಶ, ಕೆ.ವಿ.ವೀರೇಶ್, ಕೃಷಿ ಇಲಾಖೆ ಸುಹಾಸಿನಿ, ಅಬಕಾರಿ ಇಲಾಖೆ ಸುಧಾರಾಣಿ, ಮುಖಂಡರಾದ ಕುಮಾರಸ್ವಾಮಿ, ಮಹದೇವಯ್ಯ, ಮಂಜುನಾಥ್, ಗಣೇಶಸ್ವಾಮಿ, ಈ.ರಾಜು, ಡಾ.ಬಿ.ಪ್ರದೀಪ್, ಡಾ.ಬಿ.ಮನ್ಸೂರ್ ಆಲಿ, ಆಲಗೂಡು ಮಹದೇವ, ಸಿದ್ದಪ್ಪ, ಸಿ.ಪುಟ್ಟಮಲ್ಲಯ್ಯ, ಸೋಮು, ಕುಪ್ಯಾ ಜಯರಾಮು, ಟಿ.ವಿ.ವೆಂಕಟೇಶ, ತಾಯೂರು ಮಾದೇಶ, ಮಧು, ತ್ರಿವೇಣಿ ನಗರ ಮಹದೇವಮ್ಮ, ಶಾಂತಮೂರ್ತಿ ಇತರರಿದ್ದರು.

ಅಧಿಕಾರಿಗಳು ಗೈರು: ಸಿಡಿಮಿಡಿಗೊಂಡ ಬಿ.ಮರಯ್ಯ

ಸಭೆ ಆರಂಭದಲ್ಲೇ ಅಧಿಕಾರಿಗಳ ಗೈರು ಹಾಜರಿಗೆ ಸಿಡಿಮಿಡಿಗೊಂಡ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರು, ಪ್ರತಿಯೊಂದು ಪೂರ್ವಭಾವಿ ಸಭೆಗೂ ಅಧಿಕಾರಿಗಳು ಗೈರು ಹಾಜರಾಗುತ್ತಿದ್ದಾರೆ. ಅಂತಹವರ ಮೇಲೆ ಕ್ರಮ ಕೈಗೊಳ್ಳುವ ಬದಲು ತಹಸೀಲ್ದಾರ್ ಅವರು ಸಮರ್ಥಿಸಿಕೊಳ್ಳುತ್ತಿದ್ದೀರಿ. ಆಡಳಿತಾತ್ಮಕ ಕ್ರಮಕ್ಕಾದರೂ ಜಿಲ್ಲಾಡಳಿತ ಮತ್ತು ಸರ್ಕಾರಕ್ಕೆ ಒಂದು ಪತ್ರ ಬರೆದಿಲ್ಲ. ನಾವ್ಯಾಕೆ ಸಭೆಗೆ ಬರಬೇಕು. ನೀವು ಮತ್ತು ಕಸಾಪ ಅಧ್ಯಕ್ಷರೇ ಚರ್ಚಿಸಿ, ಆಚರಣೆ ಮಾಡಿಕೊಳ್ಳಿ. ದಲಿತರ ಕುಂದು ಕೊರತೆ ಸಭೆಯನ್ನೇ ಇದುವರೆಗೂ ಕರೆದಿಲ್ಲವೆಂದು ತರಾಟೆಗೆ ತೆಗೆದುಕೊಂಡರು. ಅಲ್ಲದೆ ಅಧಿಕಾರಿಗಳ ಬೇಜವಾಬ್ದಾರಿ ಹೀಗೆ ಮುಂದುವರೆದರೆ ಕಪ್ಪು ಬಾವುಟ ಪ್ರದರ್ಶಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸೋಮನಾಯಕ ನಿಧನ



ಭೇರ್ಯ, ಅ.17– ಹೊಸ ಅಗ್ರಹಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ಸೋಮನಾಯಕ(65) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ಎಸ್.ರವಿಶಂಕರ್



ಹುಣಸೂರು, ಅ.17– ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎ.ಪಿ.ಸ್ವಾಮಿ ಅವರ ಹಿರಿಯ ಪುತ್ರ ಎ.ಎಸ್.ರವಿಶಂಕರ್(46) ಗುರುವಾರ ನಿಧನರಾದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ಗುರುವಾರ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣೇಗೌಡ



ಹುಣಸೂರು, ಅ.17– ತಾಲೂಕಿನ ಹನಗೋಡು ಪಿಎಸಿಎಸ್ ಮಾಜಿ ಅಧ್ಯಕ್ಷ ಕೃಷ್ಣೇಗೌಡ(ಅಣ್ಣಯ್ಯ–58) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ ಅಂತ್ಯಕ್ರಿಯೆ ಶುಕ್ರವಾರ ಸಂಜೆ ಮೃತರ ತೋಟದಲ್ಲಿ ನಡೆಯಿತು.

ಮಹದೇವಮ್ಮ



ಸುತ್ತೂರು, ಅ.17– ನಂಜನಗೂಡು ತಾಲೂಕಿನ ಹುಳಿಮಾವು ಗ್ರಾಮದ ನಿವಾಸಿ ಮಹದೇವಮ್ಮ(78) ಗುರುವಾರ ನಿಧನರಾದರು. ಮೃತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಿತು.

ಮುಡಾ ಮನೆಗಳಲ್ಲಿ 32 ವರ್ಷ ಅನಧಿಕೃತ ವಾಸ!

●ಈಗ ಆರಂಭವಾಗಿದೆ ತೆರವು ಪ್ರಕ್ರಿಯೆ! ●ಅಕ್ರಮ ವಾಸಿಗಳಿಗೆ ಮುಡಾದಿಂದ ನೋಟಿಸ್ ಜಾರಿ ●ಕಂಡ ಕಂಡವರ ಪಾಲಾಗಿರುವ ಮುಡಾ ಆಸ್ತಿ ●ಸಂರಕ್ಷಣೆ ಇನ್ನು ಮುಂದಾದರೂ ಆಗಬಹುದಾದ ಆಶಾಭಾವ





ಎಂಡಿಎ ರೆವೆನ್ಯೂ ಇನ್ಸ್‌ಪೆಕ್ಟರ್‌ಗಳಾದ ಮಂಜುನಾಥ್, ಮಹದೇವಸ್ವಾಮಿ ಅಕ್ರಮವಾಗಿ ಸ್ವಾಧೀನದಲ್ಲಿರುವ ಮನೆಗಳ ನಿವಾಸಿಗಳಿಗೆ ನೋಟೀಸ್ ನೀಡಿ, ಸಹಿ ಪಡೆಯುತ್ತಿರುವುದು

ಮೈಸೂರು, ಅ. 17 (ಆರ್‌ಕೆ)– ಆರ್ಥಿಕವಾಗಿ ಹಿಂದುಳಿದವರಿಗೆ ಆಶ್ರಯ ಕಲ್ಪಿಸಲು ಹಿಂದಿನ ನಗರ ಅಭಿವೃದ್ಧಿ ವಿಶ್ವಸ್ತ ಮಂಡಳಿ (ಸಿಐಟಿಬಿ) ಯಿಂದ ಮೈಸೂರಿನ ವಿವಿಧೆಡೆ ನಿರ್ಮಿಸಿರುವ ಎಲ್‌ಐಜಿ (ಲೋಯರ್ ಇನ್‌ಕಮ್ ಗ್ರೂಪ್) ಮನೆಗಳು ಕಂಡ–ಕಂಡವರ ಪಾಲಾಗಿವೆ.

ಮೈಸೂರಿನ ಹೆಬ್ಬಾಳು 1ನೇ ಹಂತದ ಸಿಐಟಿಬಿ ಕಲ್ಯಾಣ ಮಂಟಪದ ಎದುರಿನ ಬಡಾವಣೆಯಲ್ಲಿರುವ 21 ಎಲ್‌ಐಜಿ ಮನೆಗಳಲ್ಲಿ ಕಳೆದ 32 ವರ್ಷಗಳಿಂದ ಅನಧಿಕೃತವಾಗಿ ಹಲವರು ವಾಸ ಮಾಡುತ್ತಿದ್ದಾರೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದ ಆಯುಕ್ತರಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಕೆ.ಆರ್. ರಕ್ಷಿತ್, ಮೈಸೂರು ನಗರದಾದ್ಯಂತ ಸಿಐಟಿಬಿ, ಮುಡಾದಿಂದ ನಿರ್ಮಾಣವಾಗಿರುವ ಮನೆಗಳು, ಕಟ್ಟಡಗಳು, ವಸತಿ ಬಡಾವಣೆಗಳ ನಿವೇಶನ ಹಾಗೂ ವಾಣಿಜ್ಯ ಸಮುಚ್ಚಯಗಳ ಒತ್ತುವರಿ ಇಲ್ಲವೇ ಅತಿಕ್ರಮಿಸಿ ಅನಧಿಕೃತವಾಗಿ ಅನುಭೋಗದಲ್ಲಿರುವವರನ್ನು ತೆರವುಗೊಳಿಸಿ ಪ್ರಾಧಿಕಾರದ ಆಸ್ತಿ ಸಂರಕ್ಷಿಸುವ ಕಾರ್ಯಕ್ಕೆ ಕೈ ಹಾಕಿದ್ದಾರೆ.

ಈ ಸಂಬಂಧ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಎಲ್ಲೆಲ್ಲಿ ಪ್ರಾಧಿಕಾರದ ಆಸ್ತಿಗಳು ಒತ್ತುವರಿಯಾಗಿವೆ, ಕಬಳಿಕೆ ಆಗಿವೆ ಎಂಬುದರ ಮಾಹಿತಿಯೊಂದಿಗೆ ಚರ್ಚಿಸುವಂತೆ ಎಂಡಿಎ ಕಾರ್ಯದರ್ಶಿ ಜಾನ್‌ಸನ್ ಅವರಿಗೆ ಸೂಚನೆ ನೀಡಿದ್ದ ರಕ್ಷಿತ್ ಅವರು ಖಚಿತ ಮಾಹಿತಿ ಮೇರೆಗೆ ಅನಧಿಕೃತವಾಗಿ ವಾಸವಿರುವ ಹೆಬ್ಬಾಳು ಎಲ್‌ಐಜಿ ಮನೆಗಳಿಗೆ ನೋಟಿಸ್ ನೀಡಿ ತೆರವುಗೊಳಿಸುವಂತೆ ಸೂಚನೆ ನೀಡಿದ್ದರು. ಅದರನ್ವಯ ಪಾಲಿಕೆ ವಲಯ ಕಚೇರಿ–4ರ ವಿಶೇಷ ತಹಶೀಲ್ದಾರ್ ಎಸ್.ಎನ್. ನರಗುಂದ ಅಂತಿಮ ತಿಳುವಳಿಕೆ ಪತ್ರಗಳನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಾದ ಟಿ. ಮಂಜುನಾಥ್ ಹಾಗೂ ಮಹದೇವಸ್ವಾಮಿ ಅವರ ಮೂಲಕ ಅನಧಿಕೃತವಾಗಿ ಸ್ವಾಧೀನದಲ್ಲಿರುವ ಹೆಬ್ಬಾಳು 1ನೇ ಹಂತದ 21 ಎಲ್‌ಐಜಿ ಮನೆಯವರಿಗೆ ನಿನ್ನೆ (ಅ. 16) ತಲುಪಿಸಿದ್ದಾರೆ.

1988–89ರ ಅವಧಿಯಲ್ಲಿ ಅಂದಿನ ಸಿಐಟಿಬಿ (ಈಗಿನ ಎಂಡಿಎ) ಯಿಂದ ಹೆಬ್ಬಾಳು 1ನೇ ಹಂತದಲ್ಲಿ ಸುಮಾರು 50ಕ್ಕೂ ಹೆಚ್ಚು ಎಲ್‌ಐಜಿ ಮನೆಗಳನ್ನು ಬಡವರಿಗಾಗಿ ನಿರ್ಮಿಸಲಾಗಿತ್ತು. ನಂತರ ಕಾನೂನು ಬದ್ಧವಾಗಿ ಅರ್ಜಿಗಳನ್ನು ಕರೆದು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿತ್ತಾದರೂ ಉಳಿದ ಮನೆಗಳು ಖಾಲಿ ಬಿದ್ದಿದ್ದವು. ಈ ಅವಕಾಶವನ್ನು ಬಳಸಿಕೊಂಡ ಕೆಲವರು ಅನಧಿಕೃತವಾಗಿ ಸ್ವಾಧೀನಾನುಭವದಲ್ಲಿ ಇದ್ದರು. ರಾಜಕೀಯ ವ್ಯಕ್ತಿಗಳ ಕೃಪಾಕಟಾಕ್ಷದಿಂದಾಗಿ ಮುಡಾ ಅಧಿಕಾರಿಗಳು ತೆರವುಗೊಳಿಸಲೆತ್ನಿಸಿದರಾದರೂ ಲೆಕ್ಕಿಸದೇ ವಾಸಮಾಡುತ್ತಿದ್ದರಲ್ಲದೇ ಇನ್ನೂ ಕೆಲವರು ಎಲ್‌ಐಜಿ ಮನೆಗಳನ್ನು ಬಾಡಿಗೆಗೆ, ಭೋಗ್ಯಕ್ಕೆ ನೀಡಿ, ಪ್ರತಿ ತಿಂಗಳು ಹಣ ವಸೂಲಿ ಮಾಡುತ್ತಿದ್ದಾರೆ.

ಸುಮಾರು 32 ವರ್ಷಗಳಿಂದಲೂ ಪ್ರಾಧಿಕಾರದ ಮನೆಗಳಲ್ಲಿ ಅನಧಿಕೃತವಾಗಿ ವಾಸವಿರುವುದು ತಿಳಿದಿದ್ದರೂ ಮುಡಾ ಅಧಿಕಾರಿಗಳು ತಮ್ಮದೇ ಆಸ್ತಿ ಸಂರಕ್ಷಿಸುವ ಗೋಜಿಗೆ ಹೋಗದೇ ಕಣ್ಣು ಮುಚ್ಚಿ ಕುಳಿತಿರುವುದು ಅಚ್ಚರಿ ಮಾತ್ರವಲ್ಲ ಕುತೂಹಲ ಮೂಡಿಸಿದೆ. ಅಲ್ಲದೇ ಈ ಮನೆಗಳಿಗೆ ವಿದ್ಯುತ್, ನೀರು, ಒಳಚರಂಡಿ ಸಂಪರ್ಕ, ರಸ್ತೆ, ಸ್ವಚ್ಛತೆ ಸೇರಿದಂತೆ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸುತ್ತಿರುವುದು ಅಚ್ಚರಿಗೆ ಕಾರಣವಾಗಿದೆ. ಒಂದು ವೇಳೆ ಅಧಿಕಾರಿಗಳಾಗಲೀ ಅಥವಾ ಪ್ರಾಧಿಕಾರದ ಅಧ್ಯಕ್ಷರಾಗಲೀ ತಮ್ಮ ಆಸ್ತಿ ಬೇರೆಯವರ ಸ್ವಾಧೀನದಲ್ಲಿ ಹೀಗೆ ಇದ್ದಿದ್ದರೆ ಬಿಡುತ್ತಿದ್ದರೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ಕಡೆಗೂ ಕಮಿಷ್ನರ್ ನಿರ್ದೇಶನದ ಮೇರೆಗೆ 21 ಮನೆಗಳಲ್ಲಿ ಅನಧಿಕೃತವಾಗಿ ವಾಸವಿರುವವರಿಗೆ ಅಂತಿಮ ನೋಟಿಸ್ ನೀಡುವ ಮೂಲಕ ತೆರವುಗೊಳಿಸುವ ಪ್ರಕ್ರಿಯೆ ಆರಂಭವಾಗಿರುವುದಕ್ಕೆ ಪ್ರಶಂಸೆ ವ್ಯಕ್ತವಾಗಿದೆ. ಅಲ್ಲದೇ ಪ್ರಾಧಿಕಾರದ ಆಸ್ತಿ ಸಂರಕ್ಷಣೆಗೆ ಮುಂದಾಗಿರುವ ಅಧಿಕಾರಿಗಳ ಕ್ರಮವನ್ನು ಸಾರ್ವಜನಿಕರು ಸ್ವಾಗತಿಸಿದ್ದಾರೆ. ಅಂತಹ ಮನೆಗಳನ್ನು ಅರ್ಹ ಬಡಕುಟುಂಬಗಳಿಗೆ ಅಧಿಕೃತವಾಗಿ ಹಂಚಿದರೆ ಪ್ರಾಧಿಕಾರಕ್ಕೂ ಆದಾಯ ಬರುವುದಲ್ಲದೇ ಅಗತ್ಯವಿರುವವರಿಗೂ ಆಶ್ರಯವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡೀಸೆಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ತೆಲುಸು ಕದ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪ್ರೇಮಿಗಳ ಗಮನಕ್ಕೆ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.00ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಮ.1.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಂಡಿಎ ಪ್ರತ್ಯೇಕ ಪೊಲೀಸ್ ಪಡೆ ಹೊಂದುವ ಉದ್ದೇಶ

ಪ್ರಾಧಿಕಾರದ ಆಸ್ತಿ ಸಂರಕ್ಷಿಸಲು ಅಗತ್ಯವಿರುವ ಭದ್ರತೆಗೆ ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್ ಪ್ರಸ್ತಾವನೆ

ಮೈಸೂರು, ಅ. 17 (ಆರ್‌ಕೆ)– ಹಲವು ವರ್ಷಗಳಿಂದ ನಿದ್ರಾವಸ್ಥೆಯಲ್ಲಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ವಾಗಿ ನವರೂಪ ತಾಳಿದ್ದು, ತನ್ನ ಕಾರ್ಯ ವೈಖರಿಯಲ್ಲೂ ಅಮೂಲಾಗ್ರ ಬದಲಾವಣೆ ತಂದಿದೆ. ಅದರಂತೆ ಎಂಡಿಎ ಅಧಿಕಾರಿಗಳು ಅತ್ಯುತ್ಸಾಹದಿಂದ ಪ್ರಾಧಿಕಾರದ ಆಸ್ತಿ ಸಂರಕ್ಷಣೆಗೆ ಮುಂದಾಗಿದ್ದಾರೆ.

ಅತಿಕ್ರಮ ಪ್ರವೇಶ ಹಾಗೂ ಅನಧಿಕೃತವಾಗಿ ಒತ್ತುವರಿ ಮಾಡಿ ಅನುಭೋಗದಲ್ಲಿರುವವರನ್ನು ತೆರವುಗೊಳಿಸಲು ಪೊಲೀಸ್ ಭದ್ರತೆ ಅಗತ್ಯವಿದೆ. ಆದರೆ, ಭದ್ರತೆ ಕೋರಿದಾಗ ತಮಗೆ ಬೇರೆ ಭದ್ರತಾ ಕರ್ತವ್ಯದ ಒತ್ತಡವಿರುವುದರಿಂದ ನೀವು ಕೋರಿದ ದಿನದಂದು ಭದ್ರತೆ ಒದಗಿಸಲು ಆಗದು ಎಂಬ ಪ್ರತಿಕ್ರಿಯೆ ಪೊಲೀಸ್ ಇಲಾಖೆಯಿಂದ ಮಾಮೂಲಾಗಿದೆ. ಹಾಗಾಗಿ ಸರಿಯಾದ ಸಮಯದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ವಿಷಯವಾಗಿ ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್ ಅವರು ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರೊಂದಿಗೆ ಚರ್ಚೆ ನಡೆಸಿದ್ದಾರೆ.

ಒತ್ತುವರಿ ತೆರವು ಕಾರ್ಯಾಚರಣೆಗೆ ಭದ್ರತೆ ಒದಗಿಸಲೆಂದೇ ಪ್ರತ್ಯೇಕ ಪೊಲೀಸ್ ಭದ್ರತಾ ಪಡೆಯನ್ನು ಎಂಡಿಎ ಹೊಂದುವುದು ಅಗತ್ಯವಾಗಿರುವುದರಿಂದ ಈ ಕುರಿತು ವಿವರವಾದ ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ರಕ್ಷಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಓರ್ವ ಅಸಿಸ್ಟೆಂಟ್ ಕಮಿಷ್ನರ್ ಆಫ್ ಪೊಲೀಸ್ (ಎಸಿಪಿ) ಮಟ್ಟದ ಅಧಿಕಾರಿ, ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್ (ಪಿಐ), ಮೂವರು ಸಬ್‌ಇನ್ಸ್‌ಪೆಕ್ಟರ್ (ಪಿಎಸ್‌ಐ), ನಾಲ್ವರು ಸಹಾಯಕ ಸಬ್‌ಇನ್ಸ್‌ಪೆಕ್ಟರ್ (ಎಎಸ್‌ಐ) ಒಳಗೊಂಡಂತೆ 25 ಮಂದಿ ಸಿಬ್ಬಂದಿಗಳನ್ನೊಳಗೊಂಡ ಪ್ರತ್ಯೇಕ ಪೊಲೀಸ್ ಭದ್ರತಾ ಪಡೆ ಅಗತ್ಯವಿದೆ ಎಂದು ಪ್ರಸ್ತಾವನೆ ಸಲ್ಲಿಸಲು ಮುಂದಾಗಿದ್ದಾರೆ.

ಪ್ರಸ್ತಾವನೆಯನ್ನು ಎಂಡಿಎ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ಬಳಿಕ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿಕೊಡುವರು. ಗೃಹ ಇಲಾಖೆಯಿಂದ ಅನುಮತಿ ಪಡೆದ ಬಳಿಕ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಮಂಜೂರು ಮಾಡಿಸಿಕೊಂಡು ಪ್ರಾಧಿಕಾರದಲ್ಲೇ ಅವರಿಗೆ ಕಚೇರಿ ಒದಗಿಸಿ ಟಾಸ್ಕ್ ಫೋರ್ಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಒತ್ತುವರಿ ತೆರವು ಕಾರ್ಯಾಚರಣೆಗೆ ಪೊಲೀಸ್ ಬಂದೋಬಸ್ತ್‌ನಲ್ಲಿ ಪ್ರಾಧಿಕಾರದ ಆಸ್ತಿಗಳನ್ನು ರಕ್ಷಿಸಲಾಗುವುದು ಎಂದು ಆಯುಕ್ತ ರಕ್ಷಿತ್ ತಿಳಿಸಿದ್ದಾರೆ.

ಟಾಸ್ಕ್‌ಫೋರ್ಸ್ ರಚನೆ: ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಸ್ತಿಗಳನ್ನು ರಕ್ಷಿಸಲು ಇದೀಗ 3 ಟಾಸ್ಕ್ ಫೋರ್ಸ್‌ಗಳನ್ನು ರಚಿಸಲಾಗಿದೆ.

ಈ ಬಗ್ಗೆ ಪ್ರಾಧಿಕಾರದ ಆಯುಕ್ತ ಕೆ. ಆರ್. ರಕ್ಷಿತ್ ಅವರು ಅಕ್ಟೋಬರ್ 13 ರಂದು ಆದೇಶ ಹೊರಡಿಸಿದ್ದಾರೆ. ಅತಿಕ್ರಮ ಪ್ರವೇಶ, ಅನಧಿಕೃತ ಕಟ್ಟಡಗಳ ನಿರ್ಮಾಣದಂತಹ ಪ್ರಕರಣಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆ.

ಎಂಡಿಎ ಕಾರ್ಯಪಾಲಕ ಅಭಿಯಂತರ ಎಂ.ಎಸ್. ಮಹೇಶ್ ನೇತೃತ್ವದ ಟಾಸ್ಕ್ ಫೋರ್ಸ್–1 ರಲ್ಲಿ ವಿಶೇಷ ತಹಶೀಲ್ದಾರ್ ಕೆ.ವಿ. ರಾಜಶೇಖರ್, ಕಛೇರಿ ವ್ಯವಸ್ಥಾಪಕ ಎನ್.ಕೆ. ಭರತ್ ಕುಮಾರ್, ರಾಜಸ್ವ ನಿರೀಕ್ಷಕ ಟಿ. ಮಂಜುನಾಥ್, ಭೂಮಾಪಕ ಪಿ. ರಘು ಹಾಗೂ ದ್ವಿತೀಯ ದರ್ಜೆ ಸಹಾಯಕ ಟಿ.ಎಂ. ಸಚಿನ್ ಅವರಿದ್ದಾರೆ.

ಕಾರ್ಯಪಾಲಕ ಅಭಿಯಂತರ ಎ. ನಾಗೇಶ್ ಮೇಲುಸ್ತುವಾರಿಯ ಟಾಸ್ಕ್ ಫೋರ್ಸ್–2 ರಲ್ಲಿ ವಿಶೇಷ ತಹಶೀಲ್ದಾರ್ ರವಿಪ್ರಸಾದ್, ಪ್ರಥಮ ದರ್ಜೆ ಸಹಾಯಕರಾದ ಎಸ್. ಗಂಗಾಧರ್, ಕೆ.ಸಿ. ಉಮೇಶ್, ರಾಜಸ್ವ ನಿರೀಕ್ಷಕ ಮಹದೇಶ್ ಸ್ವಾಮಿ ಹಾಗೂ ಭೂಮಾಪಕ ಕೆಂಪಣ್ಣ ಅವರಿದ್ದಾರೆ. ವಿಶೇಷ ತಹಶೀಲ್ದಾರ್ ಎಸ್. ಎನ್. ನರಗುಂದ ನೇತೃತ್ವದ ಟಾಸ್ಕ್ ಫೋರ್ಸ್–3 ರಲ್ಲಿ ಕಛೇರಿ ವ್ಯವಸ್ಥಾಪಕಿ ಬಿ.ಎಂ. ಶೃತಿ, ಕೆ.ಸಿ. ಉಮೇಶ್ ಮತ್ತು ಟಿ.ಎಂ. ಸಚಿನ್ ಅವರುಗಳಿದ್ದಾರೆ.

ಟಾಸ್ಕ್ ಫೋರ್ಸ್ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಪ್ರಾಧಿಕಾರದ ಆಸ್ತಿಯನ್ನು ಅತಿಕ್ರಮಿಸಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವ, ಅನುಭವದಲ್ಲಿರುವ ಸ್ಥಳಗಳನ್ನು ಆಯಾ ವಲಯಾಧಿಕಾರಿಗಳು ಭೌತಿಕವಾಗಿ ಗುರುತಿಸಿ, ಒತ್ತುವರಿಯಾಗಿರುವುದು ದೃಢಪಟ್ಟ ನಂತರ ತೆರವು ಕಾರ್ಯಾಚರಣೆ ಕೈಗೊಂಡು ಸ್ಥಳದಲ್ಲಿ ಫಲಕ ಮತ್ತು ಆಸ್ತಿಗೆ ತಂತಿ ಬೇಲಿ ಅಳವಡಿಸಿ ರಕ್ಷಿಸಬೇಕಾಗಿದೆ.

ಅಂಗಡಿ–ಮುಂಗಟ್ಟು, ಉದ್ದಿಮೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಬಳಕೆಗೆ ಆದೇಶ

●ತಪ್ಪಿದರೆ ರಹದಾರಿ ರದ್ದು ಮಾಡಿ, ಉದ್ದಿಮೆ ಬಂದ್ ●ಮೈಸೂರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಎಚ್ಚರಿಕೆ


ತನ್ವೀರ್ ಆಸೀಫ್

ಮೈಸೂರು, ಅ.17(ಬಿಎಲ್‌ಯು)– ಮೈಸೂರು ನಗರ ವ್ಯಾಪ್ತಿಯಲ್ಲಿರುವ ಉದ್ದಿಮೆದಾರರು ಅಂಗಡಿಗಳ ನಾಮಫಲಕ ಗಳಲ್ಲಿ ಶೇಕಡ 60ರಷ್ಟು ಕನ್ನಡ ಭಾಷೆ ಪ್ರದರ್ಶಿಸದಿದ್ದಲ್ಲಿ ಅವರ ಉದ್ದಿಮೆ ಪರವಾನಗಿ ರದ್ದುಪಡಿಸಿ, ಉದ್ದಿಮೆಯನ್ನು ಮುಚ್ಚಿಸಬೇಕಾಗುತ್ತದೆ ಎಂದು ಮೈಸೂರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಎಚ್ಚರಿಸಿದ್ದಾರೆ.

ನಾಮಫಲಕಗಳ ಮೇಲ್ಭಾಗದಲ್ಲಿ ಕಡ್ಡಾಯವಾಗಿ ಶೇಕಡ 60ರಷ್ಟು ಕನ್ನಡ ಭಾಷೆ ಬಳಸಬೇಕು, ಕೆಳಭಾಗದಲ್ಲಿ ಉಳಿದ ಶೇಕಡ 40ರಷ್ಟು ಆಂಗ್ಲಭಾಷೆ ಬಳಕೆ ಮಾಡಬಹುದು ಎಂದು ನಗರ ಪಾಲಿಕೆ ಬಹಳಷ್ಟು ತಿಳುವಳಿಕೆ ನೀಡಿದೆ ಎಂದು ಹೇಳಿದ್ದಾರೆ. ಆದರೆ ಬಹಳಷ್ಟು ಉದ್ದಿಮೆದಾರರು ನಾಮಫಲಕಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಈಗ ಉದ್ದಿಮೆದಾರರು ನಾಮಫಲಕದ ಮೇಲ್ಭಾಗದಲ್ಲಿ ಶೇಕಡ 60ರಷ್ಟು ಕನ್ನಡ ಭಾಷೆ ಬಳಸಬೇಕು. ಇಲ್ಲದಿದ್ದರೆ ಅವರ ಉದ್ದಿಮೆಯ ಪರವಾನಗಿ ರದ್ದುಪಡಿಸಿ, ಉದ್ದಿಮೆ ಮುಚ್ಚಿಸಬೇಕಾಗುತ್ತದೆ ಎಂದು ಷೇಕ್ ತನ್ವೀರ್ ಆಸೀಫ್ ಎಚ್ಚರಿಕೆ ನೀಡಿದ್ದಾರೆ.

ಭಾಷಾಭಿಮಾನಕ್ಕೆ ತಮಿಳುನಾಡು, ಕೇರಳ ಮಾದರಿ

ರಾಜಧಾನಿ ಚೆನ್ನೈ ಸೇರಿದಂತೆ ಇಡೀ ತಮಿಳುನಾಡು ಸುತ್ತಿದರೆ ನಾಮಫಲಕ, ಮೈಲಿಗಲ್ಲು ಸೇರಿದಂತೆ ಎಲ್ಲಾ ಕಡೆ ತಮಿಳುನಾಡು ಭಾಷೆ ಬಿಟ್ಟು ಬೇರೆ ಭಾಷೆ ಕಾಣಿಸುವುದಿಲ್ಲ. ನೆರೆಯ ಕೇರಳದಲ್ಲಿ ಕೂಡ ಇದೇ ಪರಿಸ್ಥಿತಿ. ಮಲೆಯಾಳಂ ಬಿಟ್ಟು ಬೇರೆ ಭಾಷೆಯ ಬಳಕೆ ಇರುವುದಿಲ್ಲ. ಮುಸ್ಲಿಂ ಸಮುದಾಯದವರಿಗೆ ಉರ್ದು ಮಾತೃ ಭಾಷೆಯಾದರೂ ಆಯಾ ರಾಜ್ಯದ ಮೂಲ ಭಾಷೆಯಲ್ಲೇ ಮಾತನಾಡುತ್ತಾರೆ. ಅಷ್ಟರ ಮಟ್ಟಿಗೆ ಕೇರಳ ಮತ್ತು ತಮಿಳುನಾಡಿನಲ್ಲಿ ಭಾಷಾ ಪ್ರೇಮವಿದೆ. ಆದರೆ ನಮ್ಮ ಕರ್ನಾಟಕದಲ್ಲಿ ನಾಮಫಲಕ ಸೇರಿದಂತೆ ಎಲ್ಲಾ ಕಡೆ ಕನ್ನಡ ಭಾಷೆ ನಾಪತ್ತೆಯಾಗುತ್ತಿದೆ. ಎಲ್ಲೆಲ್ಲೂ ಇಂಗ್ಲಿಷ್ ರಾರಾಜಿಸುತ್ತಿದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಂತೂ ದಿನ ಕಳೆದಂತೆ ಕನ್ನಡ ಮರೆಯಾಗಿ ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಗಳು ಆವರಿಸಿಕೊಳ್ಳುತ್ತಿವೆ.

ನಾಮಫಲಕಗಳಲ್ಲಿ ಕನ್ನಡ ಬಳಕೆಗೆ ತಾಕೀತು ಮಾಡುತ್ತೇವೆ



ಅಂಗಡಿ–ಮುಂಗಟ್ಟು, ಹೋಟೆಲ್, ಬೇಕರಿ ಸೇರಿದಂತೆ ಎಲ್ಲಾ ಉದ್ದಿಮೆಗಳ ನಾಮಫಲಕಗಳಲ್ಲಿ ಶೇಕಡ 60 ರಷ್ಟು ಕನ್ನಡ ಭಾಷೆ ಬಳಕೆ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿ ಒಂದೂವರೆ ವರ್ಷವಾಯಿತು. ಆದರೆ ಇದು ಕಟ್ಟುನಿಟ್ಟಾಗಿ ಜಾರಿಗೊಂಡಿರಲಿಲ್ಲ. ಆದರೆ ಈಗ ನಗರ ಪಾಲಿಕೆ ಆಯುಕ್ತರು ಈ ಸಂಬಂಧ ಕಠಿಣ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಮೈಸೂರಿನಲ್ಲಿ ಫ್ಯಾಮಿಲಿ ರೆಸ್ಟೋರೆಂಟ್‌ಗಳು 200 ಇದೆ. ಬೇಕರಿ, ಫಾಸ್ಟ್‌ಫುಡ್, ಟಿಫಾನೀಸ್ ಸೇರಿದಂತೆ ಇತರೆ ತಿಂಡಿ–ತಿನಿಸುಗಳ ಅಂಗಡಿಗಳು 1,500ರಷ್ಟಿವೆ. ಇವರೆಲ್ಲಾ ಸದಸ್ಯರಾಗಿರುವ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ನಾಮಫಲಕದಲ್ಲಿ ಶೇಕಡ 60ರಷ್ಟು ಕನ್ನಡ ಬಳಸಿ, ಕೆಳಗೆ ಬೇಕಿದ್ದರೆ ಶೇಕಡ 40ರಷ್ಟು ಇಂಗ್ಲಿಷ್ ಬಳಸಿ ಎಂದು ಇಂದೇ ಸಲಹೆ ನೀಡುತ್ತೇವೆ. ಡಿಸೆಂಬರ್ 23ರಂದು ಹೋಟೆಲ್ ಮಾಲೀಕರ ಸಭೆ ಇದ್ದು, ಆ ವೇಳೆ ನಾಮಫಲಕಗಳಲ್ಲಿ ಕನ್ನಡ ಭಾಷೆ ಬಳಕೆ ಬಗ್ಗೆ ತಾಕೀತು ಮಾಡುತ್ತೇವೆ.

– **ನಾರಾಯಣಗೌಡ,** ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಇಂದು ಜನ ಸಂಪರ್ಕ ಸಭೆ

ಮೈಸೂರು,ಅ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಚ್.ಡಿ.ಕೋಟೆಯ ಉಪ ವಿಭಾಗದ ಕಛೇರಿ ಅವರಣದಲ್ಲಿ ಅ.18 ರಂದು ಮಧ್ಯಾಹ್ನ 2 ಗಂಟೆಗೆ ಹೆಚ್.ಡಿ. ಕೋಟೆ ಜನ ಸಂಪರ್ಕ ಸಭೆಯನ್ನು ಹಮ್ಮಿಕೊಂಡಿರುವುದರಿಂದ ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಹೆಚ್.ಡಿ.ಕೋಟೆಯ ಚೆಸ್ಕಾಂ ಕಾರ್ಯ ಮತ್ತು ಪಾಲನೇ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾತಿ ಗಣತಿಗೆ ಭಾಗಿಯಾಗದವರು ದೇಶದ್ರೋಹಿಗಳು: ಬಿ.ಕೆ. ಹರಿಪ್ರಸಾದ್ ಕಿಡಿ


ಹರಿಪ್ರಸಾದ್

ಬೆಂಗಳೂರು, ಅ.17– ರಾಜ್ಯದಲ್ಲಿ ನಡೆಯುತ್ತಿರುವ ಜಾತಿ ಜನಗಣತಿಗೆ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ಉದ್ಯಮಿ ನಾರಾಯಣ ಮೂರ್ತಿ ಮತ್ತು ಸುಧಾಮೂರ್ತಿ ದಂಪತಿ ತಾವು ಮೇಲ್ಜಾತಿಯವರು ಎಂದು ಮಾಹಿತಿ ಕೊಡಲು ನಿರಾಕರಿಸಿದ್ದಾರೆ. ಜಾತಿ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎನ್ನುವವರು ಸಂವಿಧಾನ ವಿರೋಧಿಗಳು ಮತ್ತು ದೇಶದ್ರೋಹಿಗಳು ಎಂದು ಕಾಂಗ್ರೆಸ್ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಕಿಡಿಕಾರಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೇಲ್ಜಾತಿಯವರಿಗೆ ಸಮೀಕ್ಷೆ (ಜಾತಿ ಗಣತಿ) ಬೇಕಾಗಿಲ್ಲ. ಸಿಎಂ ಸಿದ್ದರಾಮಯ್ಯನವರು ಬಹಳ ಧೈರ್ಯ ಮಾಡಿ ಈ ಸಮೀಕ್ಷೆಯನ್ನು ಮಾಡುತ್ತಿದ್ದಾರೆ. ಆದರೆ, ಸಮೀಕ್ಷೆಯಲ್ಲಿ ಭಾಗಿಯಾಗಲ್ಲ ಎಂದರೆ ಅವರು ಸಂವಿಧಾನ ವಿರೋಧಿಗಳು, ದೇಶ ದ್ರೋಹಿಗಳು ಅಂತಾನೆ ಹೇಳಬೇಕಾಗುತ್ತೆ ಎಂದು ಹೇಳಿದರು.

ಸುಧಾಮೂರ್ತಿ ದಂಪತಿ ಸಮೀಕ್ಷೆಗೆ ಮಾಹಿತಿ ನೀಡದ ಬಗ್ಗೆ ಮಾತನಾಡಿ, ಅವರೆಲ್ಲಾ ತಂತ್ರಜ್ಞಾನ ದಿಗ್ಗಜರು ಅನಿಸಿಕೊಂಡವರು. ಸರ್ಕಾರದಿಂದ 1 ರೂಪಾಯಿಗೆ ಭೂಮಿ ಪಡೆದುಕೊಂಡಿರುತ್ತಾರೆ. ಸುಮಾರು 35 ಸಾವಿರ ಕೋಟಿ (ಪರೋಕ್ಷವಾಗಿ) ತೆರಿಗೆ ಕಟ್ಟುವವರು ಇದ್ದಾರೆ. ಆದರೆ, ನಿಜವಾಗಿಯೂ ತೆರಿಗೆ ಕಟ್ಟುವುದರಿಂದ ತಪ್ಪಿಸಿಕೊಳ್ಳಲು ಸಮೀಕ್ಷೆಯಲ್ಲಿ ಭಾಗಿಯಾಗುತ್ತಿಲ್ಲ ಎಂದು ನೇರ ಆರೋಪ ಮಾಡಿದರು. ಇದರ ಮೂಲಕ, ಈ ಸಮೀಕ್ಷೆ ಮತ್ತು ಹಿಂದುಳಿದ ವರ್ಗಗಳ ಮೀಸಲಾತಿ ಕುರಿತ ದತ್ತಾಂಶವು ತಮ್ಮ ತೆರಿಗೆ ಮತ್ತು ಆಸ್ತಿಯ ವಿಷಯಗಳನ್ನು ಬಹಿರಂಗಪಡಿಸುತ್ತದೆ ಎಂಬ ಭಯ ಅವರಲ್ಲಿದೆ ಎಂದು ಪರೋಕ್ಷವಾಗಿ ಟೀಕಿಸಿದರು.

ಈ ವೇಳೆ, ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿಷೇಧ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆಗಳನ್ನು ಹರಿಪ್ರಸಾದ್ ಸಂಪೂರ್ಣವಾಗಿ ಬೆಂಬಲಿಸಿದರು. ಪ್ರಿಯಾಂಕ್‌ಖರ್ಗೆಯವರು ಹೇಳಿರುವುದು ಸರಿಯಾಗಿದೆ. ಆರ್‌ಎಸ್‌ಎಸ್ ರಿಜಿಸ್ಟರ್ (ನೋಂದಾಯಿತ) ಸಂಸ್ಥೆಯೇ ಅಲ್ಲ. ಅದರ ಚಟುವಟಿಕೆಗಳಲ್ಲಿ ಭಾಗಿಯಾಗುವ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು. ಆರ್‌ಎಸ್‌ಎಸ್ ಇದ್ದಿಲು ಇದ್ದ ಹಾಗೆ, ಆದರೆ ಅದು ಅಶೋಕ್, ಅಶ್ವತ್ಥನಾರಾಯಣ ಕಣ್ಣಿಗೆ ವಜ್ರದಂತೆ ಕಾಣಿಸುತ್ತದೆ ಎಂದು ವ್ಯಂಗ್ಯವಾಡಿದರು.

ಇನ್‌ಫೋಸಿಸ್ ನಾರಾಯಣ ಮೂರ್ತಿ, ಸುಧಾಮೂರ್ತಿ ಬೃಹಸ್ಪತಿಗಳೇ...

●ಜಾತಿ ಸಮೀಕ್ಷೆ ಮಾಹಿತಿ ನೀಡಲು ನಿರಾಕರಿಸಿದ ಬಗ್ಗೆ ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಡುಕಿನ ಪ್ರಶ್ನೆ ●ಅಜ್ಞಾನವೊ, ಉದ್ದೇಶ ಪೂರ್ವಕವೊ ಗೊತ್ತಿಲ್ಲ ●ಹಣ ಬರದಿದ್ದರೆ ಗುತ್ತಿಗೆದಾರರು ಕೋರ್ಟ್‌ಗೆ ಹೋಗಲಿ ●ಮಗನ ಹೇಳಿಕೆಗೆ ಸಿದ್ದರಾಮಯ್ಯ ನಕಾರ

ಮೈಸೂರು, ಅ.17(ಬಿಎಲ್‌ಯು)– ಜಾತಿ ಸಮೀಕ್ಷೆಗೆ ಮಾಹಿತಿ ನೀಡಲು ನಿರಾಕರಿಸಿರುವ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿಯವರು ಬೃಹಸ್ಪತಿಗಳೇ? ಎಂದು ಮುಖ್ಯಮಂತ್ರಿ ಸಿದ್ದ ರಾಮಯ್ಯ ಸಿಡುಕಿನಿಂದಲೇ ಪ್ರಶ್ನಿಸಿದ್ದಾರೆ.


ಮೈಸೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುತ್ತಿರುವುದು

● ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ, ಭ್ರಾಂತಿಯೂ ಇಲ್ಲ. ಕ್ರಾಂತಿ... ಕ್ರಾಂತಿ... ಎಂದು ಹೇಳುವರಿಗೆ ಕೆಲಸ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧಿಗಳಿಗೆ ತಿರುಗೇಟು ನೀಡಿದರು.

● ಅವರು ಸುಮ್ಮನೆ ಏನೇನೊ ಹೇಳುತ್ತಾರೆ. ಮಾಧ್ಯಮದವರು ಅವರ ಹೇಳಿಕೆಗೆ ಪ್ರಚಾರ ನೀಡುವುದನ್ನು ನಿಲ್ಲಿಸಲಿ, ಅಸಹಜವಾಗಿಯೇ ಅವರು ಇಂತಹ ಹೇಳಿಕೆ ನೀಡುವುದನ್ನು ನಿಲ್ಲಿಸುತ್ತಾರೆ ಎಂದು ಹೇಳಿದರು.

● ಬಿಹಾರದ ಚುನಾವಣಾ ಫಲಿತಾಂಶ ಕರ್ನಾಟಕದ ಮೇಲೆ ಯಾವುದೇ ರೀತಿಯ ಪರಿಣಾಮ ಉಂಟು ಮಾಡುವುದಿಲ್ಲ. ಬಿಹಾರದಲ್ಲಿ ಕಾಂಗ್ರೆಸ್ ಮೈತ್ರಿ ಕೂಟ ಗೆಲ್ಲುವ ಸಾಧ್ಯತೆ ಇದೆ. ನನ್ನ ಪ್ರಚಾರದ ಅಗತ್ಯವಿದ್ದು, ಆಹ್ವಾನ ನೀಡಿದರೆ ಹೋಗುತ್ತೇನೆ ಎಂದು ಸ್ಪಷ್ಟನೆ ನೀಡಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದು ಹಿಂದುಳಿದ ವರ್ಗಗಳ ಜಾತಿ ಸಮೀಕ್ಷೆಯಲ್ಲ, ಎಲ್ಲಾ ಜಾತಿಗಳ ಸಮೀಕ್ಷೆಯಾಗಿದೆ. ಇದನ್ನು ಅವರು ಅರ್ಥಮಾಡಿಕೊಳ್ಳದಿದ್ದರೆ ಏನು ಮಾಡುವುದು ಎಂದು ಮರು ಪ್ರಶ್ನಿಸಿ, ಸಮೀಕ್ಷೆ ವೇಳೆ ಮಾಹಿತಿ ನೀಡದ ಅವರ ನಡವಳಿಕೆ ಅಜ್ಞಾನವೋ, ಉದ್ದೇಶ ಪೂರ್ವಕವೋ ಅವರಿಗೇ ಗೊತ್ತು ಎಂದು ಹೇಳಿದರು.

ಮೇಲ್ಜಾತಿಯವರು ಗೃಹಜ್ಯೋತಿ ಯೋಜನೆಯಲ್ಲಿ ಹಣ ಪಡೆಯುತ್ತಿಲ್ಲವೇ, ಶಕ್ತಿ ಯೋಜನೆಯಡಿ ಮೇಲ್ಜಾತಿಯವರು ಉಚಿತವಾಗಿ ಬಸ್‌ನಲ್ಲಿ ಓಡಾಡುತ್ತಿಲ್ಲವೇ, ಇದು ಕೂಡ ಅದೇ ರೀತಿಯಾಗಿದ್ದು, ಎಲ್ಲಾ ಜಾತಿಯವರಿಗೂ ಮಾಡುತ್ತಿರುವ ಸಮೀಕ್ಷೆಯಾಗಿದೆ ಎಂದು ಸ್ಪಷ್ಟನೆ ನೀಡಿದರು.

ಗುತ್ತಿಗೆದಾರರು ಕೋರ್ಟ್‌ಗೋಗೋಕೇಳಿ: ಗುತ್ತಿಗೆ ಹಣ ನೀಡಲು ಕಮಿಷನ್ ಕೇಳುತ್ತಿದ್ದಾರೆ ಎಂಬ ಗುತ್ತಿಗೆದಾರರ ಸಂಘದ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಅದು ಸತ್ಯವಾಗಿದ್ದರೆ ಕೋರ್ಟ್‌ಗೆ ಹೋಗಲು ಹೇಳಿ. ಇಂತಹ ಹೇಳಿಕೆ ನೀಡುವಂತೆ ಯಾರೋ ಹೇಳಿ ಕಳುಹಿಸಿರಬಹುದು ಎಂದು ಸಿದ್ದರಾಮಯ್ಯ ಸಂಶಯ ವ್ಯಕ್ತಪಡಿಸಿದರು.

ಅವರಿಗೆ ಬೇಕಾದ ಸ್ಥಳ ಆಯ್ಕೆ ಮಾಡ್ತಾರೆ: ಗೂಗಲ್ ಎಐ ಸೇರಿದಂತೆ ಐಟಿ ಕಂಪನಿಗಳು ಬೆಂಗಳೂರು ಬಿಟ್ಟು ಆಂಧ್ರ ಪ್ರದೇಶದ ಪಾಲಾಗುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಆಯಾ ಕಂಪನಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ರಾಜ್ಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಸ್ಪಷ್ಟನೆ ನೀಡಿದರು.

ಒಂದು ಕಂಪನಿ ಬೇರೆ ರಾಜ್ಯಕ್ಕೆ ಹೋದ ಕೂಡಲೇ ಇಲ್ಲಿ ಏನೂ ಸರಿ ಇಲ್ಲ ಎಂದು ಬಿಂಬಿಸುವುದು ಸರಿಯಲ್ಲ. ಹೂಡಿಕೆ ವಿಚಾರದಲ್ಲಿ ಕರ್ನಾಟಕ ದೇಶದಲ್ಲೇ ನಂಬರ್ ಒನ್ ಆಗಿದೆ. ಹಾಗಾದರೆ ಅವರೆಲ್ಲಾ ನಮ್ಮಲ್ಲಿ ಏಕೆ ಉಳಿದುಕೊಂಡು ಎಂದು ಪ್ರಶ್ನಿಸಿದರು.

ಗೂಗಲ್ ಎಐ ಆಂಧ್ರ ಪ್ರದೇಶದ ಪಾಲಾಗಿರುವ ಬಗ್ಗೆ ಐಟಿ ಸಚಿವರು ಟ್ವೀಟ್ ಮಾಡಿರುವುದು ನನಗೆ ಗೊತ್ತಿಲ್ಲ. ಇದನ್ನು ಯಾರೋ ಸೃಷ್ಟಿ ಮಾಡಿರಬಹುದು ಎಂದು ಆರೋಪಿಸಿದರು.

ಮಗನ ಮಾತಿಗೆ ಮೌನ: ನಮ್ಮ ತಂದೆ ಪೂರ್ಣಾವಧಿವರೆಗೆ ಸಿಎಂ ಆಗಿರುತ್ತಾರೆ ಎಂಬ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಸಿದ್ದರಾಮಯ್ಯ, ಉಳಿದ ವಿಚಾರ ಅವರನ್ನೇ ಕೇಳಿ ಎಂದು ಸಲಹೆ ನೀಡಿದರು.

ವಿಜಯಪುರದಲ್ಲಿ ಕೃಷಿ ಹೊಂಡಕ್ಕೆ ಬಿದ್ದು ಮೂವರು ಮಕ್ಕಳು ಜಲ ಸಮಾಧಿ



ವಿಜಯಪುರ: ಕೃಷಿ ಹೊಂಡಕ್ಕೆ ಬಿದ್ದು ಮೂವರು ಮಕ್ಕಳು ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ವಿಜಯಪುರ ತಾಲೂಕಿನ ಮಿಂಚನಾಳ ತಾಂಡಾದಲ್ಲಿ ಅ. 16ರಂದು ನಡೆದಿದೆ.

ಮೃತರನ್ನು ಸ್ವಪ್ನಾ ರಾಜು ರಾಠೋಡ್ (10), ಶಿವಂ ರಾಜು ರಾಠೋಡ್ (8) ಹಾಗೂ ಕಾರ್ತಿಕ ಈಶ್ವರ ರಾಠೋಡ್ (8) ಎಂದು ಗುರುತಿಸಲಾಗಿದೆ. ಮಿಂಚನಾಳ ತಾಂಡಾದ ಮಾದೇವ ನಗರದ ಈ ಮೂವರು ಮಕ್ಕಳು ಮನೆಯ ಸಮೀಪದ ಹೊಲದ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮಕ್ಕಳು ತುಂಬ ಹೊತ್ತಾದರೂ ಕಾಣಿಸದೇ ಇದ್ದಾಗ ಚಪ್ಪಲಿ ಗಮನಿಸಿ, ಹೊಂಡದಲ್ಲಿ ಶೋಧ ನಡೆಸಿದ ಬಳಿಕ ಅವರು ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಈ ಪೈಕಿ ಸ್ವಪ್ನಾ, ಶಿವಂ ಒಂದೇ ಕುಟುಂಬದವರು.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮೂವರು ಮಕ್ಕಳ ಮೃತದೇಹಗಳನ್ನು ಹೊರತೆಗೆದಿದ್ದಾರೆ. ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಸಂಜೆ ಮಕ್ಕಳು ಕುರಿ ಗಳೊಂದಿಗೆ ಆಟವಾಡುತ್ತಾ ಕೃಷಿ ಹೊಂಡದ ಬಳಿ ತೆರಳಿದ್ದರು. ಆಟದ ವೇಳೆ ಕಾಲು ಜಾರಿ ಆಯ ತಪ್ಪಿ ಮೂವರು ಒಟ್ಟಿಗೆ ಕೃಷಿ ಹೊಂಡಕ್ಕೆ ಬಿದ್ದಿದ್ದಾರೆ. ಮೇಲೆ ಬರಲಾಗದೆ, ಈಜು ಬಾರದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನೀವು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ.

ಶ್ರೀಮತಿ ಗಿರಿಜ

ದುಃಖತಪ್ತರು:

ಪ್ರಕಟಣೆ

ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಶ್ರೀ ಈಶ್ವರ ಕೃಷ್ಣಲಾಲ ಅಗರ್‌ವಾಲ್ ಬಿನ್ ಕೃಷ್ಣಲಾಲ ಅಗರ್‌ವಾಲ್, ವಯಸ್ಸು 65 ವರ್ಷ, ಮನೆ ನಂ.200. ಮೇನ್ ಬಜಾರ್, ದೇಹು ರಸ್ತೆ, ಪುಣೆ, ಮಹಾರಾಷ್ಟ್ರ –421101, ಇವರು ಮನೆ ನಂ.44, 1ನೇ ಮಹಡಿ, 20ನೇ ಮುಖ್ಯ ರಸ್ತೆ, ಬಿ ಬ್ಲಾಕ್, ವಿಜಯನಗರ, ಮೈಸೂರುನಲ್ಲಿ ವಾಸವಾಗಿರುವ ಎನ್ ಬಾಲಕೃಷ್ಣ ಹಾಗೂ ಇವರ ಮಕ್ಕಳಾದ ಕೀರ್ತನ ಎನ್.ಬಿ, ಹರ್ಷಿತಾ ಎನ್.ಬಿ. ಶ್ರೇಯಸ್ ಎನ್.ಬಿ ಇವರಿಂದ ಶುದ್ಧ ಕ್ರಯದ ಕರಾರು ಪಡೆಯುತ್ತಿದ್ದು, ಇದಕ್ಕೆ ಯಾರದಾದರೂ ತಕರಾರು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯ 1 ವಾರದ ಒಳಗೆ ತಕರಾರು ಸಲ್ಲಿಸ ತಕ್ಕದ್ದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರಿ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯದ ಕರಾರು ಹಾಗೂ ಶುದ್ಧ ಕ್ರಯಕ್ಕೆ ಪಡೆಯುತ್ತಾರೆಂಬುದಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಾತಗಳ್ಳಿ ಗ್ರಾಮದ ಸರ್ವೆ ನಂ.61/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 3 ಗುಂಟೆ ಪೈಕಿ 4 ಎಕರೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ ಸರ್ವೆ ನಂ.61 ಮತ್ತು 69: ಪಶ್ಚಿಮಕ್ಕೆ : ರಸ್ತೆ; ಉತ್ತರಕ್ಕೆ ಸರ್ವೆ ನಂ.47; ದಕ್ಷಿಣಕ್ಕೆ ಸರ್ವೆ ನಂ.60/2

ಸಹಿ/– ಪರಂಜ್ಯೋತಿ.ಬಿ.ಆರ್
ವಕೀಲರು, ನಂ.2802, 1ನೇ ಮಹಡಿ
ಜಯನಗರ, ಮೈಸೂರು. ನಂ.9980905232

PUBLIC NOTICE

Notice is hereby given that my client is intending to purchase the below mentioned MUDA Approved Residential Sites which is described hereunder from its Owner **Sri. Arjun Balasubramanyam son of K.N Balasubramanyam** residing at Old No. 593/3, New No 45, 11th Main, 13th Cross, Malleshwaram, Bengaluru 560003.

Any person/s having or claiming any right, title, estate or interest by way of inheritance, mortgage, sale, lease lien, charge, trust, maintenance, easement, transfer, license, possession, gift, encumbrance or in manner whatsoever are hereby required to give notice of the same to the undersigned in the address mentioned below within 7 days from the date of publication hereof together with the copies of all documents on the basis of which such claims are made, failing which any such right, title, interest or claim, will be deemed to have been waived and shall not be binding on my client and he will proceed to conclude the transaction of purchase without reference to the same if any.

SCHEDULE PROPERTY

Bearing site Nos. 95, 96, 97, 100, 101, 102, 103, 104, 105, 108, 109, 110, 113, 114, 115, 116, 117, 120, 121, 122, 123, 124, 125, 126, 128, 174, 175, 176, 177, 187, 239, 240, 241, 242, 248, 249, 255, 256, 257, 258, 261, 262, 263, 264, 265, 267, 268, 269, 303, 304, 305, 306, 307, 312, 317, 318, 319, 324, 325, 327, 328, 329, 330, 334, 335, 336, 337, 338 & 339 CARVED IN ALIENATED LAND BEARING SY NOS. 34/1, 35/1, 36, 39/2, 39/5 (OLD. SY. NO 39/2P), 41/1 (OLD.SY.NO 41) 42/1, SY. NO. 42), 45/1, 47/1, 47/2 & 47/3 Situated at ANAGALLI VILLAGE, BELGOLA HOBLI, SRIRANGAPATANA TALUK, MANDYA. DIST.

Sd/- Ravikiran, B.Sc., LL.B.
Advocate KAR 713/2000
1143/1E, 1st Floor, Chanakya Circle,
Geetha Road, Chamarajapuram,
Mysuru-04 **Mob : 99807 76068**
Date : 16.10.2025, Place : Mysuru

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಹೆಚ್.ನಾಗಲಿಂಗಪ್ಪ
ನಿವೃತ್ತ ಸಂಚಾರಿ ನಿಯಂತ್ರಕರು (KSRTC)

ದುಃಖತಪ್ತರು:
ಪತ್ನಿ ಜಿ. ವನಜಾಕ್ಷಮ್ಮ ಮತ್ತು ಕುಟುಂಬ ವರ್ಗದವರು



ಹಸಿರು ನಮ್ಮ ಉಸಿರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–1/ಪಿ.ಆರ್.90/2025–26 ದಿನಾಂಕ: 17.10.2025

"ಪತ್ರಿಕಾ ಪ್ರಕಟಣೆ"

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ ಎಸ್.ಶಿವಣ್ಣ, ಮನೆ ಸಂಖ್ಯೆ 2307, 7ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು ರವರಿಗೆ ಮೈಸೂರು ದಕ್ಷಿಣ, ಕೈಗಾರಿಕಾ ಬಡಾವಣೆ 2ನೇ ಹಂತದ ನಿವೇಶನ ಸಂಖ್ಯೆ–34/ಹೆಚ್ ಅಳತೆ 100X160 ಅಡಿಗಳ ನಿವೇಶನವು ದಿನಾಂಕ: 04.03.1971 ರಂದು ಮಂಜೂರಾಗಿದ್ದು, ದಿನಾಂಕ: 24.08.1974 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ ಎಸ್.ಶಿವಣ್ಣ ರವರು ಜೀವಿತಾವಧಿಯಲ್ಲಿ ತನ್ನ ಕಾಲದ ನಂತರ ಮೃತರ ಪತ್ನಿಯಾದ ಶ್ರೀಮತಿ ಚೆನ್ನಮ್ಮ ರವರಿಗೆ ಸದರಿ ಸ್ವತ್ತು ಸೇರತಕ್ಕದ್ದು ಇವರ ಕಾಲಾ ನಂತರ ಮಕ್ಕಳಾದ ಶ್ರೀ ಎಸ್.ಲೋಕೇಶ್ ಮತ್ತು ಶ್ರೀ ಎಸ್.ಹರೀಶ್ ರವರಿಗೆ ಸೇರತಕ್ಕದ್ದು ಎಂದು ದಿನಾಂಕ 21.09.1995 ರಂದು 4ನೇ ಪುಸ್ತಕದ III ನೇ ಸಂಪುಟದಲ್ಲಿ 24ನೇ ಪುಟ 130ನೇ ನಂಬರ್‌ನಲ್ಲಿ ನೋಂದಾಯಿತ ವಿಲ್ ಮಾಡಿರುತ್ತಾರೆ. ನಂತರ ಮಂಜೂರಾತಿದಾರರು ದಿನಾಂಕ 28.10.2012 ರಂದು ಮರಣ ಹೊಂದಿರುವುದರಿಂದ ಪತ್ನಿಯಾದ ಶ್ರೀಮತಿ ಚೆನ್ನಮ್ಮ ರವರು ದಿನಾಂಕ 31.07.2025 ರಂದು ಮೈಸೂರು ಮಹಾನಗರ ಪಾಲಿಕೆಯಲ್ಲಿ ಸದರಿ ಸ್ವತ್ತಿನ ವಾರ್ಷಿಕ ಕಂದಾಯವನ್ನು ನಿಗಧಿಪಡಿಸಿಕೊಂಡು, ಖಾತಾ ವರ್ಗಾವಣೆ ಮಾಡಿಸಿಕೊಂಡು ಇ–ಸ್ವತ್ತಿನ ಖಾತಾ ಪತ್ರವನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ಮೃತರ ಪತ್ನಿಯಾದ ಶ್ರೀಮತಿ ಚೆನ್ನಮ್ಮ ರವರು ನಿವೇಶನದ ವರ್ಗಾವಣೆ/ಕ್ರಯಪತ್ರವನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮೈಸೂರು ದಕ್ಷಿಣ, ಕೈಗಾರಿಕಾ ಬಡಾವಣೆ 2ನೇ ಹಂತದ ನಿವೇಶನ ಸಂಖ್ಯೆ–34/ಹೆಚ್ ಅಳತೆ 100X160 ಅಡಿಗಳ ನಿವೇಶನಕ್ಕೆ ಸಂಬಂಧಿಸಿದಂತೆ ಶ್ರೀಮತಿ ಚೆನ್ನಮ್ಮ ಕೋಂ ಲೇಟ್ ಎಸ್.ಶಿವಣ್ಣ, ವಾಸ ನಂ. 90, 6ನೇ ಕ್ರಾಸ್, ಟೆಂಪಲ್ ಬೆಲ್ ಲೇಔಟ್, ಶ್ರೀರಾಂಪುರ 2ನೇ ಹಂತ, ಮೈಸೂರು–570023 ರವರಿಗೆ ನಿವೇಶನವನ್ನು ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶಿಲ್ದಾರ
ವಲಯ ಕಛೇರಿ–1, ಮೈಸೂರು ಅಭಿವೃದ್ಧಿ ಪ್ರಾಧಿಕಾರ,
ಮೈಸೂರು



ಕರ್ನಾಟಕ ಸರ್ಕಾರ

ತಹಶೀಲ್ದಾರ್ ರವರ ಕಾರ್ಯಾಲಯ, ಮೈಸೂರು ತಾಲ್ಲೂಕು, ಮೈಸೂರು

ದೂರವಾಣಿ ಸಂಖ್ಯೆ: 0821–2414811, ಇ–ಮೇಲ್: tahsildarmysuru@karnataka.gov.in

ಸಂ: TAHMYS-TAX/MIS: 20/2025 ಇ–286915 ದಿ: 13.10.2025

ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ:ರೇರಾ/ಕಂದಾಯ/536/2020–21 ದಿನಾಂಕ: 16.02.2023 ರ ಪತ್ರದಲ್ಲಿ ಸೂಚಿಸಿರುವಂತೆ ಶ್ರೀ ಪಾಠಕ್ ಡೆವಲಪರ್ಸ್ ಪ್ರೈ.ಲಿ ರುಕ್ಮ ಕಾಂಪ್ಲೆಕ್ಸ್ ಕಾಳಿದಾಸ ರಸ್ತೆ, ಮೈಸೂರು ರವರಿಂದ ಬರಬೇಕಾದ ಹೂಡಿಕೆ ಬಾಕಿ ಮೊತ್ತಗಳನ್ನು ಹಿಂತಿರುಗಿಸದ ಕಾರಣ, ಸದರಿಯವರಿಗೆ ಸೇರಿದ ಈ ಕೆಳಕಂಡ ಸ್ಥಿರ ಆಸ್ತಿಯ ಬಹಿರಂಗ ಹರಾಜು ಪ್ರಕ್ರಿಯೆಯನ್ನು ದಿನಾಂಕ: 31.10.2025 ರಂದು ಬೆಳಿಗ್ಗೆ 11.00 ಗಂಟೆ ಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸದರಿ ಸ್ವತ್ತಿನ ಮುಂಭಾಗದಲ್ಲಿ ನಡೆಸಲಾಗುತ್ತಿದ್ದು, ಸದರಿ ಆಸ್ತಿಯ ಮೀಸಲು ಮೌಲ್ಯ ರೂ.1,73,00,000/– ಗಳಾಗಿದ್ದು ಸ್ವತ್ತಿನ ವಿವರ ಈ ಕೆಳಕಂಡಂತಿರುತ್ತದೆ. ಆಸಕ್ತರು ಸದರಿ ಸ್ಥಳದಲ್ಲಿಯೇ ಮುಂಗಡ ಹಣ (EMD) ಮೊತ್ತ ರೂ.1,73,000/–ಗಳನ್ನು TAHASHILDAR RENT ACCOUNT ರವರ ಹೆಸರಿನಲ್ಲಿ ಡಿಡಿ ಮೂಲಕ ನೀಡಿ, ನೋಂದಾಯಿಸಿಕೊಂಡು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಭಾಗವಹಿಸುವವರು ಆಧಾರ್ ಕಾರ್ಡ್ ಹಾಗೂ ಯಾವುದಾದರೂ ಒಂದು ಗುರುತಿನ ಚೀಟಿಯೊಂದಿಗೆ ಭಾಗವಹಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲ್ಲೂಕು ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಹರಾಜು ಮಾಡುವ ಷೆಡ್ಯೂಲ್ ಸ್ವತ್ತಿನ ವಿವರ

ಸ್ಥಳ	ಮೈಸೂರು	ಚೆಕ್ಕುಬಂದಿ				ಹಾಲಿ ಮಾಲೀಕರು	ಹರಾಜು ದಿನಾಂಕ
		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
ಮೈಸೂರು	House No: 2992/1, NEW NO 27/1, No.2992/1A, D-27/1A (SITE NO.1, BLOCK NO? 2-C) 3rd MAIN, V V MOHALLA, DEVARAJA MOHALLA, MYSURU-570002 ನಿವೇಶನ ಹಾಗೂ ಈ ಪ್ರದೇಶದಲ್ಲಿ ಒಳಗೊಂಡಿರುವ 1,200.00 Sqft ಮನೆ	Road	Door No. 2992	Door No. 2992/1	3rd Main Road	ಶ್ರೀಮತಿ ಪ್ರತೀಭಾ ಪಾಠಕ್	ದಿ: 31.10.2025 ರಂದು ಬೆಳಿಗ್ಗೆ 11.00 ಗಂಟೆಗೆ (ಸ್ವತ್ತಿನ ಮುಂಭಾಗ)

DIPR/DDMYS/1083/KSMCA/583/2025-26

ಸಹಿ/– ತಹಶೀಲ್ದಾರ್, ಮೈಸೂರು ತಾಲ್ಲೂಕು, ಮೈಸೂರು.